ಜನಶಕ್ತಿ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 22
ಮೇ 27, 2012

5/-



ಕರ್ನಾಟಕದಲ್ಲಿ ಭೂಸುಧಾರಣೆ

ನನಸಾಗದ ಭೂಮಿಯ ಕನಸು



ಭೂಮಾಲೀಕರು ಇನ್ನೂ ದೊಡ್ಡ ದೊಡ್ಡ ಹಿಡುವಳಿಗಳನ್ನು ಬೇನಾಮಿ ಹೆಸರಿನಲ್ಲಿ ಉಳಿಸಿಕೊಂಡಿದ್ದಾರೆ. ಇನ್ನೂ ಹೆಚ್ಚು ಸಮಗ್ರವಾದ, ಪ್ರಗತಿಪರವಾದ ಭೂಸುಧಾರಣೆಗಾಗಿ ಹೋರಾಟ ನಡೆಯಬೇಕು



ಭೂಮಿ ನಮ್ ಕೈನಲ್ಲಿ ಉಳ್ಕೊಂಡಿದ್ದು ಹೆಂಗೆ ? ಹಿಂಗೆ....!

ಬಡವರ ಪರವಾದ ಚಳುವಳಿ ಸೂಕ್ತವಾಗಿ ಮಧ್ಯಪ್ರವೇಶಿಸಿದರೆ ಕಿತ್ಕೊಳ್ಳೋ ಭೂಮಿನ ಉಳಿಸ್ಕೋಬಹುದು......

ಭಾರತೀಯ ಸಂಸತ್ತು-60



ನಿವಾರಿಸಿಕೊಳ್ಳಬೇಕಾದ ವಿರೋಧಾಭಾಸಗಳು

ಬಿಜೆಪಿ : ಕಿತ್ತಾಟದ ಕೆಸರಲ್ಲಿ ಕೊಳೆಯುತ್ತಿರುವ 'ಕಮಲ'



ಪಕ್ಷದ ಅನೈತಿಕತೆ, ಅಕ್ರಮಗಳನ್ನು ತಿದ್ದುವ ಬದಲು ತೇಪೆ ಹಾಕಿ ರಾಜಿ ಮಾಡಿಸಲು ಮುಂದಾಗುವ ಬಿಜೆಪಿ ಹೈಕಮಾಂಡ್ ದಿವಾಳಿಯೆದ್ದಿದೆ.....

ಶ್ರಮಜೀವಿಗಳ ಕ್ರಾಂತಿಯ ಧ್ವನಿ 'ಪ್ರಾವ್ದಾ' ಪತ್ರಿಕೆಗೆ ಶತಮಾನೋತ್ಸವ

ಭಾರತೀಯ ಸಂಸತ್ತು – 60

ನಿವಾರಿಸಿಕೊಳ್ಳಬೇಕಾದ ವಿರೋಧಾಭಾಸಗಳು

ಭಾರತದ ಸಂಸತ್ತಿನ 60ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ಸಿಪಿಐ (ಎಂ) ನಾಯಕರಾಗಿರುವ ಸೀತಾರಾಮ್ ಯೆಚುರಿ ಮಾಡಿದ ಭಾಷಣ

ಕನ್ನಡಕ್ಕೆ : ವಿಶ್ವ ಕುಂದಾಪುರ



ಸ್ವತಂತ್ರ ಭಾರತದ ಸಂಸತ್ತಿನ 60ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಸಂಸತ್ತಿನ ಗೌರವಾನ್ವಿತ ಸದಸ್ಯರು ಮತ್ತು ದೇಶದ ಎಲ್ಲಾ ಜನತೆಯ ಜತೆ ಕೈಜೋಡಿಸಲು ನನಗೆ ಹೆಮ್ಮೆಯೆನಿಸುತ್ತದೆ. ಈ ಷಷ್ಟಿಪೂರ್ತಿಯನ್ನು ದೇಶ ಆಚರಿಸುತ್ತಿರುವ ಸಂದರ್ಭದಲ್ಲಿ ಪ್ರಾಚೀನ ನಂಬಿಕೆಯೊಂದು ನನ್ನ ಮನಸ್ಸಿನಲ್ಲಿ ಸುಳಿಯುತ್ತಿದೆ. ಅದೇನೆಂದರೆ ಷಷ್ಟಿಪೂರ್ತಿ ಅಂದರೆ ಹೊಸಜೀವನದ ಆರಂಭ ಎಂದರ್ಥ. ಆದರೆ ಅದು 'ಉತ್ತಮ ಜೀವನ' ಎಂಬ ಭಾವವನ್ನು ಹೊಮ್ಮಿಸುವುದಿಲ್ಲ. ಸಂಸತ್ತು ಮತ್ತು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭವಿಷ್ಯಕ್ಕಾಗಿ ಉತ್ತಮಪಡಿಸುವುದು ಪ್ರಸ್ತುತ ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಕರ್ತವ್ಯವಾಗಿದೆ. ಅದಕ್ಕಾಗಿ ಕನಿಷ್ಠ ನಾಲ್ಕು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

ಈ ಅಂಶಗಳನ್ನು ಚರ್ಚಿಸುವ ಮುನ್ನ, ಬ್ರಿಟನ್‌ನ ಅಂದಿನ ಪ್ರಧಾನಿ ಸರ್ ಅಂತೋಣಿ ಏಡನ್ ಹೇಳಿದ್ದನ್ನು ನೆನಪಿಸಿಕೊಳ್ಳುವುದು ಅಗತ್ಯ. "ಸಮಯದ ಆರಂಭದಿಂದಲೂ ಸರಕಾರಗಳಲ್ಲಿ ಮಾಡಲಾದ ಪ್ರಯೋಗಗಳ ಪೈಕಿ ಭಾರತದಲ್ಲಿನ ಸಂಸದೀಯ ಸರಕಾರದ ಪ್ರಯೋಗದ ಸಾಹಸವೇ ಅತ್ಯಂತ ಉತ್ತೇಜದಾಯಕವಾದುದು ಎನ್ನುವುದು ನನ್ನ ನಂಬಿಕೆ.... ಭಾರತೀಯ ಸಾಹಸ ಬ್ರಿಟನ್‌ನಲ್ಲಿ ನಾವು ಆಚರಿಸುತ್ತಿರುವ ಪದ್ಧತಿಯ ಪೇಲವ ಅನುಕರಣೆ ಅಲ್ಲ, ಆದರೆ ನಾವು ಎಂದಿಗೂ ಕನಸಲ್ಲೂ ಕಾಣದಿದ್ದ ಪ್ರಯೋಗದ ಅಗಾಧ ಪ್ರಮಾಣದ ಪುನರ್ ಸೃಷ್ಟಿಯಾಗಿದೆ". ಬಹುಶಃ, ಈ ಆರು ದಶಕಗಳಲ್ಲಿ, ಆಂತರಿಕ ತುರ್ತುಪರಿಸ್ಥಿತಿ ಮತ್ತು ಬಾಬರಿ ಮಸೀದಿ ಧ್ವಂಸದ ಸವಾಲುಗಳನ್ನು ಎದುರಿಸಿಯೂ, ನಾವು ಈ ಪ್ರಕ್ರಿಯೆಯನ್ನು ಕ್ರೋಢೀಕರಿಸಿದ್ದೇವೆ ಮತ್ತು ಅದರ ಸತ್ವವನ್ನು ಸಿರಿವಂತಗೊಳಿಸಿದ್ದೇವೆ.

ಜನತೆಯ ಸಾರ್ವಭೌಮತ್ವದಲ್ಲಿ ನಮ್ಮ ಸಂವಿಧಾನದ ಕೇಂದ್ರ ಸಾರ ಅಡಗಿದೆ. ಶಾಸಕಾಂಗಗಳಿಗೆ (ಸಂಸತ್ತು / ರಾಜ್ಯ ವಿಧಾನಸಭೆಗಳಿಗೆ) ಆಯ್ಕೆಯಾಗುವವರು ಅದನ್ನು ಚಲಾಯಿಸುತ್ತಾರೆ. ಕಾರ್ಯಾಂಗ (ಅಂದರೆ ಸರಕಾರ) ಶಾಸಕಾಂಗಕ್ಕೆ ಉತ್ತರದಾಯಿಯಾಗಿದೆ, ಹಾಗೂ ಶಾಸಕಾಂಗವು ಜನತೆಗೆ ಉತ್ತರದಾಯಿಯಾಗಿದೆ.

ಈ ವ್ಯವಸ್ಥೆಯ ದಕ್ಷತೆಯು ಸಂಸತ್ತಿನ ಕಾರ್ಯಕಲಾಪಗಳ ಅವಧಿ ಮತ್ತು ಅದರ ಸುಗಮ ನಡವಳಿಕೆಯನ್ನು ಅವಲಂಬಿಸಿರುತ್ತದೆ. ಈ ವಿಚಾರದಲ್ಲಿ ಸರಿಪಡಿಸಿಕೊಳ್ಳಬೇಕಾದ್ದು ಬಹಳಷ್ಟಿದೆ. ಕಳೆದ ಎರಡು ದಶಕಗಳಲ್ಲಿ ಸಂಸತ್ತು ಒಂದು ವರ್ಷದ ಅವಧಿಯಲ್ಲಿ ಎಂದಿಗೂ ನೂರು ದಿನಗಳಿಗಿಂತ ಹೆಚ್ಚಿನ ದಿನದ ಕಲಾಪ ನಡೆಸಿದ್ದೇ ಇಲ್ಲ. 1992ರಲ್ಲಿ 98 ದಿನಗಳ ಬೈಠಕ್ ನಡೆಸಿದ್ದೇ ಅತಿ ಹೆಚ್ಚಿನ ದಿನದ ದಾಖಲೆ. 14ನೇ ಲೋಕಸಭೆಯಂತೂ ಸಂಸತ್ತಿನ ಇತಿಹಾಸದಲ್ಲೇ ಅತ್ಯಂತ ಕಡಿಮೆ ಬೈಠಕ್ ನಡೆಸಿದ ದಾಖಲೆ ಬರೆಯಿತು. 14ನೇ ಲೋಕಸಭೆ ಅವಧಿಯಲ್ಲಿ ಕೇವಲ 332 ಸಿಟ್ಟಿಂಗಗಳು, ಅಂದರೆ ವರ್ಷಕ್ಕೆ ಸರಾಸರಿ 66 ಸಿಟ್ಟಿಂಗ್‌ಗಳು ನಡೆದವು. ಈ ಅವಧಿಯಲ್ಲೂ ಶೇಕಡ 24ರಷ್ಟು ಸಮಯ ಅಡ್ಡಿಗಳು ಮತ್ತು ಮುಂದೂಡಿಕೆಗಳಲ್ಲಿ ವ್ಯರ್ಥವಾಯಿತು. ಇದಕ್ಕೆ ವ್ಯತಿರಿಕ್ತವಾಗಿ, ಬ್ರಿಟನ್ ಸಂಸತ್ತು ಸರಾಸರಿ ಏನಿಲ್ಲವೆಂದರೂ ವರ್ಷಕ್ಕೆ 160 ದಿನಗಳ ಸಿಟ್ಟಿಂಗ್ ನಡೆಸುತ್ತದೆ.

ಸಂಸತ್ತು ಹೆಚ್ಚು ಅವಧಿಯ ಕಲಾಪ ನಡೆಸದಿದ್ದರೆ ಸರಕಾರದ ಮೇಲೆ ಅದರ ಕಣ್ಗಾವಲು ಪರಿಣಾಮಕಾರಿಯಾಗಿರುವುದಿಲ್ಲ ಎನ್ನುವುದು ಸ್ಪಷ್ಟ. ಹೀಗಾಗಿ, ಕಾರ್ಯಾಂಗವು ಶಾಸಕಾಂಗಕ್ಕೆ ಉತ್ತರದಾಯಿಯಾಗುವ ಪ್ರಕ್ರಿಯೆ



ಬಲಿಪಶುವಾಗುತ್ತದೆ. ಇದು ನಮ್ಮ ಸಾಂವಿಧಾನಿಕ ಯೋಜನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಹಾಗೂ ಅದರ ಫಲವಾಗಿ ಅಧಿಕಾರಶಾಹಿ ಪ್ರವೃತ್ತಿ ಚಿಗಿತುಕೊಳ್ಳುತ್ತದೆ. ಈ ಸನ್ನಿವೇಶವನ್ನು ತಡೆಯಲೆಂದೇ ಸಂವಿಧಾನಕ್ಕೆ ತಿದ್ದುಪಡಿ ತಂದು ವರ್ಷಕ್ಕೆ ಕನಿಷ್ಠ 100 ದಿನಗಳ ಸಿಟ್ಟಿಂಗ್ ನಡೆಸುವುದನ್ನು ಕಡ್ಡಾಯಗೊಳಿಸಬೇಕು.

ಸಂವಿಧಾನ ಮತ್ತು ಕಾನೂನಿನ ವಿಶ್ಲೇಷಕ ಹಾಗೂ ನ್ಯಾಯಾಂಗ ಪರಿಶೀಲನೆ ಮತ್ತು ನ್ಯಾಯ ನೀಡಿಕೆ ಪ್ರಕ್ರಿಯೆ ಮೂಲಕ ನಾಗರಿಕರ ಹಕ್ಕುಗಳ ಸಂರಕ್ಷಣೆಯ ಹೊಣೆ ಹೊತ್ತ ನ್ಯಾಯಾಂಗದ ಪಾತ್ರದ ಬಗೆಗಿನದು ಎರಡನೇ ವಿಚಾರ. ದೇಶಾದ್ಯಂತ ಹೈಕೋರ್ಟ್ ಮತ್ತು ಅಧೀನ ನ್ಯಾಯಾಲಯಗಳಲ್ಲಿ 3.2 ಕೋಟಿ ಪ್ರಕರಣಗಳು ಬಾಕಿಯಿವೆ. ಅಂತೆಯೇ ಸುಪ್ರೀಂಕೋರ್ಟ್‌ನಲ್ಲಿ 56,383 ಪ್ರಕರಣಗಳು ಬಾಕಿಯಿವೆ ಎಂದು ಕಾನೂನು ಸಚಿವರು ನಮಗೆ ಕಳೆದ ಅಧಿವೇಶನದಲ್ಲಿ ತಿಳಿಸಿದ್ದಾರೆ. ಇಂಥ ವಿಳಂಬದಿಂದಾಗಿ, 2010ರ ಡಿಸೆಂಬರ್ ಹೊತ್ತಿಗೆ 3,50,003 ವಿಚಾರಣಾಧೀನ ಕೈದಿಗಳು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ವಿಳಂಬ ನ್ಯಾಯವು ನ್ಯಾಯದ ನಿರಾಕರಣೆಗೆ ಸಮನಾದುದು. ಹೀಗಾಗಿ ನ್ಯಾಯದಾನ ವ್ಯವಸ್ಥೆಯನ್ನು ತೀರಾ ತುರ್ತಾಗಿ ಸುಧಾರಿಸುವುದು ಅಗತ್ಯವಾಗಿದೆ. ಅಲ್ಲದೆ, ನ್ಯಾಯಾಂಗದ ಇತ್ತೀಚಿನ 'ಕ್ರಿಯಾಶೀಲತೆ'(ಆಕ್ಟಿವಿಸಮ್) ಪ್ರಜಾಪ್ರಭುತ್ವದ ಮೂರು ಅಂಗಗಳ ನಡುವಿನ ಚಿತ್ರವನ್ನು ಮಸುಕುಗೊಳಿಸಿದೆ ಎನ್ನುವುದನ್ನು ಇತ್ತೀಚಿನ ಉದಾಹರಣೆಗಳು ತೋರಿಸಿಕೊಟ್ಟಿವೆ. ನ್ಯಾಯಾಂಗವು ಕಾನೂನನ್ನು ವ್ಯಾಖ್ಯಾನಿಸಬಹುದೇ ಹೊರತು ಅದನ್ನು ರಚಿಸಲಾಗದು ಅಥವಾ ಸಾರ್ವಜನಿಕ ನೀತಿಗಳನ್ನು ನಿರ್ಧರಿಸಲಾಗದು. ಸಾಂವಿಧಾನಿಕ ಅಭಿಮತ ನ್ಯಾಯಾಂಗದ ಪರಿಶೀಲನೆಯ ಪರವಾಗಿದೆಯೇ ಹೊರತು ನ್ಯಾಯಾಂಗದ 'ಕ್ರಿಯಾಶೀಲತೆ' ಪರ ಅಲ್ಲ.

ಪ್ರಜಾಪ್ರಭುತ್ವದ ಮೂರೂ ಅಂಗಗಳು ಹಾಗೂ ನ್ಯಾಯವಾದಿಗಳ ಪ್ರತಿನಿಧಿಗಳನ್ನು ಒಳಗೊಂಡ ಒಂದು ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚಿಸುವುದನ್ನು ನಾವು ಗಂಭೀರವಾಗಿ ಪರಿಗಣಿಸುವ ಕಾಲ ಸನ್ನಿಹಿತವಾಗಿದೆ. ನ್ಯಾಯಾಧೀಶರ ನೇಮಕ ಮತ್ತು ವರ್ಗದಿಂದ ಹಿಡಿದು ಭ್ರಷ್ಟಾಚಾರದ ದೂರುಗಳ ಪರಿಶೀಲನೆ ಮತ್ತು ನ್ಯಾಯಾಂಗದ ಇತರೆ ದುರ್ನಡತೆಗಳ ಪರಿಶೀಲನೆ ಹಾಗೂ ನ್ಯಾಯಾಂಗದ ಹಕ್ಕುಬಾಧ್ಯತೆವರೆಗಿನ ವಿಚಾರಗಳನ್ನು ನಿಭಾಯಿಸಬಹುದಾಗಿದೆ.

ಮೂರನೆಯದಾಗಿ, ಭಾರತೀಯ ಪ್ರಜಾಪ್ರಭುತ್ವದ ಪಕ್ವತೆಯನ್ನು ಇನ್ನಷ್ಟು ಶ್ರೀಮಂತಗೊಳಿಸಲು ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ತರಬೇಕಾಗಿದೆ. 1952ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಗಳ ನಂತರದ ನಮ್ಮ ಇತಿಹಾಸದಲ್ಲಿ ಶೇಕಡ 50ರಷ್ಟು ಮತಗಳನ್ನು ಪಡೆದ ಸರಕಾರ ಒಮ್ಮೆಯೂ ರಚನೆಯಾಗಿಲ್ಲ ಎನ್ನುವುದನ್ನು ಪರಿಗಣಿಸೋಣ. ಕೇಂದ್ರದಲ್ಲಿ ಅಧಿಕಾರ ನಡೆಸಿದ ಎಲ್ಲಾ ಸರಕಾರಗಳಿಗೆ ವಿರುದ್ಧವಾಗಿ ಮತಕೊಟ್ಟ ಜನರೇ ಹೆಚ್ಚಿದ್ದರೇ ಹೊರತು ಅದಕ್ಕೆ ಬೆಂಬಲ ಕೊಟ್ಟವರು ಬಹುಸಂಖ್ಯೆಯಲ್ಲಿ ಇರಲಿಲ್ಲ. ಶೇಕಡ 50ಕ್ಕೆ ಅತಿ ಸಮೀಪ ಇದ್ದಿದ್ದೆಂದರೆ 1984ರಲ್ಲಿ 415 ಸೀಟುಗಳೊಂದಿಗೆ 48.1 ಶೇಕಡ ಮತಗಳನ್ನು ಹೊಂದಿದ್ದ ರಾಜೀವಗಾಂಧಿ ಸರಕಾರವೊಂದೇ! ಅತಿ ಕಡಿಮೆ ಮತಗಳನ್ನು ಹೊಂದಿದ್ದೆಂದರೆ 1998ರ ಎನ್.ಡಿ.ಎ. ಸರಕಾರ. ಈ ಮೈತ್ರಿಕೂಟದ ಪಕ್ಷಗಳು ಕೇವಲ 36.2 ಶೇಕಡ ಮತಗಳನ್ನು ಪಡೆದಿದ್ದವು. ಹೀಗಾಗಿ, ಬಹುಮತದ ಸರಕಾರವೆಂಬ ಪ್ರಜಾಪ್ರಭುತ್ವದ ತತ್ವವು ನಮ್ಮ ದೇಶದಲ್ಲಿ ಇನ್ನೂ ತನ್ನ ನೈಜ ಅರ್ಥದಲ್ಲಿ ಸಾಕಾರಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಪರಿಮಾಣಾತ್ಮಕ ಪ್ರಾತಿನಿಧ್ಯ ವ್ಯವಸ್ಥೆ (ರಾಜಕೀಯ ಪಕ್ಷಗಳು ಪಡೆಯುವ ಮತ ಪ್ರಮಾಣವನ್ನು ಆಧರಿಸಿ ಶಾಸನ ಸಭೆಗೆ ಪ್ರಾತಿನಿಧ್ಯ ನೀಡುವ ಪದ್ಧತಿ)ಬಗ್ಗೆ ಗಂಭೀರವಾಗಿ ಚಿಂತಿಸಲು ಇದು ಸಕಾಲವಾಗಿದೆ. ಈ ವ್ಯವಸ್ಥೆಯಲ್ಲಿ ಜನರು ಪಕ್ಷಗಳಿಗೆ ಮತ ನೀಡುತ್ತಾರೆ. ಆ ಪಕ್ಷಗಳು ತಮಗೆ ದೊರೆತ ಮತಗಳ ಪ್ರಮಾಣದ ಆಧಾರದಲ್ಲಿ ಮೊದಲೇ ನಿಗದಿಪಡಿಸಿದ ಸಂಖ್ಯೆಯ ಸಂಸತ್ ಸದಸ್ಯರನ್ನು ಆರಿಸುತ್ತವೆ. ಈ ರೀತಿಯಾಗಿ ಸಂಸತ್ತಿನಲ್ಲಿನ ಬಹುಸಂಖ್ಯಾತ ಸಂಸದರು ರಚಿಸುವ ಸರಕಾರವು ನಿಶ್ಚಯವಾಗಿಯೂ ಮತದಾರರು ವ್ಯಕ್ತಪಡಿಸಿದ್ದನ್ನೇ ಪ್ರತಿಬಿಂಬಿಸುತ್ತದೆ. ಸಂವಿಧಾನ ರಚನೆ ಸಭೆಯಲ್ಲಿ ಈ ವಿಚಾರವು ಗಂಭೀರ ಚರ್ಚೆಗೆ ಗುರಿಯಾಗಿತ್ತು. ಆದರೆ, ಅದು ತನ್ನ ವಿವೇಚನೆಯಿಂದ ಬ್ರಿಟಿಷರ 'ಫಸ್ಟ್ ಪಾಸ್ಟ್ ದ ಪೋಸ್ಟ್'(ಸ್ಪರ್ಧಿಗಳಲ್ಲಿ ಹೆಚ್ಚು ಮತ ಪಡೆದವರು ವಿಜಯಿಗಳಾಗುವ ಚುನಾವಣಾ ಕ್ರಮ) ನಿಯಮವನ್ನು ಅಂಗೀಕರಿಸಿತು. 1928ರ ಮೋತಿಲಾಲ್ ನೆಹರು ಸಮಿತಿಯು ಭಾರತದ ವೈವಿಧ್ಯವನ್ನು ಪ್ರತಿನಿಧಿಸಲು ಪ್ರಮಾಣಾತ್ಮಕ ಪ್ರಾತಿನಿಧ್ಯವೇ ಉತ್ತಮ ಉತ್ತರ ಎಂದು ಶಿಫಾರಸು ಮಾಡಿತ್ತು.

ಭಾರತದ ಪ್ರಸಕ್ತ ಸನ್ನಿವೇಶದಲ್ಲಿ ಪ್ರಮಾಣಾತ್ಮಕ ಪ್ರಾತಿನಿಧ್ಯ ಮತ್ತು ಈಗಿನ ಸ್ವರೂಪದ ಸಮ್ಮಿಶ್ರಣ ಒಂದು ಉತ್ತಮ ಮಾರ್ಗ ಎನ್ನಬಹುದು. ಉದಾಹರಣೆಗೆ, ಸಮೀಪದ ಎರಡು ಕ್ಷೇತ್ರಗಳನ್ನು ಒಂದುಗೂಡಿಸಿ ಎರಡು ಮತಗಳ ಕ್ಷೇತ್ರವಾಗಿ ಮಾಡಿ ವ್ಯಕ್ತಿಗತವಾಗಿ ಅಭ್ಯರ್ಥಿಗೂ ರಾಜಕೀಯ ಪಕ್ಷಕ್ಕೂ ಮತದಾನ ಮಾಡಲು ಅವಕಾಶ ನೀಡುವ ಮೂಲಕ ಇದನ್ನು ಸಾಧಿಸಬಹುದು.

ಈ ವ್ಯವಸ್ಥೆಯ ಇನ್ನೂ ಒಂದು ಅನುಕೂಲವೇನೆಂದರೆ, ಸಲ್ಲಿಸಲಾದ ಪಟ್ಟಿಯ

ಪುಟ 15 ಕ್ಕೆ

ಸಂಪಾದಕೀಯ

ಇನ್ನೂ ಅಧಿಕಾರದಲ್ಲಿ ಉಳಿದಿರುವುದೇ ನೈತಿಕ

ಸರ್ವ ಸಂವೇದನೆಗಳನ್ನು ಕಳೆದುಕೊಂಡು ಜನರ ಪಾಲಿಗೆ ಸತ್ತೇ ಹೋಗಿರುವ ಕರ್ನಾಟಕದಲ್ಲಿನ ಬಿಜೆಪಿ ಸರಕಾರ ಕೇವಲ ತಾಂತ್ರಿಕ ನೆಪಗಳಿಂದ ಇನ್ನೂ ಅಧಿಕಾರದಲ್ಲಿ ಉಳಿದುಕೊಂಡಿರುವುದು ವಿಪರ್ಯಾಸವಾಗಿದೆ. ಬರ ಬಿದ್ದು ಆರೆಂಟು ತಿಂಗಳಾದರೂ ಕಣ್ತೆರೆದು ನೋಡದ ಸರಕಾರ ಬರವೂ ಆಡಳಿತ ಪಕ್ಷದ ಆಂತರಿಕ ಬೇಗುದಿಗೆ ಆಹಾರವಾದಾಗ ದಡಬಡಾಯಿಸಿ ಸರ್ವಪಕ್ಷಗಳ ಸಭೆ ನಡೆಸಿ, ದೆಹಲಿಗೂ ನಿಯೋಗ ಹೋಗಿ ಬಂದವರೇ ಕೇಂದ್ರದ ಅದ್ಯಯನ ತಂಡ ರಾಜ್ಯಕ್ಕೆ ಬಂದಾಗ ಕನಿಷ್ಟ ಸಚಿವರಾರೂ ಚರ್ಚಿಸದೇ ಹೋದುದು ಜನರ ಜ್ವಲಂತ ಪ್ರಶ್ನೆಗಳ ಬಗೆಗಿನ ಕಡು ತಿರಸ್ಕಾರದ ನಿದರ್ಶನವಾಗಿದೆ. 123 ತಾಲೂಕುಗಳಲ್ಲಿನ ಜನರ ಬವಣೆಗಳ ಬಗ್ಗೆ ವಿವರಿಸಲು ಸಂಬಂಧಿಸಿದ ಸಚಿವರನ್ನಾಗಲೀ, ಶಾಸಕ ಮಹೋದಯರನ್ನಾಗಲೀ ಕಳುಹಿಸಿಕೊಡುವ ಸ್ಥಿತಿಯಲ್ಲಿ ಮುಖ್ಯಮಂತ್ರಿಗಳೇ ಇರಲಿಲ್ಲವೆಂದ ಮೇಲೆ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂಬುದನ್ನು ಅರಿಯಬಹುದು. ಬಿಜೆಪಿಯೊಳಗಿನ ಅಧಿಕಾರ ದಾಹದ ಕಿತ್ತಾಟದಲ್ಲಿ ಆಡಳಿತ ಪಕ್ಷ ವಿಭಜನೆಯಾಗಿ ಹನ್ನೊಂದು ಸಚಿವರೂ , ನಲವತ್ತು ಶಾಸಕರು ರಾಜೀನಾಮೆ ನೀಡಿ ಬಂಡಾಯವೆದ್ದ ಮೇಲೆ ಉಳಿದಿದ್ದಾದರೂ ಏನು ಎಂದು ಪ್ರಶ್ನಿಸಬೇಕಾಗುತ್ತದೆ. ಅಂದು ಇಂದು ವಸ್ತುಶಃ ಸಂವಿದಾನ ಬದ್ಧ ಸರಕಾರವೆಂಬುದೇ ಚಾಲನೆಯಲ್ಲಿ ಇಲ್ಲವೆಂಬಂತಾಗಿದೆ.

ಬಿಜೆಪಿ ಎಂದೋ ಹಲವು ಹೋಳುಗಳಾಗಿ ಒಡೆದು ಹೋಗಿದೆ. ಆ ಗುಂಪುಗಳು ಕಿತ್ತಾಡದ ದಿನವೇ ಇಲ್ಲವೆಂದಾಗಿದೆ. ಒಬ್ಬರು ಇನ್ನೊಬ್ಬರನ್ನು ಮುಗಿಸುವ ಮಸಲತ್ತುಗಳೇ ವಿಜೃಂಭಿಸುತ್ತಿವೆ. ಹೇಳುತ್ತಿದ್ದ ನೀತಿ, ನಿಯತ್ತು, ಮೌಲ್ಯಗಳು ದಿಕ್ಕೆಟ್ಟು ಹೋಗಿವೆ. ಅಧಿಕಾರ ಸಿಕ್ಕ ಮೇಲೆ ಅದರ ವಿಕೃತ ನಿಜ ಮುಖ ಬಟ್ಟಬಯಲಾಗಿದೆ. ದೇಶಪ್ರೇಮದ ಕಥೆ ಹೇಳುತ್ತಿದ್ದ ಕೇಶವ ಶಿಲ್ಪದ 'ಸಂಸ್ಕೃತಿ ರಕ್ಷಕ'ರೆಲ್ಲಾ ರಾಜ್ಯದ, ದೇಶದ ಸಂಪನ್ಮೂಲಗಳನ್ನು, ಜನತೆಯನ್ನು ಮನಸೋ ಇಚ್ಛೆ ಲೂಟಿ ಹೊಡೆಯಲು, ಹೊಡೆದದ್ದರಲ್ಲಿ ಪಾಲು ಹಂಚಿಕೊಂಡಿದ್ದಾರೆ. ಮತ್ತೂ ಹಂಚಿಕೊಳ್ಳುವುದಕ್ಕೆ ಮೇಲಿನಿಂದ ಕೆಳಗೆ ಸ್ಪರ್ದೆಗಿಳಿದಿದ್ದಾರೆ. ಸಂವಿಧಾನ, ಕಾನೂನುಗಳನ್ನು ಗಾಳಿಗೆ ತೂರಿ ಎಸಗಿದ ಅಕ್ರಮ, ಹಗರಣಗಳನ್ನು ಮುಚ್ಚಿ ಹಾಕಿಕೊಳ್ಳಲು ಹವಣಿಸುತ್ತಿದ್ದಾರೆ. ಇಂತಹ ರಾಜಕೀಯ ದುರಾಡಳಿತದಲ್ಲಿ ಕಾನೂನು ಬದ್ಧ ಆಡಳಿತವೆಂಬುದು ಇರಲಾದರೂ ಹೇಗೆ ಸಾಧ್ಯ ? ಒಟ್ಟಾರೆ ಕರ್ನಾಟಕವನ್ನೇ ನಾಶ ಮಾಡಿದ್ದಾರೆ.

ಈಗಲೂ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತವರ ಕುಟುಂಬದ ಸದಸ್ಯರು ಬಾಗಿಯಾದ ಸೌತ್ ವೆಸ್ಟ್ ಮೈನಿಂಗ್ ಅಕ್ರಮ ಗಣಿಗಾರಿಕೆ ಲಂಚ ಪ್ರಕರಣವನ್ನು ಸಿಬಿಐ ತನಿಖೆಗೊಪ್ಪಿಸಲು ಸುಪ್ರಿಂಕೋರ್ಟ್ ಆದೇಶಿಸಿದೆ, ಸಿಇಸಿ ನೀಡಿದ ಅಪಾರ ದಾಖಲೆಗಳನ್ನು ಪರಿಶೀಲಿಸಿಯೇ ಈ ಆದೇಶ ನೀಡಿದೆ ಎಂಬುದು ಗಮನಾರ್ಹ. ಇದು ಸ್ವಾಗತಾರ್ಹ. ಆ ಹಿನ್ನೆಲೆಯಲ್ಲಿ ಹೆಚ್ಚಿನ ತನಿಖೆಗಾಗಿ, ಆರೋಪಿ ಪ್ರಬಲಸಾಗಿರುವುದರಿಂದ ಸಾಕ್ಷಿಗಳನ್ನು ನಾಶಪಡಿಸಬಾರದೆಂಬ ಉದ್ದೇಶಕ್ಕಾಗಿ ಮಾಜಿ ಮುಖ್ಯಮಂತ್ರಿಯನ್ನು ಬಂಧಿಸುವುದು ಬಹುತೇಕ ನಿಶ್ಚಯ. ಅಂದರೆ ಬಿಜೆಪಿ ಸರಕಾರದ ಕಾಲಾವಧಿಯಲ್ಲೇ ಈ ಅಕ್ರಮಗಳನ್ನು ಎಸಗಲಾಗಿದೆ, ಮು.ಮಂತ್ರಿಯೇ ನೇರ ಬಾಗಿಯಾಗಿರುವುದು ನಿಚ್ಚಳ. ಈ ಹಿಂದೆ ಯಡಿಯೂರಪ್ಪ ಗಣಿ, ಭೂ ಅಕ್ರಮಗಳ ಇನ್ನಿತರೆ ಅಕ್ರಮಗಳಿಂದಾಗಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟಾಗಲೂ, ನಂತರವೂ ಅವರು ತಪ್ಪೇ ಎಸಗಿಲ್ಲವೆಂದು ಮುಖ್ಯಮಂತ್ರಿ, ನಾಯಕರಾದಿಯಾಗಿ ಸಮರ್ಥಿಸಿಕೊಂಡೇ ಬಂದಿದ್ದಾರೆ. ಆದರೆ ಕೋರ್ಟ್, ಸಿಬಿಐ ನ ಈ ಕ್ರಮಗಳು ಇಡೀ ಪಕ್ಷ ಹಾಗೂ ಸರಕಾರವನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಿದೆ. ಅಲ್ಲದೇ ಇಂತಹ ಸರಕಾರ ತನ್ನ ಅಧಿಕಾರವನ್ನು ದುರುಪಯೋಗ ಮಾಡಿ ದಾಖಲೆಗಳನ್ನು ನಾಶಪಡಿಸಲಾರದು ಎಂದು ಭಾವಿಸಲು ಸಾಧ್ಯವಿಲ್ಲ. ಯಾಕೆಂದರೆ ಹಗರಣಗಳ ತನಿಖೆಯೇ ಆಗದಂತೆ ಲೋಕಾಯುಕ್ತ ಸಂಸ್ಥೆಯನ್ನೆ ನಾಶಗೊಳಿಸಲು ಮುಂದಾದ ನೀಚತನ ಜಗಜ್ಜಾರಾಗಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಸದಾನಂದಗೌಡರ ನೇತೃತ್ವದ ಬಿಜೆಪಿ ಸರಕಾರ ರಾಜೀನಾಮೆ ಕೊಟ್ಟು ತೊಲಗಬೇಕು. ಹೊಸ ಜನಾದೇಶಕ್ಕೆ ಹೋಗಬೇಕು.

ಬಿಜೆಪಿಯೊಳಗಿನ ಕಿತ್ತಾಟ: ಮುಂದಕ್ಕೆ, ಇನ್ನಷ್ಟೂ ಮುಂದಕ್ಕೆ..!

'ತನ್ನನ್ನು, ತನ್ನ ಶಕ್ತಿಯನ್ನು ನಿರ್ಲಕ್ಷಿಸುವಿರಾದರೆ ತಕ್ಕ ಪಾಠ ಕಲಿಸದೇ .ಬಿಡುವುದಿಲ್ಲ' ಎಂದು ಹೂಂಕರಿಸುತ್ತಿದ್ದ ಯಡಿಯೂರಪ್ಪ ಇದೀಗ ಮೆತ್ತಗಾಗಿದ್ದಾರೆ. ಅದರರ್ಥ ಆಕ್ರೋಶ ಕಡಿಮೆಯಾಗಿದೆ ಎಂದಲ್ಲ, ಆದರೆ ಅದರೊಟ್ಟಿಗೆ 'ಹತಾಶೆಯೂ ಕಾಡುತ್ತಿದೆ.

ಬಾಗಿದ ಬಂಡಾಯ!

ಸಚಿವ ಸಂಪುಟದ ಪುನರಾಚನೆ, ವಿಸ್ತರಣೆಯ ಪ್ರಯತ್ನದ ಹಿನ್ನೆಲೆಯಲ್ಲಿ ಯಡಿಯೂರಪ್ಪನವರ ಬಣದಲ್ಲಿ ಅತಿ ನಿಕಟವಾಗಿದ್ದ ಆರು ಸಚಿವರ ಮೇಲೆ ಹೈಕಮಾಂಡ್‌ಗೆ ದೂರು ರೂಪದ ಪತ್ರವನ್ನು ಬರೆದಿದ್ದ ಮುಖ್ಯಮಂತ್ರಿ ಸದಾನಂದಗೌಡರ ವಿರುದ್ಧ ಕೆಂಡಮಂಡಲವಾಗಿದ್ದರಲ್ಲ. ಆ ಆರು ಸಚಿವರನ್ನು ಕೈಬಿಟ್ಟು ಇನ್ನಷ್ಟು ಹೊಸಬರನ್ನು ಸೇರಿಸಿಕೊಂಡು ತಮ್ಮ ಬಲ ಕ್ರೋಢೀಕರಿಸಲು ಸದಾನಂದಗೌಡ-ಅನಂತ್‌ಕುಮಾರ್ ಗುಂಪು ಪ್ರಯತ್ನಿಸಿದಾಗ ವಾಕ್ಸಮರ, ಒತ್ತಡಗಳು ಹೆಚ್ಚುತ್ತಲೇ ನಡೆದವು. ಸಿಬಿಐ ತನಿಖೆಗೆ ಸುಪ್ರಿಂ ಕೋರ್ಟ್ ಆದೇಶಿಸಿದರೆ ತಾನು ಜೈಲು ಪಾಲಾಗಬೇಕಾಗಿ ಬಂದರೆ ತನ್ನ ಹಾಗೂ ತನ್ನ ಬೆಂಬಲಿಗರನ್ನೂ ಮೂಲೆ ಗುಂಪಾಗಿಸಿ ಶಕ್ತಿಹೀನನನ್ನಾಗಿಸಬಹುದೆಂಬ ಆತಂಕ ಕಾಡಿದ್ದ ಯಡಿಯೂರಪ್ಪ ಬಹಿರಂಗ ಬಂಡಾಯದ ಬೆದರಿಕೆಗೆ ಇಳಿದಿದ್ದರು. ಅದಕ್ಕೆಂದೇ ತನ್ನನ್ನು ಬೆಂಬಲಿಸುವ 11 ಸಚಿವರು, 40 ಶಾಸಕರ ರಾಜೀನಾಮೆ ಪತ್ರಗಳನ್ನೂ ಜೊತೆಗಿಟ್ಟುಕೊಂಡು ಹೈಕಮಾಂಡ್-ಲೋಕಮಾಂಡ್‌ನೊಂದಿಗೆ ಜಿದ್ದಾಜಿದ್ದಿಗೆ ಇಳಿದಿದ್ದರು. ಅದು ಈ ವಾರದ ಆರಂಭದಲ್ಲಿ ಹೊಸ ರಂಗು ಪಡೆಯಿತು. ಕದನ ಬಿರುಸಾಯಿತು. ಇನ್ನೇನು ಅವರ ಗುಂಪು ಬಿಜೆಪಿಯನ್ನು ತೊರೆಯಲಿದೆಯೆಂದೂ, ಹೊಸ ಪಕ್ಷ ಕಟ್ಟುವರೆಂದೂ ಅದರ ಪ್ರಕಟನೆಯ ಸಮಯವೂ ನಿಗದಿಯಾಯಿತು. ಆದರೆ ಕೊನೆ ಗಳಿಗೆಯಲ್ಲಿ ಅದು ನಡೆಯಲಿಲ್ಲ. ಹೈಕಮಾಂಡ್‌ನ 'ಕಿವಿಮಾತಿಗೆ', ಕೊಟ್ಟ 'ಭರವಸೆಗೆ' ಯಡಿಯೂರಪ್ಪ 'ತಲೆಬಾಗಿ' ಇಲ್ಲೇ ಉಳಿಯಲು ನಿರ್ಧರಿಸಿದರಂತೆ!



ಕುಗ್ಗದ ಸದಾನಂದ!!


ಇರಬಹುದು. ಹೈಕಮಾಂಡ್‌ನಿಂದ ಕೆಲ ಭರವಸೆಗಳೂ ಬಂದಿರಬಹುದು. ಸಿಬಿಐ ಕೇಸ್ ಎದುರಿಸುವಾಗ ನಾವೂ ನಿಮ್ಮೊಂದಿಗೆ ಇದ್ದೇವೆಂಬ, ಹಾಲಿ ಸಚಿವರನ್ನು ಉಳಿಸಿಕೊಳ್ಳುವ ಭರವಸೆಗಳೂ ಸಿಕ್ಕಿರಬಹುದು. ಆದರೆ ಇದೆಲ್ಲಕ್ಕಿಂತಲೂ ಯಡಿಯೂರಪ್ಪ ಹಿಂದೆ ಸರಿಯುವುದರಲ್ಲಿ ತನಗಿದ್ದ ಶಾಸಕರ ಬೆಂಬಲ ಕುಸಿತ ಕಂಡಿದ್ದೇ ಪ್ರಮುಖ ಅಂಶವಾಗಿದೆ.. ಬಜೆಟ್ ಸಂದರ್ಭದಲ್ಲಿ ರೆಸಾರ್ಟ್ ಸೇರಿದ್ದಾಗ 80 ಜನ , ಈಗಿದ್ದ 40 ಜನ, ಹೊಸ ಪಕ್ಷವೆಂದಾಗ 20 ಜನ... ಪಕ್ಷವನ್ನು ಘೋಷಿಸಿಯೇ ಬಿಟ್ಟರೆ ಇನ್ನೆಷ್ಟು ಜನ ಉಳಿದಾರು?. ಅದೂ ಪ್ರತಿಯೊಬ್ಬರೂ ಅಧಿಕಾರದ ಕೊನೆ ನಿಮಿಷ ಅನುಭವಿಸುವ ತಹ ತಹದಲ್ಲಿರುವಾಗ! ಇದು ಕಾಡಿದ ಪ್ರಶ್ನೆ! ಹೈಕಮಾಂಡ್‌ನ ಕಿವಿಮಾತಿಗೆ ತಲೆ ಬಾಗಿದ್ದು ಹೀಗೇ ಇರಬಹುದು!. ಇದು ಅವರೆಲ್ಲರಿಗೂ ಗೊತ್ತು. ಹಾಗಾಗಿಯೇ ಸದಾನಂದಗೌಡ ಆನಂದವನ್ನು ಕಳೆದುಕೊಂಡಿರಲಿಲ್ಲ.

ಕಿಡಿ, ಕಿಡಿ

ಬಿಜೆಪಿಯ ಗುಂಪುಗಳೊಳಗಿನ ಕಿತ್ತಾಟ, ಬ್ಲಾಕ್ ಮೇಲ್‌ಗಳು, ಗುಂಪುಗಾರಿಕೆ, ಅಧಿಕಾರ ಆಮಿಷ ಇತ್ಯಾದಿ ಬಲ್ಲವರಿಗೆ ಈ ಬೆಳವಣಿಗೆ ಅನಿರೀಕ್ಷಿತವೇನಲ್ಲ. ಯಡಿಯೂರಪ್ಪ ಈ ಪ್ರಸಂಗದಲ್ಲಿ ಒಂದು ಹೆಜ್ಜೆ ಹಿಂದೆ ಇಟ್ಟಿರಬಹುದು. ಆದರೆ ಈ ಪ್ರಸಂಗವಂತೂ ಖಂಡಿತ ಬಿಜೆಪಿಯೊಳಗಿನ ಗುಂಪುಗಾರಿಕೆ ಕಿತ್ತಾಟವನ್ನೂ ಇನ್ನೊಂದಿಷ್ಟು ಮುಂದಕ್ಕೆ ಹೋಗಿದೆ. ಯಡಿಯೂರಪ್ಪ, ಅನಂತ್‌ಕುಮಾರ್, ಸದಾನಂದಗೌಡರ ಬಣಗಳು ಮತ್ತಷ್ಟು ದೂರಸರಿದಿವೆ, ಆಕ್ರೋಶ ಹೆಚ್ಚಾಗಿದೆ. ತಮ್ಮ

ಪುಟ 12 ಕ್ಕೆ

ಕಾರ್ಟೂನ್ ಕಾರ್ನರ್



ಬಿಜಾಪುರ: ಭೂ ಹೋರಾಟದ ಜಾಗೃತಿ ಜಾಥಾ

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಜಂಟಿಯಾಗಿ ನಡೆಸಿರುವ ಭೂಮಿಗಾಗಿ, ಮನೆ ನಿವೇಶನಕ್ಕಾಗಿ ಜನಜಾಗೃತಿ ಜಾಥಾದ ಮುಕ್ತಾಯ ಸಮಾರಂಭವು ವಿಜಾಪುರ ನಗರದ ಕೋರಿ ಚೌಕ್‌ನಲ್ಲಿ ನಡೆಯಿತು. ಪ್ರಚಾರ ಜಾಥಾವು ಗದಗ, ಧಾರವಾಡ & ಬೆಳಗಾಂವ ಜಿಲ್ಲೆಗಳಲ್ಲಿ ಪ್ರಚಾರ ಮಾಡಿ ವಿಜಾಪುರದ 5 ತಾಲೂಕುಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸಿ ಬಿಜಾಪುರ ತಲುಪಿತು.

ಜಾಗೃತಿ ಜಾಥಾದ ಸಂಚಾಲಕರಾದ ಬಿ.ಎಸ್. ಸೊಪ್ಪಿನ ಅವರು ಮಾತನಾಡಿ ಭೂಮಿ ಹಂಚಿಕೆಯಲ್ಲಿ ರಾಜ್ಯದಲ್ಲಿ ಅಸಮಾನತೆ ಇರುವುದನ್ನು ವಿವರಿಸಿ ಅಂಕಿ-ಸಂಖ್ಯೆಯಲ್ಲಿ 56 ಲಕ್ಷ ರೈತರ ಬಳಿ 36% ಭೂಮಿ ಇದೆ. ಅದೇ ರೀತಿ 6 ಲಕ್ಷ ಜನ ರೈತರಲ್ಲಿ 36% ಭೂಮಿ ಇರುತ್ತದೆ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಧ್ಯಕ್ಷರಾದ ಕಾ॥ ನಿತ್ಯಾನಂದ ಸ್ವಾಮಿ ಮಾತನಾಡುತ್ತಾ ಮನೆ ನಿವೇಶನ ಪ್ರತಿಯೊಬ್ಬ ಮನುಷ್ಯನ ಅಗತ್ಯತೆ ಇದ್ದು, ಅಧಿಕಾರದಲ್ಲಿರುವವರಿಗೆ ಎಷ್ಟು ಜನರಿಗೆ ಮನೆಗಳು ಇಲ್ಲ ಎನ್ನುವ ಲೆಕ್ಕವಿಲ್ಲ, ಆದರೆ ಇವರು ಅರಣ್ಯದಲ್ಲಿರುವ ಕಾಡುಪ್ರಾಣಿಗಳ ಲೆಕ್ಕಗಳನ್ನು ಮಾತ್ರ ಇಟ್ಟಿರುತ್ತಾರೆ. ಮತ್ತು ಕೊಡುತ್ತಾರೆ. ಆದರೆ, ಅದೇ ರಾಜ್ಯದಲ್ಲಿ ಮನುಷ್ಯರನ್ನು ಕೀಳಾಗಿ ಕಾಣಲಾಗುತ್ತಿದೆ. ಅನೇಕ ಜನರು ಭೂಮಿಯನ್ನು ನುಂಗಿ ಜೈಲಿಗೆ ಹೋಗಿದ್ದಾರೆ, ಇನ್ನೂ ಹೋಗುವವರೂ ಇದ್ದಾರೆ. ಅರಣ್ಯ ಭೂಮಿ ಸಾಗುವಳಿ ಮಾಡುವ ರೈತರನ್ನು ಸರ್ಕಾರ ಗಿಡ ನೆಡುವ ನೆಪದಲ್ಲಿ ಅವರನ್ನು ಒಕ್ಕಲೆಬ್ಬಿಸುತ್ತಿದೆ ಇದನ್ನು ನಿಲ್ಲಿಸಬೇಕು.

ಭೂಮಿಗಾಗಿ ಹಾಗೂ ನಿವೇಶನಕ್ಕಾಗಿ ಹಲವಾರು ಬಾರಿ ಸರ್ಕಾರಕ್ಕೆ ಅರ್ಜಿ ಹಾಕಿದ್ದರೂ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳುವ ಕಾರ್ಯದಲ್ಲಿಯೇ ಮಗ್ನರಾಗಿದ್ದಾರೆ. ಅವರನ್ನು ಎಚ್ಚರಿಸಲು ಮೇ 21, 2012 ರಂದು ಆರಂಭವಾಗುವ ವ



'ಮಹಾಧರಣಿ' ಗೆ ಎಲ್ಲರೂ ಸಜ್ಜಾಗಬೇಕು. ಬೇಡಿಕೆ ಈಡೇರುವವರೆಗೂ ಧರಣಿ ಹಿಂತೆಗೆದುಕೊಳ್ಳಬಾರದು ಎಂದು ಕರೆ ನೀಡಿದರು. ಸಭೆಯ ಅಧ್ಯಕ್ಷತೆ ವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಭೀಮಶಿ ಕಲಾದಗಿ ಮಾತನಾಡಿ ವಿಜಾಪುರ ಜಿಲ್ಲೆಯನ್ನು ಸಂಪೂರ್ಣ ನೀರಾವ ಗೊಳಪಡಿಸಬೇಕು, ಇದರಿಂದ ರೈತರು ಹಾಗ ಕೃಷಿ ಕೂಲಿ ಕಾರ್ಮಿಕರು ಗುಳೇ ಹೋಗುವ ಹಾಗೂ ಆತ್ಮಹತ್ಯೆಯಂತಹ ಕೃತ್ಯ ಇಳಿಯುವುದು ತಪ್ಪುತ್ತದೆ ಎಂದು ಹೇಳಿದರು ಮತ್ತು ಎಲ್ಲ ರೈತ ವರ್ಗದ ದನಕರುಗಳನ್ನು ಗೋಶಾಲೆಯಲ್ಲಿ ಸೇರಿಸಿಕೊಳ್ಳಬೇಕು, ಇದರ ತಾರತಮ್ಯ ಸರಿಯಲ್ಲ ಎಂದರು ಅಣ್ಣರಾಯ ಈಳಗೇ ಪ್ರಾಸ್ತಾವಿಕವಾಗಿ ಮಾತನಾಡಿದರು ವೇದಿಕೆಯಲ್ಲಿ ಎಸ್.ಬಿ. ಹ ಎ.ಎಚ್. ಹೊನ್ನುಟಗಿ, ಜಿ.ಎಚ್ ಇಂಗಳಗಿ, ಸಚಿನ್ ತಳಕೇರಿ ಎಸ್.ಎಂ. ರಾಠೋಡ, ಸುರೇಖಾ ರಜಪೂತ, ಸಿದ್ದರಾಯ ಬಂಗಾರಿ ರಾಕೇಶ, ಲಕ್ಷ್ಮಣ ಹಂದ್ರಾಳ ಸುನಂದಾ ನಾಯಕ, ಮುಂತಾದವರು ಭಾಗವಹಿಸಿದ್ದರು. ಕೊನೆಯಲ್ಲಿ ಸೋಮಪ್ಪ ಆಯಟ್ಟಿ ವಂದಾನಾರ್ಪಣೆ ಮಾಡಿದರು.

ವರದಿ : ಸೋಮಪ್ಪ ಆಯಟ್ಟಿ

ಕೊಪ್ಪಳ ನಿವೇಶನ ಹೋರಾಟ: ಜಿಲ್ಲಾಡಳಿತ ಕಚೇರಿಯ ಮುಂದೆ ಅಹೋರಾತ್ರಿ ಧರಣ; ಲಿಖಿತ ಭರವಸೆ

ಕೊಪ್ಪಳದ ಸ್ಲಂ ಪ್ರದೇಶಗಳಲ್ಲಿ ವಾಸ ಮಾಡುವ ಬಡಜನರು ಹಲವಾರು ವರ್ಷಗಳಿಂದಲೂ ತಮಗೊಂದು ಸೂರು ಕಲ್ಪಿಸಿಕೊಡಿ ಎಂದು ಜಿಲ್ಲಾಡಳಿತವನ್ನು ಒತ್ತಾಯ ಮಾಡುತ್ತಾ ಬಂದಿದ್ದರೂ ಸರ್ಕಾರ , ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿರಲಿಲ್ಲ. ಈ ಭಾಗದ ಜನಪ್ರತಿನಿಧಿಗಳೂ ಕೂಡ ಈ ಬಗೆಗೆ ಅಗತ್ಯವಾದ ಗಮನ ನೀಡಿರಲಿಲ್ಲ. ಇದೀಗ ಡಿವೈಎಫ್ಐ ಸಂಘಟನೆ ಈ ಬಡವರ ಬದುಕಿನ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ. ಕೊಪ್ಪಳದ ನೂರಾರು ಮಹಿಳೆಯರು, ಬಡವರು ತಮ್ಮ ಪುಟ್ಟ ಮಕ್ಕಳೊಂದಿಗೆ ಮೇ 3 2012 ರಂದು ಕೊಪ್ಪಳ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಅಹೋ ರಾತ್ರಿ ಧರಣಿ ಆರಂಭಿಸಿಯೇ ಬಿಟ್ಟರು. ಜಿಲ್ಲಾಧಿಕಾರಿಗಳ ಕಚೇರಿ ಒಳ ಪ್ರಾಂಗಣದಲ್ಲಿಯೇ ತಮ್ಮ ಮಕ್ಕಳೊಂದಿಗೆ ಧರಣಿ ಕುಳಿತು ದೃಢತೆ ತೋರಿದರು, ಇದೇ ಕಚೇರಿ ಆವರಣದಲ್ಲೇ ಅಡುಗೆ ತಯಾರಿ ಅಲ್ಲಿಯೇ ಊಟ. ರಾತ್ರಿ ಮಕ್ಕಳು ಮರಿಗಳೊಂದಿಗೆ ಅಲ್ಲೇ ನಿದ್ರೆ, ಮೇ 4, 2012 ಎಂದು ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಿ ತೀವ್ರವಾಗಿ ಪ್ರತಿಭಟಿಸಿದರು. ಕೊಪ್ಪಳ ನಗರ ಹಾಗೂ ಭಾಗ್ಯನಗರ ಗ್ರಾಮದಲ್ಲಿ ನೂರಾರು ಫಲಾನುಭವಿಗಳು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ತಾಲ್ಲೂಕಿಗೆ 5 ಸಾವಿರಕ್ಕೂ ಹೆಚ್ಚು ಆಶ್ರಯ ಮನೆ ಹಂಚಿಕೆಯಾಗಿದ್ದರೂ ಅರ್ಹರಿಗೆ ವಿತರಿಸುವಲ್ಲಿ ಜಿಲ್ಲಾಡಳಿತ ಹಾಗೂ ನಗರಸಭೆ ವಿಫಲವಾಗಿದೆ. 10 ವರ್ಷಗಳಿಂದಲೂ ಹೋರಾಟ ಮಾಡಿ



ಮನವಿ ಸಲ್ಲಿಸುತ್ತ ಬಂದರೂ ಕೂಡ ಬಡವರಿಗೆ ಸೂರು ದಕ್ಕಲಿಲ್ಲ. ತಲೆಯ ಮೇಲೊಂದು ಸೂರು ಇಲ್ಲದೆ ಕೆರಳಿ ಕೆಂಡಾಮಂಡಲವಾಗಿದ್ದ ನೂರಾರು ಮಹಿಳೆಯರನ್ನು ಕಂಡು ಜಿಲ್ಲಾಧಿಕಾರಿಗಳು ತಮ್ಮ ಕಚೇರಿಗೆ ಬಾರದೇ ಬೇರೆ ಕಡೆ ಪ್ರಯಾಣ ಬೆಳೆಸಿದರು. ಇದರಿಂದ ಆಕ್ರೋಶಗೊಂಡ ಧರಣಿ ನಿರತ ಮಹಿಳೆಯರು ಜಿಲ್ಲಾಧಿಕಾರಿಗಳು ಇಲ್ಲಿಗೆ ಬರುವ ತನಕ ಹೋರಾಟ ಹಿಂತೆಗೆದುಕೊಳ್ಳುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತರು. ಪ್ರತಿಭಟನೆಯ ಫಲಶೃತಿಯಾಗಿ ಸ್ಥಳಕ್ಕೆ ಆಗಮಿಸಿದ ನಗರಸಭೆ ಪೌರಾಯುಕ್ತ ಬಿ.ಎಂ. ಅಶ್ವಿನಿ ಮಾತನಾಡಿ, "ಈಗಾಗಲೇ ವಸತಿ ಹೀನರಿಗಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಅಲ್ಲದೆ ಭೂಮಿ ಸರ್ವೆ ಕಾರ್ಯ ಮುಕ್ತಾಯ ಹಂತದಲ್ಲಿದ್ದು, ಈ ವರ್ಷದಲ್ಲಿ ಹಂಚಿಕೆಯಾಗುವ ಆಶ್ರಯ ಮನೆ ಹಾಗೂ ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲಾಗುವುದು, ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಇನ್ನೂ ಸುಮಾರು 20 ದಿನದಲ್ಲಿ ಸಮಸ್ಯೆ ಪರಿಹರಿಸಲಾಗುವುದು" ಎಂಬ ಅಧಿಕೃತ ಮಾಹಿತಿ ನೀಡಿದರು.

ಆದರೆ ಪ್ರತಿಭಟನಾಕಾರರು ಭರವಸೆಯನ್ನು ಲಿಖಿತವಾಗಿ ನೀಡಬೇಕೆಂದು ಪಟ್ಟು ಹಿಡಿದರು. ಧರಣ ನಡೆಯುತ್ತಿರುವಾಗಲೇ ನಿವೇಶನ ರಹಿತರು ಮತ್ತು ಸಂಘಟನೆಯ ಮುಖಂಡರುಗಳೊಂದಿಗೆ ಪೌರಾಡಳಿತ ಮಾತುಕತೆ ನಡೆಸಿತು.

ಮಾತುಕತೆಯ ವೇಳೆ ಕೊಪ್ಪಳ ನಗರ ಸಭೆ ವ್ಯಾಪ್ತಿಯ ಕಿನ್ನಾಳ ರಸ್ತೆ, ವಿಜಯ ನಗರ ಬಡಾವಣೆ ಬೇಲ್ದಾರ್ ಕಾಲೋನಿ, ಗಾಂಧಿನಗರ ಮತ್ತು ಸಿದ್ದೇಶ್ವರ ಕಾಲೋನಿಯ ವಸತಿ ಹೀನರಾದ 638 ಕುಟುಂಬಗಳ ಒಂದು ಪ ಮತ್ತು 468 ಕುಟುಂಬಳಗಳ ಎರಡನೆ ಪಟ್ಟಿಯ ಕಡುಬಡವರಿಗೆ ನಿವೇಶನ ನೀಡಬೇಕೆಂದು ಒತ್ತಾಯಿಸಲಾಯಿತು. 638 ಕುಟುಂಬಗ ಮೊದಲ ಪಟ್ಟಿಯನ್ನು 20 ದಿನಗಳೊಳ ಪರಿಶೀಲಿಸಿ ಅರ್ಹರನ್ನು ಗುರುತಿ ಕ್ರಮವಹಿಸಲಾಗುವುದು 438 ಕುಟುಂಬಗ ಎರಡನೇ ಪಟ್ಟಿಯ ವಿಷಯವಾಗಿ ಇದೇ ರೀ ಒಂದು ತಿಂಗಳೊಳಗೆ ಕ್ರಮ ವಹಿಸುವುದಾ ಪೌರಾಡಳಿತ ಖಚಿತ ಭರವಸೆ ನೀಡಿತು. ಮ ನಿವೇಶನದ ಉದ್ದೇಶಕ್ಕಾಗಿ ಹೊರತಟ್ನಾಳ ಗುನ್ನಳ್ಳಿಯಲ್ಲಿ 21 ಎಕರೆ 32 ಗುಂಟೆ ಹಾಗ ಹೂವಿನಾಳ ಗ್ರಾಮದಲ್ಲಿ 18 ಎಕರೆ 10 ಗುಂ ಜಮೀನು ಈಗಾಗಲೇ ಖರೀದಿಸಲಾಗಿದ ಅದನ್ನು ಅರ್ಹ ನಿವೇಶನ ಹೀನರಿ ಹಂಚುವುದಾಗಿ ಇದೇ ಸಭೆಯಲ್ಲಿ ಲಿಖಿ ದಾಖಲೆ ನೀಡಲಾಗುವುದು ಎಂದು ಪೌರಾಡಳಿ ಖಾತ್ರಿ ಪಡಿಸಿದ ಮೇಲೆ ಈ ಹಂತದ ಹೋರಾ -ಧರಣಿಯನ್ನು ಹಿಂಪಡೆಯಲಾಯಿತ ಡಿವೈಎಫ್ಐ ತಾಲೂಕಾಧ್ಯಕ್ಷ ಹುಲಗ ಗೋಕಾವಿ, ಕಾರ್ಯದರ್ಶಿ ಸುಂಕಪ್ಪ ಗದಗ ರೇಣುಕಮ್ಮ, ಪರಿಮಳಾ ಮುಂತಾದವರು ಹೋರಾಟದ ನೇತೃತ್ವ ವಹಿಸಿದ್ದರು. ಡಿವೈಎಫ್ ರಾಜ್ಯಾಧ್ಯಕ್ಷ ರಾಜಶೇಖರಮೂರ್ತಿ ಹೋರಾಟದಲ್ಲಿ ಪಾಲ್ಗೊಂಡು ಮಾರ್ಗದರ್ಶ ಮಾಡಿದರು. ಭರವಸೆಯಂತೆ ಪೌರಾಡಳಿ ಮಾತುಕತೆ ಕುರಿತ ಲಿಖಿತ ದಾಖಲೆ ನೀಡಿತು ಮಾತಿನಂತೆ ಅರ್ಹ ಬಡವರಿಗೆ ನಿವೇಶ ಸಿಗುವವರೆಗೆ ಚಳುವಳಿ ಎಚ್ಚರ ವಹಿ ಮುತುವರ್ಜಿ ತೋರುವ ತೀರ್ಮಾನ ಮಾಡಿದ

ಬಿಜೆಪಿ ಸರಕಾರದ ರಾಜೀನಾಮೆಗೆ ಆಗ್ರಹ

ಮಾಧ್ಯಮ ಗೋಷ್ಠಿಯಲ್ಲಿ ಸಿಪಿಐ(ಎಂ) ಒತ್ತಾಯ

ಹಾಲಿ ಮಾಜಿ ಮುಖ್ಯಮಂತ್ರಿ, ಬಿಜೆಪಿ ಪ್ರಭಾವಿ ನಾಯಕ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಕುಟುಂಬದ ಮೇಲೆ ಸಿಬಿಐ ತನಿಖೆಯು ನಡೆಯುತ್ತಿರುವ ಸಂದರ್ಭದಲ್ಲಿ ನಿಷ್ಪಕ್ಷಪಾತ ತನಿಖೆಯ ದೃಷ್ಟಿಯಿಂದ ರಾಜ್ಯ ಬಿಜೆಪಿ ಸರಕಾರ ರಾಜಿನಾಮೆ ನೀಡಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಒತ್ತಾಯಿಸುತ್ತದೆ.

4 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರದಲ್ಲಿ ಯಡಿಯೂರಪ್ಪ ಸೇರಿದಂತೆ ಹಲವಾರು ಮಂತ್ರಿಗಳು ಹಗರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಈ ಹಗರಣಗಳ ಹಣದಿಂದಲೇ ಪ್ರಜಾಪ್ರಭುತ್ವ ವಿರೋಧಿಯಾದ "ಅಪರೇಷನ್ ಕಮಲ" ನಡೆಸಿ ಅಲ್ಪ ಮತದಿಂದ ಬಹುಮತ ಸಾದಿಸಿದೆ. ಒಟ್ಟಾರೆಯಾಗಿ ಸರಕಾರದ ಅಧಿಕಾರ ದುರುಪಯೋಗಿಸಿಕೊಂಡು ಗಣಿ, ಭೂಮಿ ಸಂಪನ್ಮೂಲವನ್ನು ಬಾಚಿಕೊಂಡಿದೆ.

ಯಡಿಯೂರಪ್ಪನವರ ನಾಟಕ :

ಗಣಿ ಕಂಪನಿಗಳಿಂದ ಯಡಿಯೂರಪ್ಪ ಮತ್ತು ಅವರ ಕುಟುಂಬದವರು ಲಂಚ ಪಡೆದ ಆರೋಪದ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ಸಿಬಿಐ ತನಿಖೆಗೆ ಆದೇಶ ಮಾಡಿರುವುದು ಸ್ವಾಗತಾರ್ಹ. ಆದರೆ ಸರಕಾರದ ಆಡಳಿತದ ಮೇಲೆ ಹಿಡಿತ ಸಾಧಿಸಲು ಯಡಿಯೂರಪ್ಪನವರು ಹೊರಟಿದ್ದಾರೆ. ಆ ಮೂಲಕ ಸಿಬಿಐನ ತನಿಖಾ ಅಧಿಕಾರಿಗಳಿಗೆ ಸೂಕ್ತ ಮಾಹಿತಿಗಳು ಸಿಗದಂತೆ ಮಾಡುವುದು. ಸರಕಾರದ ಮೇಲೆ ತನ್ನ ಗುಂಪಿನ ಹಿಡಿತ ಸಾಧಿಸುವುದು ಮೊದಲಾದ ಕೃತ್ಯಗಳಿಗೆ ಕೈ ಹಾಕಿದ್ದಾರೆ. ಆದ್ದರಿಂದ ಮಂತ್ರಿಗಳ, ಶಾಸಕರ ರಾಜಿನಾಮೆಯ ನಾಟಕ ಆಡಿದ್ದಾರೆ.

ಉನ್ನತಾಧಿಕಾರ ಸಮಿತಿಯ ವರದಿ ಮತ್ತು ಸಿಬಿಐ ತನಿಖೆಗೆ ಆದೇಶಿಸಿದ ಸುಪ್ರಿಂ ಕೋರ್ಟಿನ ತೀರ್ಪನ್ನು ಗಮನಿಸಿದರೆ ಲೋಕಾಯುಕ್ತ ನೀಡಿದ ವರದಿ ಸರಿಯಾಗಿತ್ತು ಎಬುದನ್ನು ಸ್ವಷ್ಟಪಡಿಸುತ್ತದೆ. ಆದರೆ ಬಿಜೆಪಿ ಸರಕಾರ ಹೊಸ ಲೋಕಾಯುಕ್ತರನ್ನು ನೇಮಕ ಮಾಡದೆ. ವರದಿಯನ್ನು ಅಂಗೀಕರಿಸಿ ಕ್ರಮ ಕೈಗೊಳ್ಳದೆ ಯಡಿಯೂರಪ್ಪನವರಿಗೆ ರಕ್ಷಣೆ ನೀಡಿದೆ. ಅಲ್ಲದೆ, ಹಲವಾರು ಸಮರ್ಥ ಅಧಿಕಾರಿಗಳನ್ನು ವರ್ಗಾ ಮಾಡುವುದರ ಮೂಲಕ ಇತರೆ ಮಂತ್ರಿಗಳ ಮೇಲಿನ ಆರೋಪವನ್ನು ದುರ್ಬಲಗೊಳಿಸಿದೆ.


ಹಾಸನದಲ್ಲಿ ಪ್ರತಿಭಟನೆ

ಒಟ್ಟಾರೆಯಾಗಿ ಲೋಕಾಯುಕ್ತ ಸಂಸ್ಥೆಯನ್ನೇ ನಾಶಮಾಡಲು ಬಿಜೆಪಿ ಸರಕಾರ ಹೊರಟಿದೆ. ಅದಕ್ಕೆ ಇಂದಿನ ಮುಖ್ಯಮಂತ್ರಿ ಸದಾನಂದಗೌಡರೂ ಹೊಣೆಯಾಗಿದ್ದಾರೆ ಎಂದು ಸಿಪಿಐ(ಎಂ) ಆರೋಪಿಸುತ್ತದೆ.

ಹೈ ಕಮಾಂಡ್–ನೋ ಕಮಾಂಡ್ :

ತನ್ನನ್ನು ತಾನೇ ಶಿಸ್ತಿನ ಪಕ್ಷ ಎಂದು ಕರೆದುಕೊಂಡಿದ್ದ ಬಿಜೆಪಿ ಹೈಕಮಾಂಡ್‌ಗೆ ಯಾವುದೇ 'ಕಮಾಂಡ್' ಇಲ್ಲದಂತಾಗಿದೆ. 'ಯಡಿಯೂರಪ್ಪನಮ್ಮೊಂದಿಗೆ' ನಾವಿದ್ದೇವೆ. ಎಂದು ಬಹಿರಂಗವಾಗಿ ಹೇಳುವ ಮೂಲಕ ಬಿಜೆಪಿ ಮುಖಂಡ ಅರುಣ್ ಜೇಟ್ಲಿಯವರು ಅವರ ರಕ್ಷಣೆಗೆ ನಿಂತಿದ್ದಾರೆ. ತಿಂಗಳುಗಟ್ಟಳೆ ಜೈಲಿನಲ್ಲಿದ್ದರೂ ಜನಾರ್ಧನರೆಡ್ಡಿಯವರು ಬಿಜೆಪಿಯ ಶಾಸಕರಾಗಿಯೇ ಮುಂದುವರೆದಿದ್ದಾರೆ. ಏನಾದರಾಗಲೀ, ಸರಕಾರ–ಅಧಿಕಾರವೊಂದಿದ್ದರೆ ಸಾಕು ಎಂಬ ನಿಲುವಿಗೆ ಬಿಜೆಪಿ ಹೈಕಮಾಂಡ್ ಬಂದಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ, ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕೆಂದಾದಲ್ಲಿ ರಾಜ್ಯ ಬಿಜೆಪಿ ಸರಕಾರ ಈ ಕೂಡಲೇ ರಾಜಿನಾಮೆ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ, ಈ ಕೂಡಲೇ ಲೋಕಾಯುಕ್ತರನ್ನು ನೇಮಕ ಮಾಡಬೇಕು ಹಾಗೂ ಅದಕ್ಕೆ ಸೂಕ್ತ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ,

ಬರಗಾಲ ಪರಿಹಾರ ಸಾಲದು :

ರಾಜ್ಯದ ಜನತೆ 123 ತಾಲ್ಲೂಕುಗಳಲ್ಲಿ ಬರಗಾಲಕ್ಕೆ ತುತ್ತಾಗಿದ್ದಾರೆ. ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು, ರೇಷನ್ ವ್ಯವಸ್ಥೆ, ಬೆಳೆಹಾನಿ ಪರಿಹಾರ ಕಾಮಗಾರಿಗಾಗಿ ಉದ್ಯೋಗ ಖಾತರಿ ಯೋಜನೆ ವಿಸ್ತರಣೆ ಮೊದಲಾದ ಅಂಶಗಳನ್ನು ಸರ್ವ ಪಕ್ಷಗಳ ಸಭೆಯಲ್ಲಿ ಸರಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಸಮರೋಪಾಧಿಯಲ್ಲಿ ಪರಿಹಾರ ಕಾರ್ಯಗಳು ನಡೆಯಲಿಲ್ಲ, ಬಿಜೆಪಿಯ ಒಳಜಗಳಗಳಿಂದಾಗಿ ಸಮಸ್ಯೆ ಇನ್ನಷ್ಟು ಜಟಿಲಗೊಂಡಿದೆ.

ಜನರ ನಡುವೆ ಪ್ರಚಾರಾಂದೋಲನ :

ಒಟ್ಟಾರೆಯಾಗಿ, ಬಿಜೆಪಿ ಸರಕಾರ ಜನರ ಸಮಸ್ಯೆಗಳಿಗೆ ಗಮನ ನೀಡುವಲ್ಲಿ ವಿಫಲವಾಗಿದೆ. 4ವರ್ಷಗಳ ಹಿಂದೆ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ರೇಶನ್ ವ್ಯವಸ್ಥೆ, ನಿರುದ್ಯೋಗ ಭತ್ಯೆ ಇತ್ಯಾದಿಗಳನ್ನು ಈಡೇರಿಸಿಲ್ಲ. ಬದಲಾಗಿ ವೈದ್ಯಕೀಯ, ಇಂಜಿನಿಯರಿಂಗ್ ಶಿಕ್ಷಣದ ಶುಲ್ಕ ಹೆಚ್ಚು ಮಾಡಲಾಗಿದೆ. ಶಿಕ್ಷಣದ ಹಕ್ಕು ಮಸೂದೆ 2009ರ ಪ್ರಕಾರ ಖಾಸಗಿ ಶಾಲೆಗಳಲ್ಲಿ ಶೇ. 25ರಷ್ಟು ಸೀಟುಗಳನ್ನು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಬೇಕೆಂಬ ಅಂಶ ರಾಜ್ಯದಲ್ಲಿ ಜ್ಯಾರಿಯಾಗಿಲ್ಲ. ಆದ್ದರಿಂದ ಬಿಜೆಪಿ ಸರಕಾರದ ಒಟ್ಟು ವೈಫಲ್ಯಗಳನ್ನು ಪಟ್ಟಿಮಾಡಿ ಜನರ ನಡುವೆ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ.

ರೈತರ ಚಳುವಳಿಗೆ ಬೆಂಬಲ

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃ ಕೂಲಿಕಾರರ ಸಂಘ ಮತ್ತಿತರ ಸಂಘಟನೆಗಳು ಸೇರಿ, ಬಗರ್ ಹುಕುಂ ಸಾಗುವಳಿಯ ಸಕ್ರಮಕ್ಕಾಗಿ, ಮನೆ ನಿವೇಶನ, ಆದಿವಾಸಿಗಳ ಅರಣ್ಯ ಹಕ್ಕುಗಳಿಗಾಗಿ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಮೇ 21ರಿಂದ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ಸರಕಾರ ರೈತರು ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ವಿಠಲ ಮಲೆಕುಡಿಯ ಮತ್ತು ಅವರ ತಂದೆಯನ್ನು ಬಿಡುಗಡೆಗೆ ಒತ್ತಾಯ :

ನಕ್ಸಲ್ ನಿಗ್ರಹದ ಹೆಸರಿನಲ್ಲಿ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಗ್ರಾಮದ ಮಂಗಳೂರು ವಿಶ್ವ ವಿದ್ಯಾಲಯದ ವಿದ್ಯಾರ್ಥಿ ವಿಠಲ ಮಲೆಕುಡಿಯ ಮತ್ತು ಅವರ ತಂದೆಯನ್ನು ಬಂಧಿಸಿರುವುದನ್ನು ಸಿಪಿಐ(ಎಂ) ವಿರೋಧಿಸುತ್ತದೆ ಮತ್ತು ಅವರ ಬಿಡುಗಡೆಗಾಗಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಪ್ರತಿಭಟನೆ

.ಈ ಎಲ್ಲಾ ಸಂಗತಿಗಳ ನಡುವೆಯೇ ಬಿಜೆಪಿ ಸರಕಾರ ಮತ್ತೊಂದು ಸುತ್ತಿನ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಜೂನ್ 7 ಮತ್ತು 8ರಂದು ಬೆಂಗಳೂರಿನಲ್ಲಿ ನಡೆಸಲು ಭರದ ಸಿದ್ಧತೆ ನಡೆಸಿದೆ. ಅದಕ್ಕಾಗಿ ಬಂಡವಾಳಗಾರರನ್ನು ಆರ್ಕಸಲು ರೋಡ್ ಶೋ ನಡೆಸಲು ವಿದೇಶ ಪ್ರವಾಸವನ್ನು ಮುಖ್ಯಮಂತ್ರಿ, ಕೈಗಾರಿಕಾ ಸಚಿವರು ಯೋಜಿಸಿದ್ದರು, ಆದರೆ ಬರಗಾಲದ ಹಿನ್ನೆಲೆಯಲ್ಲಿ ವಿದೇಶಿ ಪ್ರವಾಸ ನಡೆಸುವುದರ ವಿರುದ್ಧ ಬಂದ ತೀವ್ರ ಟೀಕೆಗಳ ಒತ್ತಡದಿಂದಾಗಿ ಅದನ್ನು ಕೈಬಿಡಬೇಕಾಗಿ ಬಂತು. ಈ ಸಮಾವೇಶದಲ್ಲಿ 5 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಸುವ ಗುರಿದೆ. ಈ ಸಾಲಿನ ಬಜೆಟ್ ನಲ್ಲಿ ಭೂ ಬ್ಯಾಂಕ್ ಸ್ಥಾಪನೆಗಾಗಿ ರೂ 2000 ಕೋಟಿಯನ್ನು ಬಂಡವಾಳಗಾರರ ಸೇವೆಗೆಂದೇ ತೆಗೆದಿರಿಸಿದೆ. ಬಹಳ ವ್ಯಾಪಕವಾಗಿ ರೈತರ ಭೂಮಿಯನ್ನು ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ಸಿದ್ದತೆದೆ. ಇದಕ್ಕಾಗಿ ಭೂಸುಧಾರಣೆಯ ಕಾನೂನಿಗೆ ಅಪಾಯಕಾರಿಯಾದ ತಿದ್ದುಪಡಿಗಳನ್ನು ತರಲಾಗುತ್ತಿದೆ. ಪ್ರಗತಿಪರ ಭೂಸುಧಾರಣೆಗೆ ವಿರುದ್ಧವಾದ, ರೈತ-ಕೂಲಿಕಾರ,ವ್ಯವಸಾಯದ ವ್ಯಾಖ್ಯಾನವನ್ನೇ ವಿಕೃತಗೊಳಿಸುವ ಪ್ರಯತ್ನ ನಡೆದಿದೆ.

ಹಿಂದಿನ ಸಮಾವೇಶದಲ್ಲಿ ಸುಮಾರು 4 ಲಕ್ಷದ 32 ಸಾವಿರ ಕೋಟಿರೂ.ಗಳ ಹೂಡಿಕೆಯ ಒಪ್ಪಂದಗಳಾದರೂ ಇದುವರೆಗೂ ಬಂದದ್ದು ಕೇವಲ 1836 ಕೋಟಿ ರೂ.ಗಳು ಮಾತ್ರ. ಅಂದರೆ ಈ ಮೂಲಕ ಸರಕಾರ ಭೂ ದಂಧೆಗೆ ಹೆಚ್ಚಿನ ಒತ್ತನ್ನು ನೀಡುತ್ತಿದೆ. ಭೂ ಮಾಫಿಯಾಗಳಿಗೇ ಇದರ ಲಾಭ ದೊರೆಯಲಿದೆ. ಒಟ್ಟಾರೆಯಾಗಿ ಕರ್ನಾಟಕದ ಕೃ, ಕೈಗಾರಿಕೆಯನ್ನು ನಾಶಗೊಳಿಸುವ ಜಾಗತೀಕರಣ, ಖಾಸಗೀಕರಣದ ಪ್ರಯತ್ನಗಳನ್ನು ನಾವು ತೀವ್ರವಾಗಿ ಪ್ರತಿಭಟಿಸುತ್ತೇವೆ.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನಿನ 8ನೇ ರಾಜ್ಯ ಸಮ್ಮೇಳನ

ಬಂಡವಾಳಶಾಹಿ ನೀತಿಗಳಿಂದ ದೇಶದಲ್ಲಿ ಆರ್ಥಿಕ ಸಂಕಷ್ಟ

– ಮುಹಮದ್ ನಿಜಾಮುದ್ದೀನ್

ಕಾರ್ಮಿಕ ಕಾನೂನುಗಳನ್ನು ತಿರುಚಿ ಕಾರ್ಮಿಕರಿಗೆ, ಈಗಿರುವ ಕಾನೂನು ರಕ್ಷಣೆಯನ್ನೂ ಕಿತ್ತು ಹಾಕಬೇಕೆನ್ನುವ ವಿದೇಶಿ ಬಂಡವಾಳ ಹೂಡಿಕೆದಾರರ ಜಗತ್ತಿನ ಬಹುಪಾಲು ದೇಶಗಳಲ್ಲಿ ಆರ್ಥಿಕ ಸಂಕಟ ಎದುರಾಗುತ್ತಿದೆ. ಇದು ಕಾರ್ಮಿಕ ವರ್ಗವನ್ನು ವ್ಯವಸ್ಥಿತವಾಗಿ ಮಾಡುವ ಶೋಷಣೆಯಾಗಿದೆ. ಜಗತ್ತಿನ 185 ನಗರಗಳಲ್ಲಿ ಈ ರೀತಿಯ ಶೋಷಣೆಯ ವಿರುದ್ಧ ಬಂಡವಾಳಶಾಹಿ ವ್ಯವಸ್ಥೆಯ ಸಂಕೇತದಂತಿರುವ ಅಮೇರಿಕದ ವಾಲ್ ಸ್ಟ್ರೀಟ್ 'ವಶಪಡಿಸಿಕೊಳ್ಳಿ' – ಎಂಬ ಚಳುವಳಿ ನಡೆಯುತ್ತಿದೆ ಎಂದು ಅಖಿಲ ಭಾರತ ಬೀಡಿ ಕಾರ್ಮಿಕರ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ನಿಜಾಮುದ್ದೀನ್ ಹೇಳಿದರು.

ಮಂಗಳೂರಿನ ಪುರಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನಿನ (ಸಿಐಟಿಯು) ಇದರ 8ನೇ ರಾಜ್ಯ ಸಮ್ಮೇಳನವನ್ನು ಮೇ 8, 2012 ರಂದು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕೇಂದ್ರ ಸರ್ಕಾರ ನೇಮಿಸಿದ ಅರ್ಜುನ್ ಸೇನ್ ಗುಪ್ತಾ ವರದಿಯಲ್ಲಿ ದೇಶದ ಶೇ.77 ರಷ್ಟು ಜನರು ದಿನಂಪ್ರತಿ ಕೇವಲ ರೂ.20 ಗಳಿಸುತ್ತಾರೆ ಎಂದು ತಿಳಿಸಲಾಗಿದೆ. ಈ ಮಧ್ಯೆ ಕಾರ್ಮಿಕರ ಸಮಸ್ಯೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಚಿಸಲಾದ ಸಲಹಾ ಸಮಿತಿಯ ಸಭೆ ಕೂಡಾ ನಿಯಮಿತವಾಗಿ ನಡೆಯುತ್ತಿಲ್ಲ. ಇವೆಲ್ಲದರ ಪರಿಣಾಮ ಬಡ ಕಾರ್ಮಿಕರ ಮೇಲಾಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರ ನಿರಂತರ ಶೋಷಣೆಗೆ ಎಡೆ ಮಾಡಿ ಕೊಟ್ಟಿವೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರು ಚಳವಳಿ ಮುಂದುವರೆಸಬೇಕು. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಬೀಡಿ ಕಾರ್ಮಿಕರ ಹೋರಾಟ ತೀವ್ರವಾಗಿದೆ. ಪಶ್ಚಿಮ ಬಂಗಾಳದಲ್ಲಿ ಸಂಸತ್ ಹಾಗೂ ವಿಧಾನ ಸಭೆಗಳ ಚುನಾವಣೆ ಬಳಿಕ ಕಾರ್ಮಿಕರ ಮೇಲೆ ದಬ್ಬಾಳಿಕೆ ಹೆಚ್ಚಾಗಿದೆ. ಮಾತ್ರವಲ್ಲ ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್‌ನ ಸಹಯೋಗದೊಂದಿಗೆ ಇದೀಗ ಪಶ್ಚಿಮ ಬಂಗಾಳದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಪ್ರಯತ್ನ ಸಾಗುತ್ತಿದೆ. ಮುಂದೆ ಅದು ಇತರ ರಾಜ್ಯಗಳಿಗೂ ವಿಸ್ತರಿಸುವ ಅಪಾಯವಿದೆ. ಆದ್ದರಿಂದ ಕಾರ್ಮಿಕ ವರ್ಗ ದೇಶಾದ್ಯಂತ ಇದರ ವಿರುದ್ಧ ಹೋರಾಟ ಮಾಡಬೇಕಾಗಿದೆ ಎಂದು ನಿಜಾಮುದ್ದೀನ್ ನುಡಿದರು.

ಬೀಡಿ ಕಾರ್ಮಿಕರಿಗೆ ಇರುವ ಸವಲತ್ತು ಮೊಟಕುಗೊಳಿಸಲಾಗುತ್ತಿದೆ, ಕಾನೂನು ಸಡಿಲಿಕೆಗೆ ಯತ್ನಿಸಲಾಗುತ್ತಿದೆ. ಈ ಕುರಿತು ಬೀಡಿ ಕಾರ್ಮಿಕರ ರಾಷ್ಟ್ರೀಯ ಒಕ್ಕೂಟದಲ್ಲಿ ಚರ್ಚಿಸಿ, ಇವುಗಳ ವಿರುದ್ಧ ಹಾಗೂ ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಹೋರಾಟಗಳನ್ನು ರೂಪಿಸಲಾಗುವುದು ಎಂದರು.

ಬೀಡಿ ಉದ್ಯಮ ಹಂಚಿ ಹೋಗಿರುವ ಕಾರಣ ಮಾಲೀಕರಿಂದ ಶೋಷಣೆ ಆಗುತ್ತಿದೆ.



ಕನಿಷ್ಠ ಕೂಲಿ ಸಿಗುತ್ತಿಲ್ಲ. ಅಗತ್ಯ ಸವಲತ್ತು ಸಿಗುತ್ತಿಲ್ಲ. ಆದ್ದರಿಂದ ದೇಶದಲ್ಲಿರುವ ಸುಮಾರು 90 ಲಕ್ಷ ಬೀಡಿ ಕಾರ್ಮಿಕರ ಸವಲತ್ತುಗಳ ಕುರಿತು ಕೇಂದ್ರ ಸರಕಾರದ ಮಟ್ಟದ ಸಲಹಾ ಸಮಿತಿ ಸಭೆ ಕೂಡಾ ನಡೆಯುತ್ತಿಲ್ಲ. ಅದು ನಡೆಯಬೇಕು ಎಂದು ನಿಜಾಮುದ್ದೀನ್ ಒತ್ತಾಯಿಸಿದರು.

ಬಂಡವಾಳಶಾಹಿಗಳ ವಿರೋಧ: ಕೆ.ನೀಲಾ

ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿ ಉಪಾಧ್ಯಕ್ಷೆ ನೀಲಾ ಕೆ. ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಹೆಣ್ಣು ಮಕ್ಕಳು ಕೂಲಿ ಕಾರ್ಮಿಕರಾಗಿದ್ದಾರೆ. ಅಲ್ಲಿ ಜಮೀನ್ದಾರಿ ಪದ್ಧತಿ, ಪಾಳೇಗಾರಿ ಪದ್ಧತಿ ಜೀವಂತವಾಗಿದೆ. ಹೆಣ್ಣು ಮಕ್ಕಳು ಅಕ್ಷರಸ್ಥರಾಗಿಲ್ಲ, ಸಂಘಟಿತರಾಗಲು ಅವಕಾಶ ನೀಡಿಲ್ಲ ಎಂದರು.

ಬೀಡಿ ಕಾರ್ಮಿಕರು ಅಸ್ತಮ, ಕೆಮ್ಮು ಮೊದಲಾದ ತೊಂದರೆಗಳಿಂದ ಬಳಲುತ್ತಿದ್ದಾರೆ. ಆದರೆ ಇದು ಸರ್ಕಾರಕ್ಕೆ ತಿಳಿಯುತ್ತಿಲ್ಲ. ಸರಕಾರಗಳು ತಮ್ಮ ನೀತಿಗಳಿಂದಾಗಿ ಬೀಡಿ ಕಾರ್ಮಿಕರ ಬದುಕನ್ನು ಬೂದಿ ಮಾಡಿವೆ. ಆಳುವವರಿಗೆ ಕಾರ್ಮಿಕರ ಹಿತಕ್ಕಿಂತಲೂ ಶ್ರೀಮಂತರ ಹಿತ ಕಾಪಾಡುವುದು ಮುಖ್ಯವಾಗಿದೆ ಎಂದು ನೀಲಾ ಟೀಕಿಸಿದರು.

ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ವಿಸ್ತೃತವಾಗಿ ಚರ್ಚಿಸಿದ ರಾಜ್ಯ ಸಮ್ಮೇಳನ:

ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ ಮಂಗಳೂರಿನ ಪುರಭವನದಲ್ಲಿ ನಡೆದಿದ್ದು, ಫೆಡರೇಶನ್ನಿನ ರಾಜ್ಯಾಧ್ಯಕ್ಷ ಬಿ.ಮಾಧವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನ ಕುಮಾರ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ಹಿರಿಯ ಕಾರ್ಮಿಕ ಮುಖಂಡರೂ ಆದ ಕೆ.ಆರ್.ಶ್ರೀಯಾನ್, ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಸೈಯ್ಯದ್ ಮುಜೀಬ್, ದ.ಕ.ಜಿಲ್ಲೆಯ ಬೀಡಿ ಸಂಘಟನೆಯ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಬಿ.ಎಂ.ಭಟ್, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮತ್ತಿತರರು ವೇದಿಕೆಯ ಮೇಲಿದ್ದರು.

ಒಂದು ಸಾವಿರಕ್ಕೂ ಹೆಚ್ಚು ಮಂದಿಗೆ ಸ್ಥಳಾವಕಾಶವಿರುವ ಪುರಭವನ ತುಂಬಿ ತುಳುಕುತ್ತಿತ್ತು. ಸಮ್ಮೇಳನದ ಪ್ರತಿನಿಧಿ ಅಧಿವೇಶನ ಮಂಗಳಾದೇವಿಯ ಕುಲಾಲಭವನದ ಕಾ.ಸಲೀಮಾ ಜಿ –ಕಾಂ.ಜೆ.ವೀರಪ್ಪ ವೇದಿಕೆಯಲ್ಲಿ ಮೇ 8ರ ಅಪರಾಹ್ನದಿಂದ ಮೇ 9ರ ಸಾಯಂಕಾಲದವರೆಗೂ ಎರಡು ದಿನಗಳ ಕಾಲ ಸಾಗಿತು. ಕರ್ನಾಟಕ ರಾಜ್ಯದಲ್ಲಿ ಬೀಡಿ ಕನಿಷ್ಠ ಕೂಲಿಯ ಸರ್ಕಾರೀ ಉಪಸಮಿತಿಯ ನಿರ್ಣಯದ ಅನುಷ್ಠಾನ ಆಗದೆ ಇರುವುದರ ಬಗ್ಗೆ ಹಾಗೂ ಬೀಡಿ ಕಾರ್ಮಿಕ ಮತ್ತು ಉದ್ಯಮ ರಂಗದ ಬಗ್ಗೆ ವಿಸ್ತೃತ ಚರ್ಚೆಗಳಲ್ಲಿ ರಾಜ್ಯಾದ್ಯಂತ ಬಂದಿದ್ದ ಪ್ರತಿನಿಧಿಗಳು ಸಕ್ರಿಯ ಭಾಗವಹಿಸಿದ್ದ ಹಾಗೂ ಕೆಲವು ಪ್ರಮುಖ ನಿರ್ಣಯಗಳ ಕೈಗೊಳ್ಳಲಾಯಿತು.

ರಾಜ್ಯವ್ಯಾಪಿ ಚಳವಳಿಗೆ ಸಮ್ಮೇಳನದ ನಿರ್ಣಯ: ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ನಿಗದಿಪಡಿಸ ರಾಜ್ಯ ಸರಕಾರದಿಂದ ನೇಮಿಸಲ್ಪ ಉಪಸಮಿತಿಯು ಪುನರ್ ವಿಮರ್ಶಿತ ಕನಿ ಕೂಲಿಯ ಅಧಿಸೂಚನೆಯನ್ನು ಗಜೆಟ್‌ನ ಪ್ರಕಟಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಳಂಬಿಸುತ್ತಿರುವುದನ್ನು ಖಂಡಿ ಮೇ 17 ರಂದು ರಾಜ್ಯವ್ಯಾಪಿ ಪ್ರತಿಭಟಿಸಲ ಸಿಐಟಿಯು ನೇತೃತ್ವದ ಕರ್ನಾಟಕ ರಾ ಬೀಡಿ ಕಾರ್ಮಿಕರ ಫೆಡರೇಶ ನಿರ್ಣಯಿಸಿತು.

ರಾಜ್ಯ ಬೀಡಿ ಕಾರ್ಮಿಕರ ಫೆಡರಶನ್ ಅಧ್ಯಕ್ಷರಾಗಿ ಬಿ.ಮಾಧವ ಮರು ಆಯ್ಕೆ:

ರಾಜ್ಯ ಸಮ್ಮೇಳನವು ಮುಂದಿನ ಅವಧಿ ಆರಿಸಿದ ರಾಜ್ಯ ಸಮಿತಿಯ ಅಧ್ಯಕ್ಷರಾ ಬಿ.ಮಾಧವ ಮರು ಆಯ್ಕೆಗೊಂಡಿದ್ದಾ ಸಯ್ಯದ್ ಮುಜೀಬ್ ರಾಜ್ಯ ಸಮಿತಿ ಪ್ರಧಾ ಕಾರ್ಯದರ್ಶಿಯಾಗಿ ಮರು ಆಯ್ಕೆಯಾಗಿದ್ದಾ ಜೆ.ಬಾಲಕೃಷ್ಣ ಶೆಟ್ಟಿ ಕೋಶಾಧಿಕಾರಿಯಾ ಆಯ್ಕೆಯಾಗಿದ್ದಾರೆ.

ಬಿಜೆಪಿ ಸರಕಾರದ ರಾಜಿನಾಮೆಗೆ ಆಗ್ರ ಮಂಗಳೂರಿನಲ್ಲಿ ಸಿಪಿಎಂ ಪ್ರತಿಭಟನೆ:

ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಕಂಪೆನಿಗಳಿಂದ ಲಾಭ ಪಡೆದ ಆರೋಪಕ್ಕ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರ ಮತ್ತು ಅವರ ಕುಟುಂಬದ ಸದಸ್ಯರ ವಿರು ಸಿಬಿಐ ತನಿಖೆಗೆ ಸುಪ್ರೀಂ ಕೋರ್ಟ್ ಆದೇ ನೀಡಿರುವ ಹಿನ್ನೆಲೆಯಲ್ಲಿ ನಿಷ್ಪಕ್ಷಪಾತ ತನಿ ಅನುವು ಮಾಡಿಕೊಡುವ ಸಲುವಾಗಿ ರಾ ಬಿಜೆಪಿ ಸರಕಾರ ತತ್‌ಕ್ಷಣ ರಾಜೀನಾ ಸಲ್ಲಿಸಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಪಕ್ಷ ವತಿಯಿಂದ ದ.ಕ.ಜಿಲ್ಲಾಧಿಕಾರಿ ಕಚೇ ಎದುರು ಪ್ರತಿಭಟನಾ ಪ್ರದರ್ಶ ನಡೆಸಲಾಯಿತು.



ಪಕ್ಷದ ಜಿಲ್ಲಾ ಸಮಿ ಕಾರ್ಯದರ್ಶಿ ಬಿ.ಮಾಧವ, ಪಕ್ಷ ರಾಜ್ಯ ಸಮಿತಿ ಸೆಕ್ರೆಟಾರಿಯಟ್ ಸದ ಕೆ. ಆರ್. ಶ್ರೀಯಾನ್ ಪ್ರತಿಭಟನಾಕಾರರನ್ನುದ್ದೇಶಿ ಮಾತನಾಡಿದರು. ಪಕ್ಷದ ಜಿಲ್ಲಾ ಸಮಿ ಸೆಕ್ರೆಟಾರಿಯಟ್ ಸದಸ್ಯರಾ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುನೀ ಕುಮಾರ್ ಬಜಾಲ್, ಪಕ್ಷದ ಜಿಲ್ಲಾ ಸಮಿ ನಗರ ಸಮಿತಿ ಸದಸ್ಯರು ಮತ್ತಿತರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭೂಮಿ ನಮ್ ಕೈಲಿ ಉಳ್ಕೊಂಡಿದ್ದು ಹೇಗೆ?

ಬೆಂಗಳೂರು ನಗರ ಜಿಲ್ಲೆಯಲ್ಲಿ ಕೆಲವು ಗೆಲುವಿನ ಹೆಜ್ಜೆಗಳು

ಅದು ಅರಣ್ಯ ಭೂಮಿಯ ಪ್ರಶ್ನೆಯೇ ಇರಲಿ. ಬಗರ್ ಹುಕುಂ ಸಾಗುವಳಿ ಸಕ್ರಮದ ಪ್ರಶ್ನೆಯೇ ಇರಲಿ ಅಥವಾ ಮನೆ ನಿವೇಶನದ ಪ್ರಶ್ನೆಯೇ ಇರಲಿ ಅದರಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳಿಗಳಿವೆ. ಒಂದು ಸರ್ಕಾರದ ಧೋರಣೆಯ ಪ್ರಶ್ನೆ. ಸರ್ಕಾರದ ಜನವಿರೋಧಿ ಧೋರಣೆಯಲ್ಲಿ ಬದಲಾವಣೆ ಬರಬೇಕೆಂಬ ವಿಶಾಲ ಹೋರಾಟ ನಡೆಯುತ್ತಿರುವಾಗಲೇ ಇರುವ ಕಾನೂನು, ಅವಕಾಶಗಳನ್ನು ಬಳಸಿ ಹಲವು ಸ್ಥಳೀಯವಾದ ಜನರ ಪ್ರಶ್ನೆಗಳನ್ನು ಇತ್ಯರ್ಥ ಮಾಡಲು, ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ. ಈ ಎರಡನೇ ಪ್ರಶ್ನೆ.

ಬೆಂಗಳೂರು ನಗರ ಜಿಲ್ಲೆಯ ಈ ಕೆಲವು ನಿರ್ದಿಷ್ಟ ಹೋರಾಟ, ನಿರ್ದಿಷ್ಟ ಪ್ರಕರಣಗಳನ್ನು ನೋಡಿದಾಗ ಅರ್ಥವಾಗುವ ವಿಚಾರವೆಂದರೆ ಬಡವರ ಪರವಾದ ರೈತ ಚಳುವಳಿ, ಕೃಷಿಕೂಲಿಕಾರರ ಚಳುವಳಿ ಸೂಕ್ತವಾದ ರೀತಿಯಲ್ಲಿ ಮಧ್ಯ ಪ್ರವೇಶ ಮಾಡಿದರೆ ರೈತರ ಭೂಮಿ ಕಿತ್ತುಕೊಂಡು ಬಡವರನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳಿಗೆ ತಡೆ ಹಾಕುವುದು ಸಾಧ್ಯ. ಗೆಲುವು ಸಾಧ್ಯ. ಇಂತಹ ಸಣ್ಣ ಸಣ್ಣ ಗೆಲುವುಗಳಿಂದ, ಸಮಸ್ಯೆಗಳ ರೈತಪರವಾದ ಇತ್ಯರ್ಥಗಳಿಂದ ಸಮಸ್ಯೆಗಳನ್ನು ಅನುಭವಿಸುತ್ತಿರುವ ವಿಶಾಲ ಜನ ಸಮುದಾಯವನ್ನು ಚಳುವಳಿಯ ಕಡೆಗೆ ಸೆಳೆಯಲು ಸಹಾಯವಾಗುತ್ತದೆ. ಗೆಲುವಿನ ಭರವಸೆ ಮೂಡಿಸುತ್ತದೆ.

ಸಕಾಲಿಕವಾದ ಮತ್ತು ಪರಿಣಾಮಕಾರಿಯಾದ ಮಧ್ಯ ಪ್ರವೇಶ, ಸಂಘಟಿತ ಹೋರಾಟದಿಂದ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾಧ್ಯ ಎಂಬುದಕ್ಕೆ ಬೆಂಗಳೂರು ನಗರ ಜಿಲ್ಲೆಯ ಇತ್ತೀಚಿನ ಈ ಕೆಲವು ಉದಾಹರಣೆಗಳೇ ಸಾಕ್ಷಿ.

ಮುತ್ತ್ಯಾಲ ಮಡುಗುವಿನ ಬ್ಯಾಟಪ್ಪ ಎಂಬ ಬಡ ರೈತನ ಭೂಮಿ....

ಆತನ ಹೆಸರು ಬ್ಯಾಟಪ್ಪ. ವಯಸ್ಸು 55 ವರ್ಷ. ಆತನದು ಒಂದು ಬಡ ರೈತ ಕುಟುಂಬ. ಕಳೆದ 30 ವರ್ಷಗಳಿಂದ 1.5 ಎಕರೆಯಷ್ಟಿರುವ ಆ ಜಮೀನಿನಲ್ಲಿ ವ್ಯವಸಾಯ ಮಾಡುತ್ತ ಆ ಕುಟುಂಬ ಅಲ್ಲೇ ಒಂದು ಪುಟ್ಟ ಮನೆಯನ್ನು ಕಟ್ಟಿಕೊಂಡು, ವಾಸಿಸುತ್ತಿತ್ತು. ವಾಸ್ತವವಾಗಿ ಅದನ್ನು ಬೇಸಾಯಕ್ಕೊಳಪಡಿಸಿದ್ದು ಆತನ ತಂದೆ ನಾರಾಯಣಪ್ಪ ಗೆಯ್ಮೆ ಮಾಡುತ್ತಿದ್ದ ಕಾಲದಲ್ಲಿ. ಸು 85 ವರ್ಷ ವಯಸ್ಸಾದ ನಾರಾಯಣಪ್ಪ ಬ್ಯಾಟಪ್ಪನ ಜೊತೆಯಲ್ಲೇ ಅಲ್ಲೇ ಬದುಕುತ್ತಿದ್ದಾರೆ.

ಅದು ಗ್ರಾಮದ ಗೋಮಾಳ ಭೂಮಿ. ಬ್ಯಾಟಪ್ಪನ ಕುಟುಂಬದ ಅದೃಷ್ಟವೋ, ದುರದೃಷ್ಟವೋ ಆ ಗೋಮಾಳ ಜಮೀನು ಇದ್ದುದು, ಇರುವುದು 'ಮತ್ತ್ಯಾಲ ಮಡುಗು' ಎಂಬ ಸಣ್ಣ ಜಲಪಾತದ ಸಮೀಪ. ಹೌದು, ಅದು ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಈ ಜಾಗ. ಈಗ ಒಂದು ಪ್ರವಾಸಿ ತಾಣ.

ಆನೇಕಲ್ ಕ್ಷೇತ್ರದ ಶಾಸಕರು ನಾರಾಯಣ ಸ್ವಾಮಿ ಅಂತ. ರಾಜ್ಯ ಬಿಜೆಪಿ ಸರ್ಕಾರದಲ್ಲಿ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದಾರೆ. ಅವರಿಗೆ 'ಮುತ್ಯಾಲ ಮಡುಗು' ಪ್ರವಾಸಿ ಕ್ಷೇತ್ರವನ್ನು 'ಅಭಿವೃದ್ಧಿ' ಪಡಿಸುವ ಆಸೆ. 'ಮುತ್ಯಾಲ ಮಡುಗು' ಅಭಿವೃದ್ಧಿ ಆಬೇಕೆಂಬುದೇನೋ ಸರಿ. ಆದರೆ ಬ್ಯಾಟಪ್ಪ -ಅವನ ಮೂರು ಮಕ್ಕಳು, ಹೆಂಡತಿ, ವಯಸ್ಸಾದ ಅಪ್ಪ ಎಲ್ಲಿಗೆ ಹೋಗಬೇಕು. ಏನು ಮಾಡಬೇಕು ?

ಉಹುಂ !! ಅಭಿವೃದ್ಧಿ.... ಬಾರಿ



ಅಭಿವೃದ್ಧಿಯ ಭರದಲ್ಲಿ ಮುನ್ನುಗ್ಗುತ್ತಿರುವ ಅಧಿಕಾರಸ್ಥರನ್ನು ಈ ರೀತಿಯೆಲ್ಲಾ ಕೇಳಬಾರದು. ಇದು ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಗಾಲು ಹಾಕುವ ಕೆಲಸ. ಬ್ಯಾಟಪ್ಪನ ಕುಟುಂಬಕ್ಕೆ ಯಾವ ಪರ್ಯಾಯ ವ್ಯವಸ್ಥೆಯನ್ನೂ ಮಾಡದೇ ಬಾಯಿ ಮಾತಿನ ಭರವಸೆಗಳ ಆಧಾರದಲ್ಲಿ ಕುಟುಂಬವನ್ನು ಒಕ್ಕಲೆಬ್ಬಿಸಿ ಅಲ್ಲಿ 'ಅಭಿವೃದ್ಧಿ' ಕಾರ್ಯ ಆರಂಭವಾಗೇ ಬಿಟ್ಟಿತ್ತು.

ಮೊದಲಿಗೆ ನಾರಾಯಣಪ್ಪ, ಆನಂತರ ಬ್ಯಾಟಪ್ಪನ ಕುಟುಂಬ ಅಲ್ಲಿ ಮಾಡುತ್ತಿದ್ದುದು ಬಗರ್ ಹುಕುಂ ಸಾಗುವಳಿ. ಆ ಜಮೀನಿನ ಸಕ್ರಮ ಕೋರಿ ಕುಟುಂಬ 1997ರಲ್ಲಿ ಅರ್ಜಿಯನ್ನೂ ಸಲ್ಲಿಸಿತ್ತು. ಅದರ ದಾಖಲೆಗಳೆಲ್ಲವೂ ಅವರಲ್ಲಿತ್ತು. ಅಷ್ಟಾದರೂ ಅವರಿಗೆ ಈ ಗತಿ ಬಂದಿತ್ತು.

ಕರ್ನಾಟಕ ಪ್ರಾಂತ ರೈತ ಸಂಘ ಇಂತಹ ಕುರುಡು-ಮನುಷ್ಯ ವಿರೋಧಿ ಅಭಿವೃದ್ಧಿ ಚಟುವಟಿಕೆ, ಯೋಜನೆಗಳ ವಿರುದ್ಧ ಹೋರಾಟದ ಬಾವುಟವನ್ನು ಎತ್ತಿ ಹಿಡಿಯುತ್ತಲೇ ಬರುತ್ತಿದೆ. ಇಲ್ಲಿಯೂ ಅದೇ ಆಯಿತು.

ಕೊನೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಎಂ.ಕೆ. ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ರೈತ ಮುಖಂಡರು, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಯಿತು. ಚರ್ಚೆಯಲ್ಲಿ ರೈತ ಮುಖಂಡರು ರೈತಪರವಾದ ತಮ್ಮ ವಿಚಾರವನ್ನು ಸ್ಪಷ್ಟವಾಗಿ ಮಂಡಿಸಿದರು.

ಈ ಇಲ್ಲದರ ಪರಿಣಾಮವಾಗಿ ಆನೇಕಲ್ ತಹಸೀಲ್ದಾರರಿಗೆ ಸ್ಪಷ್ಟ ಲಿಖಿತ ನಿರ್ದೇಶನವೇ ಹೊರಟಿತು. " ನೀವು ಪರ್ಯಾಯ ಭೂಮಿಯನ್ನು ತೋರಿಸದೇ ಒಕ್ಕಲೆಬ್ಬಿಸಬಾರದು... ಕಾನೂನು ಅದಕ್ಕೆ ಅವಕಾಶ ನೀಡುವುದಿಲ್ಲ.." ಎಂದು.

ಪ್ರಾಂತ ರೈತ ಸಂಘ ಈ ವಿಷಯವನ್ನು ಕೈ ಗೆತ್ತಿಕೊಂಡ ಮೇಲೆ ಈಗ ಬ್ಯಾಟಪ್ಪನ ಕುಟುಂಬಕ್ಕೆ ಗ್ರಾಮದ ಮತ್ತೊಂದು ಕಡೆ ಅರ್ಧ ಎಕರೆ ಜಮೀನು ಪರಿಹಾರವಾಗಿ ಸಿಕ್ಕಿದೆ. ವಾಸಕ್ಕೆ ಒಂದು ಆಶ್ರಯ ಮನೆ ಮಂಜೂರಾಗಿದೆ. ಆತನ ಕುಟುಂಬ ಈಗ ದೊಡ್ಡದಾಗಿರುವುದರಿಂದ ಆ ಲೆಕ್ಕದಲ್ಲಿ ಮತ್ತೊಂದು ನಿವೇಶನವನ್ನು ಕೊಡುವ ಭರವಸೆ ಸಿಕ್ಕಿದೆ. ಬಗರ್ ಹುಕುಂ ಸಕ್ರಮಕ್ಕೆ ಹಾಕಿಕೊಂಡ ಅರ್ಜಿ ಮತ್ತು ಪ್ರಾಂತ ರೈತ ಸಂಘದ ಮಧ್ಯ ಪ್ರವೇಶ ಬಡ ರೈತನ ಒಕ್ಕಲೆಬ್ಬಿಸುವುದನ್ನು ತಡೆಯಿತು.

ಮುಗುಳೂರು ಪಂಚಾಯ್ತಿ ರೈತರು ಭೂಮಿ ಉಳಿಸಿಕೊಂಡುದುದು

ಇದೇ. ಆನೇಕಲ್ ತಾಲ್ಲೂಕಿನಲ್ಲಿ ಇಂಥದ್ದೇ ಮತ್ತೊಂದು ಪ್ರಕರಣ ಗಮನಿಸಬೇಕಾದದ್ದು. ಅದು ಸರ್ಜಾಪುರ ಸಮೀಪದ ಮುಗುಳೂರು ಪಂಚಾಯ್ತಿ ವ್ಯಾಪ್ತಿಯ ಇಟ್ಟಂಗೂರು ಗ್ರಾಮದ ಬೂತಗಾನಹಳ್ಳಿ ಪಂಚಾಯ್ತಿ. ಬಿಜೆಪಿ ಅಧಿಕಾರದಲ್ಲಿರುವ ಪಂಚಾಯ್ತಿ ಅದು.

ಸರಿ ಇಲ್ಲಿಯ ಪಂಚಾಯ್ತಿ ಮುಖಂಡರಿಗೆ ಊರಿನ 'ಬಡವರಿಗೆ' ಸೈಟು ಅಂದರೆ ಮನೆ ನಿವೇಶನ 'ಹಂಚಬೇಕು ಎಂಬ 'ಮನಸ್ಸಾಯಿತು'. ನಿವೇಶನ ವಿಂಗಡಿಸಿ ಸೈಟು ಹಂಚ ಬೇಕಾದರೆ ಭೂಮಿ ಬೇಕು. ಭೂಮಿ ಎಲ್ಲಿದೆ ? ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸಿ ಅದೇ ಭೂಮಿಯನ್ನು 'ಬಡವರಿಗೆ' ಸೈಟು ಹಂಚಲು ಬಳಸಬಹುದಲ್ಲ. !! ಯೋಜನೆ ಸಿದ್ದವಾಗಿಯೇ ಬಿಟ್ಟಿತು. ಒಂದೂವರೆ- ಎರಡು ಎಕರೆ ತುಂಡು ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡಿದ್ದ ವೆಂಕಟರಮಣಪ್ಪ, ತೋಟಪ್ಪ, ಎಲ್ಲಪ್ಪ, ಕೃಷ್ಣಪ್ಪ, ಪಿಳ್ಳಣ್ಣ ಮುಂತಾದ ರೈತ ಕುಟುಂಬಗಳಿಗೆ ಸೇರಿದ ಸು 15 ಎಕರೆ ಜಮೀನಿಗೆ ಕುತ್ತು ಬಂದೇ ಬಿಟ್ಟಿತು.

ಮತ್ತೆ ಪ್ರಾಂತ ರೈತ ಸಂಘ ಇಲ್ಲೂ ಮಧ್ಯ ಪ್ರವೇಶ ಮಾಡಿತು.

ರೈತ ಬ್ಯಾಟಪ್ಪನ ಸಮಸ್ಯೆಯ ಕುರಿತು ಚರ್ಚೆ ಮಾಡಿದ ಅದೇ ಸಭೆ ಈ ವಿಷಯವನ್ನೂ ಚರ್ಚಿಸಿತು. ಈ ವಿಷಯದಲ್ಲಿಯೂ ಜಿಲ್ಲಾಧಿಕಾರಿಗಳ ನಿರ್ದೇಶನ ಹೊರಟಿತು. ಅದು ಬರೀ ನಿರ್ದೇಶನ ಮಾತ್ರವಲ್ಲ. ಮುಗುಳೂರು ಪಂಚಾಯ್ತಿಗೆ ಕೊಟ್ಟ ಎಚ್ಚರಿಕೆಯೂ ಆಗಿತ್ತು.

" ಬಗರ್ ಹುಕುಂ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಸೈಟು ಮಾಡುವಂತಿಲ್ಲ. ಅಗತ್ಯವಿದ್ದಲ್ಲಿ ಜಿಲ್ಲಾಧಿಕಾರಿಗೆ ಮಾತ್ರವೇ ಭೂಮಿಯನ್ನು ವಶಕ್ಕೆ ಪಡೆದುಕೊಳ್ಳುವ ಅಧಿಕಾರವಿದೆ. ಪಂಚಾಯ್ತಿ ಈ ಬಗ್ಗೆ ಯೋಜಿಸಿ ಶಿಫಾರಸ್ಸು ಮಾಡಬಹುದಷ್ಟೆ. "

ಈ ಆದೇಶ ಹೊರ ಬಿದ್ದ ಮೇಲೆ ಕೈ ತಪ್ಪಿ ಹೋಗಲಿದ್ದ ಬಡ ರೈತರ ಬಗರ್ ಹುಕುಂ ಸಾಗುವಳಿ ಭೂಮಿ ಮತ್ತೆ ರೈತರಿಗೆ ದಕ್ಕಿದೆ.

ನಗರದ ಸುತ್ತಲ 18 ಕಿ.ಮಿ. ವ್ಯಾಪ್ತಿ ಪ್ರಶ್ನೆಯೂ ಅರ್ಜಿ ನಮೂನೆ 50–53 ವಜಾ ಮಾಡಿದ್ದ ಪ್ರಕರಣವೂ

ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯಲ್ಲಿ ಹಳೆಯ ಬೆಂಗಳೂರಿನ ಸುತ್ತಲ 18 ಕಿ.ಮಿ. ವ್ಯಾಪ್ತಿಯೊಳಗೆ ಬರುತ್ತದೆ ಎಂಬ ಕಾರಣಕ್ಕಾಗಿ, ಬಗರ್ ಹುಕುಂ ಸಕ್ರಮಕ್ಕಾಗಿ ಸಲ್ಲಿಸಲಾಗಿದ್ದ ಅರ್ಜಿ ನಮೂನೆ 50 ಮತ್ತು 53 ಇವುಗಳನ್ನು ತಿರಸ್ಕರಿಸಿ ರೈತರು ಸಾಗುವಳಿ ಮಾಡಿಕೊಂಡಿದ್ದ ಕೃಷಿ ಜಮೀನನ್ನು ಎಪಿಎಂಸಿ ಮಾರುಕಟ್ಟೆಗೆ ಹಾಗೂ ಮತ್ತೊಂದೆಡೆ ಬಿಎಂಟಿಸಿ ಬಸ್ ಡಿಪೋಗೆಂದು ಜಮೀನು ಮಂಜೂರು ಮಾಡಿದ್ದ ಪ್ರಕರಣ ನಡೆದಿತ್ತು.

18 ಕಿ.ಮಿ. ವ್ಯಾಪ್ತಿಯೊಳಗೆ ಬಗರ್ ಹುಕುಂ ಸಾಗುವಳಿ ಸಕ್ರಮ ಮಾಡಬಾರದೆನ್ನುವ ಪ್ರಶ್ನೆಯು ಸರ್ಕಾರದ ಧೋರಣೆಯ ಪ್ರಶ್ನೆ. ಅದು ಸರ್ಕಾರದ ಮಟ್ಟದಲ್ಲಿ ಇತ್ಯರ್ಥವಾಗಬೇಕಾದ ಪ್ರಶ್ನೆ. ಪರಿಸ್ಥಿತಿ ಹೀಗಿದ್ದರೂ ಕೂಡ ಸಂಘಟನೆಯ ಮಧ್ಯ ಪ್ರವೇಶದಿಂದ ಜಿಲ್ಲಾಡಳಿತ ವತಿಯಿಂದ ಕೆಲವೊಂದು ಪರಿಹಾರಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.

"ಯಥಾ ಸ್ಥಿತಿ ಕಾಪಾಡಿ" ಎಂಬ ಆದೇಶ

2007 ರಲ್ಲಿ ದಾಸನ ಪುರ ಹೋಬಳಿಯ ಹೊನ್ನಸಂದ್ರ ಗ್ರಾಮದಲ್ಲಿ 11 ಎಕರೆ 28 ಗುಂಟೆ ಜಮೀನನ್ನು ಬಿಎಂಟಿಸಿ ಸಂಸ್ಥೆಗೆಂದು ಮಂಜೂರು ಮಾಡಲಾಗಿದೆ. ಆದರೆ ಆ

ಪುಟ 12 ಕ್ಕೆ

ಕರ್ನಾಟಕದಲ್ಲಿ ದೇವರಾಜ ಅರಸರ ಕಾಲದಲ್ಲಿ ಜಾರಿಗೆ ಬಂದ ಭೂ ಸುಧಾರಣೆಯೇ ಭಾರಿ ಕ್ರಾಂತಿಕಾರಿ ಎನ್ನಲಾಗುತ್ತದೆ. ಆದರೆ ಈ ಭೂ ಸುಧಾರಣೆಯ ನಂತರವೂ ರಾಜ್ಯದ ಲಕ್ಷಾಂತರ ಭೂಹೀನ ಕೂಲಿಕಾರರ ಕುಟುಂಬಗಳು, ಬಡ ಗೇಣಿದಾರ ಕುಟುಂಬಗಳು ತಮ್ಮದೆನ್ನುವ ಭೂಮಿ ಇಲ್ಲದೇ ಭೂ ಹೀನ ಕುಟುಂಬಗಳಾಗಿಯೇ ಉಳಿದವು. ಅಂದರೆ ದೇವರಾಜ ಅರಸರ ಭೂ ಸುಧಾರಣೆ ತುಂಬಾ ಸೀಮಿತವಾದುದಾಗಿತ್ತು. ಈಗಲಾದರೂ ರಾಜ್ಯದಲ್ಲಿ ಭೂಮಿ ಇಲ್ಲದ ಇಲ್ಲ ಬಡವರಿಗೆ ಭೂಮಿ ನೀಡುವ ಸುಧಾರಣೆ ಜಾರಿಗೆ ಬರಬೇಕಿದೆ.

ಕರ್ನಾಟಕದಲ್ಲಿ ಭೂ ಸುಧಾರಣೆ

ನನಸಾಗದ ಭೂಮಿಯ ಕನಸು

ನಿತ್ಯಾನಂದ ಸ್ವಾಮಿ

1956 ರ ನವೆಂಬರ್ 1 ರಂದು ಕರ್ನಾಟಕ ರಾಜ್ಯ ಉದಯವಾಯಿತು. ಅದಕ್ಕೂ ಮೊದಲು ಮೈಸೂರು, ಮದ್ರಾಸ್, ಮುಂಬೈ, ಹೈದರಾಬಾದ್ ಮತ್ತು ಕೊಡಗು ಎಂಬ ಪ್ರತ್ಯೇಕ ವಿಭಾಗಗಳಲ್ಲಿ ಕರ್ನಾಟಕ ಹಂಚಿಹೋಗಿತ್ತು. ಅಂದಿನ ಭೂಸಂಬಂಧಗಳು ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೂಪದಲ್ಲಿದ್ದವು. ಆಯಾ ಪ್ರದೇಶಗಳಿಗೆ ಆಯಾ ರಾಜ್ಯದ ಭೂಮಸೂದೆಗಳು ಅನ್ವಯವಾಗುತ್ತಿದ್ದವು. ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟ ಭಾಗಗಳಲ್ಲಿ ಜಮೀನ್ದಾರರ ದಬ್ಬಾಳಿಕೆ ಘೋರವಾಗಿತ್ತು. ಮದರಾಸು ಆಡಳಿತದಲ್ಲಿದ್ದ ಕರ್ನಾಟಕದ ಭಾಗಗಳಲ್ಲಿ ಬಿಟ್ಟಿ ದುಡಿಮೆ ಮತ್ತು ವಿಪರೀತ ಗೇಣಿ ವಸೂಲಿ ಮಾಡಲಾಗುತ್ತಿತ್ತು. ಅದರಂತೆಯೇ ಮುಂಬೈ ಕರ್ನಾಟಕದಲ್ಲಿಯೂ ಗೇಣಿದಾರರು ತೀವ್ರ ಶೋಷಣೆಗೆ ಒಳಪಟ್ಟಿದ್ದರು. ಮೈಸೂರು ರಾಜ್ಯದಲ್ಲಿ ಟಿಪ್ಪು ಕಾಲದಲ್ಲಿ ಜಮೀನ್ದಾರಿ ಪದ್ಧತಿ ರದ್ದಾಗಿ ರೈತವಾರಿ ಪದ್ಧತಿ ಜಾರಿಗೆ ಬಂದಿತ್ತು. ಕೊಡಗು ಪ್ರದೇಶದಲ್ಲಿ ಜಮೀನ್ದಾರಿ ಪದ್ಧತಿಯಿಲ್ಲದಿದ್ದರೂ, ಬಲಿಷ್ಠ ಹಿಡುವಳಿದಾರರು ಕೂಲಿಯಾಳುಗಳಿಂದ ಬಿಟ್ಟಿ ದುಡಿಮೆ ಮಾಡಿಸಿಕೊಳ್ಳುತ್ತಿದ್ದರು. ತೀವ್ರ ದಮನಕ್ಕೆ ಒಳಗಾದ ಈ ಎಲ್ಲ ಪ್ರದೇಶಗಳ ಗೇಣಿದಾರರು, ಕೂಲಿಕಾರರು, ಜಮೀನ್ದಾರರ ಶೋಷಣೆಯ ವಿರುದ್ಧ ಚಳುವಳಿಗಳನ್ನು ನಡೆಸಿದ್ದರ ಪರಿಣಾಮವಾಗಿ ಗೇಣಿ ಪದ್ಧತಿಯನ್ನು ನಿಯಂತ್ರಿಸುವ ಕೆಲವು ಕಾನೂನುಗಳು ಜಾರಿಗೆ ಬರುವಂತಾಯಿತು. ಮುಂಬೈ ಗೇಣಿದಾರರ ಕಾಯ್ದೆ ಜಾರಿಗೆ ಬಂದ ಪರಿಣಾಮವಾಗಿ ಗೇಣಿಯು ನಾಲ್ಕರಲ್ಲಿ ಒಂದು ಭಾಗದ ಬದಲು ಎಂಟರಲ್ಲಿ ಒಂದು ಭಾಗಕ್ಕೆ ಇಳಿಯಿತು.



ಕಾಗೋಡು ಸತ್ಯಾಗ್ರಹ

1950-51 ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೋಡು ಎಂಬಲ್ಲಿ ಗೇಣಿ ಕಡಿತ ಹಾಗೂ ಫಸಲಿನ ಅರ್ಧಭಾಗವನ್ನು ಗೇಣಿದಾರರಿಗೆ ಬಿಟ್ಟುಕೊಡಬೇಕು ಮತ್ತು ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಚಾರಿತ್ರಾರ್ಹ ಹೋರಾಟವೊಂದು ನಡೆಯಿತು. 'ಕಾಗೋಡು ಸತ್ಯಾಗ್ರಹ' ಎಂದೇ ಪ್ರಸಿದ್ಧವಾದ ಈ ಹೋರಾಟವನ್ನು ದಲಿತ ಗೇಣಿದಾರರು ನಡೆಸಿದ ಹೋರಾಟವಾಗಿತ್ತು. ಸಮಾಜವಾದಿ ನಾಯಕ ಶ್ರೀ ರಾಮ ಮನೋಹರ ಲೋಹಿಯಾ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಚಳುವಳಿಗೆ ನೇತೃತ್ವ ನೀಡಿದ್ದ ಶ್ರೀ. ಗೋಪಾಲಗೌಡರ ಬಂಧನದೊಂದಿಗೆ ಚಳುವಳಿ ನಿಂತುಹೋಯಿತಾದರೂ ಮುಂದೆ ಮೈಸೂರು ವಿಧಾನಸಭೆಯಲ್ಲಿ ಒಂದು ಭೂ ಮಸೂದೆಯನ್ನು ತರಲು ತೀರ್ಮಾನ ಆಗುವಂತಾಯಿತು.

ಕರ್ನಾಟಕದ ಐದು ಭಾಗಗಳು ಒಂದಾದ ಸಂದರ್ಭದಲ್ಲಿ ಈ ಹಿಂದೆ ಗೇಣಿದಾರರ ಹೋರಾಟಗಳಿಂದ ಪಡೆದಿದ್ದ ಭೂಕಾಯ್ದೆಗಳು ಹೊಸ ಮೈಸೂರು ರಾಜ್ಯದಲ್ಲಿ ಮೂಲೆಗುಂಪಾದವು. ಉದಾಹರಣೆಗೆ ಮುಂಬೈ ಕರ್ನಾಟಕದ ಜಿಲ್ಲೆಗಳಲ್ಲಿ 1956ರಲ್ಲಿ ಹೊಸ ಭೂ ಮಸೂದೆಯೊಂದು ಜಾರಿಗೆ ಬಂದಿತ್ತು. ಅದರ ಪ್ರಕಾರ 1956 ಏಪ್ರಿಲ್ ಒಂದರಂದು ಯಾರು ಉಳುಮೆಯಲ್ಲಿದ್ದರೋ ಅವರಿಗೇ ಹೊಲದ ಒಡೆತನವನ್ನು ನೀಡಲಾಗುತ್ತಿತ್ತು. ಆದರೆ ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಗಳು ನೂತನ ಮೈಸೂರು ರಾಜ್ಯಕ್ಕೆ ಸೇರಿದ್ದರಿಂದ ಆ ಕಾಯ್ದೆಗೆ ಇಲ್ಲಿ ಮಾನ್ಯತೆ ಸಿಗಲಿಲ್ಲ. ಏಕೀಕರಣದ ನಂತರ ಆಯಾ ಪ್ರದೇಶಗಳ ಭೂಮಸೂದೆಗಳನ್ನು ಒಂದುಗೂಡಿಸಿ ಸಮಗ್ರ ಮಸೂದೆಯೊಂದನ್ನು ರೂಪಿಸಿ ಜಾರಿಗೆ ತರಬೇಕೆಂಬ ಕೂಗು ನಿಧಾನವಾಗಿ ಹೆಚ್ಚುತ್ತಾ ಹೋಯಿತು.

ಕಮ್ಯುನಿಸ್ಟರ ಪಾತ್ರ

ಗೇಣಿದಾರರ ಹಕ್ಕುಗಳಿಗಾಗಿ, ಭೂಸುಧಾರಣೆಗಳಿಗಾಗಿ ಕರ್ನಾಟಕದಲ್ಲಿ ವ್ಯವಸ್ಥಿತವಾದ ಚಳುವಳಿಯನ್ನು ಹುಟ್ಟುಹಾಕಿದ ಕೀರ್ತಿ ಕಮ್ಯೂನಿಸ್ಟರಿಗೆ ಸಲ್ಲುತ್ತದೆ ಎಂದರೆ ತಪ್ಪಾಗದು. 1957 ರಲ್ಲಿ ಪಕ್ಕದ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಚುನಾವಣೆಯಲ್ಲಿ ಗೆದ್ದು ಅಧಿಕಾರವಹಿಸಿಕೊಂಡಿತ್ತು. ಅಧಿಕಾರಕ್ಕೆ ಬಂದ ಒಂದೆರಡು ದಿನಗಳಲ್ಲಿಯೇ ಮುಖ್ಯಮಂತ್ರಿ ಕಾಮ್ರೇಡ್ ಇ.ಎಂ.ಎಸ್.ನಂಬೂದರಿ ಪಾದ್ ಅವರ ಸರ್ಕಾರ 'ಗೇಣಿದಾರ ರೈತರನ್ನು ಒಕ್ಕಲೆಬ್ಬಿಸಬಾರದು' ಎಂದು ಸುಗ್ರೀವಾಜ್ಞೆ ಹೊರಡಿಸಿದಾಗ ಅದು ಭೂಮಿಯ ಹಸಿವೆಯಿಂದ ಬಳಲುತ್ತಿದ್ದ ಕರ್ನಾಟಕದ ಗೇಣಿದಾರರ ಗಮನ ಸೆಳೆಯದೆ ಇರಲಿಲ್ಲ. ಕರ್ನಾಟಕದ ಅಂದಿನ ಕಮ್ಯೂನಿಸ್ಟ್ ನಾಯಕರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಕ್ರಿಯಾಶೀಲ ಪಾತ್ರವನ್ನು ನಿರ್ವಹಿಸಿದ್ದರು ಮಾತ್ರವಲ್ಲ ರಾಜ್ಯದಲ್ಲಿ ರೈತ ಚಳುವಳಿಯನ್ನು ಹುಟ್ಟುಹಾಕಲು ಗಮನ ನೀಡಿದರು. ಕಾರವಾರ ಪ್ರದೇಶದಲ್ಲಿ ಮಹಾರಾಷ್ಟ್ರದ ಕಮ್ಯೂನಿಸ್ಟ್ ನಾಯಕರಾದ ಪರುಳೇಕರ್ ದಂಪತಿಗಳ ಮಾರ್ಗದರ್ಶನದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಹೆಸರಿನಲ್ಲಿ ರೈತ ಚಳುವಳಿ ಕ್ರಿಯಾಶೀಲವಾಗಿತ್ತು. ಕೊಡಗಿನಲ್ಲಿ ಕಮ್ಯೂನಿಸ್ಟ್ ಮುಖಂಡರು ರೈತ ಸಂಘಟನೆಯನ್ನು ಹುಟ್ಟು ಹಾಕಿದ್ದರು. ಆಂಧ್ರದ ಗಡಿಗೆ ಹೊಂದಿಕೊಂಡಿರುವ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟದ ಪ್ರಭಾವ ಗಾಢವಾಗಿತ್ತು. ಕಮ್ಯೂನಿಸ್ಟ್ ಮುಖಂಡರ ನೇತೃತ್ವದಲ್ಲಿ ಜೋಡಿ ಇನಾಂ ರದ್ದತಿಗೆ ಆಗ್ರಹಿಸಿ ನಡೆಸಲಾದ ಚಳುವಳಿ, ಮೈಸೂರು ಸರ್ಕಾರ ಜೋಡಿ ಇನಾಂ ರದ್ದತಿ ಶಾಸನವನ್ನು ಜಾರಿಗೆ ತರುವುದರೊಂದಿಗೆ ಯಶಸ್ವಿಯಾಗಿತ್ತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇರಳದ ಹೋರಾಟಗಳ ನೇರ ಪ್ರಭಾವದಿಂದಾಗಿ ಬಹಳ ಹಿಂದೆಯೇ ಕಮ್ಯೂನಿಸ್ಟ್ ಮುಖಂಡರ ನೇತೃತ್ವದಲ್ಲಿ ಬಹಳ ಹಿಂದೆಯೇ ಕಮ್ಯೂನಿಸ್ಟ್ ಮುಖಂಡರ ನೇತೃತ್ವದಲ್ಲಿ ಗೇಣಿದಾರ ರೈತರ ಸಂಘಟನೆ-ಚಳುವಳಿ ಆರಂಭವಾಗಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ಕ್ರಿಯಾಶೀಲವಾಗಿದ್ದ ರೈತ ಸಂಘಗಳು ಒಂದಾಗಿ, 1957ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸುವ ಮೂಲಕ ಕರ್ನಾಟಕ ಪ್ರಾಂತ ರೈತ ಸಂಘದ ಸ್ಥಾಪನೆಯಾಯಿತು. ಕರ್ನಾಟಕ ಪ್ರಾಂತ ರೈತ ಸಂಘ ಗೇಣಿದಾರರ ಹಕ್ಕುಗಳಿಗಾಗಿ ಹಾಗೂ ಪ್ರಗತಿಪರ ಭೂಸುಧಾರಣೆಗಾಗಿ ಚಳುವಳಿಯನ್ನು ವಿಸ್ತರಿಸುತ್ತಾ ತೀವ್ರಗೊಳಿಸುತ್ತಾ ನಡೆಯಿತು.

ಮೈಸೂರು ಸರ್ಕಾರದ ನೇಮಿಸಿದ ಸಮಿತಿ

ಪರಿಣಾಮವಾಗಿ 1957ರಲ್ಲಿ ಮೈಸೂರು ಸರ್ಕಾರ ಭೂಸುಧಾರಣಾ ಸಮಿತಿಯೊಂದನ್ನು ನೇಮಿಸಿತು. ಇದರ ಅಧ್ಯಕ್ಷರಾಗಿ ಬಿ.ಡಿ. ಜತ್ತಿ ಅವರು ನೇಮಕಗೊಂಡರು. ಈ ಸಮಿತಿಯು ಒಂದೇ ವರ್ಷದಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಇದರ ಶಿಫಾರಸ್ಸುಗಳನ್ನು ಆಧರಿಸಿ ಮಸೂದೆ ಸಿದ್ಧವಾಯಿತು. 1961ರಲ್ಲಿ ಅದು ಮೈಸೂರು ಭೂಸುಧಾರಣಾ ಕಾಯ್ದೆಗಾಗಿ ಶಾಸನಸಭೆಯಲ್ಲಿ ಅಂಗೀಕಾರಗೊಂಡಿತು. ಮಸೂದೆಗೆ ಒಂದು ವರ್ಷ ಒಳಗಾಗಿ ರಾಷ್ಟ್ರಪತಿಯವರ ಅಂಕಿತವೂ ದೊರೆಯಿತು. ಆದರೆ ಕಾಯ್ದೆ ಜಾರಿಗೆ ಒಂದದ್ದು 1965ರಲ್ಲಿ. 5 ವರ್ಷಗಳ ಅವಧಿಯಲ್ಲಿ ಜಮೀನ್ದಾರರು ತಮ್ಮ ಹಿತ ಕಾಪಾಡಿಕೊಳ್ಳಲು ಅಗತ್ಯ ಏರ್ಪಾಡುಗಳನ್ನು ಮಾಡಿಕೊಂಡರು.

'ಭೂಮಿ' ಅಲ್ಲ 'ಗೇಣಿ ಸುಧಾರಣಾ' ಕಾಯ್ದೆ

1961ರ ಕಾಯ್ದೆಯನ್ನು ಭೂಸುಧಾರಣಾ ಕಾಯ್ದೆ ಎನ್ನುವುದಕ್ಕಿಂತ ಗೇಣಿ ಸುಧಾರಣಾ ಕಾಯ್ದೆ ಎನ್ನುವುದು ಹೆಚ್ಚು ಸೂಕ್ತ. ಈ ಕಾಯ್ದೆಯಿಂದ ರಾಜ್ಯದ ಎಲ್ಲಾ ಭಾಗಗಳ ಗೇಣಿದಾರರಿಗೆ ಏಕರೂಪದ ಗೇಣಿ ನಿಗದಿಯಾಯಿತು. ಈ ಕಾಯ್ದೆ ಪ್ರಕಾರ ಗೇಣಿದಾರರು ನೀರಾವರಿ ಪ್ರದೇಶದಲ್ಲಿ ಉತ್ಪನ್ನದ ಶೇ.25 ರಷ್ಟು ಮತ್ತು ಒಣ ಭೂಪ್ರದೇಶದಲ್ಲಿ ಉತ್ಪನ್ನದ ಶೇ.20 ರಷ್ಟು ಗೇಣಿ ನೀಡಬೇಕಾಯಿತು. ಇದರಿಂದ ಗೇಣಿ ಪದ್ಧತಿ ಮುಂದುವರೆಯುವಂತಾಯಿತು. ಕೆಲವು ಕಡೆ, ಮುಖ್ಯವಾಗಿ ಮುಂಬೈ ಕರ್ನಾಟಕ ಜಿಲ್ಲೆಯ ಗೇಣಿದಾರರು ಮೊದಲಿಗಿಂತ ಹೆಚ್ಚು ಗೇಣಿ (ಶೇ.16 ರ ಬದಲು ಶೇ.25) ಕೊಡುವಂತಾಯಿತು.

ಜಮೀನ್ದಾರರ ಪರ ಭೂಮಿತಿ ನಿಗದಿ

ಭೂಮಿಯ ಗರಿಷ್ಠ ಮಿತಿಯ ವಿಷಯದಲ್ಲಿ ಈ ಕಾಯ್ದೆ ಜಮೀನ್ದಾರರಿಗೇ ಉದಾರವಾಗಿತ್ತು. ನೀರಾವರಿ ಪ್ರದೇಶದಲ್ಲಿ 5 ಜನರಿರುವ ಒಂದು ಕುಟುಂಬ ಗರಿಷ್ಠ 27 ಎಕರೆ ಭೂಮಿಯನ್ನು

ಹೊಂದಲು ಈ ಕಾಯ್ದೆ ಅವಕಾಶ ನೀಡಿತು. ಐದಕ್ಕಿಂತ ಹೆಚ್ಚು ಸದಸ್ಯರಿರುವ ಸಂದರ್ಭದಲ್ಲಿ ಪ್ರತಿ ಸದಸ್ಯನಿಗೆ 5 ಎಕರೆಯಂತೆ ಹತ್ತು ಜನರಿರುವ ಕುಟುಂಬಕ್ಕೆ 54 ಎಕರೆ ಭೂಮಿಯನ್ನು ಹೊಂದಲು ಅವಕಾಶವಿತ್ತು. ಒಣ ಭೂಪ್ರದೇಶದಲ್ಲಿ ಐದು ಜನರ ಕುಟುಂಬವೊಂದು 216 ಎಕರೆ ಭೂಮಿಯನ್ನು ಮತ್ತು ಹತ್ತು ಜನರಿರುವ ಕುಟುಂಬವೊಂದು 432 ಎಕರೆ ಭೂಮಿಯನ್ನು ಹೊಂದಬಹುದಾಗಿತ್ತು. ಗೇಣಿಗೆ ನೀಡಿರುವ ಭೂಮಿಯನ್ನು ಪುನರ್‌ಸ್ವಾಧೀನ ಪಡಿಸಿಕೊಳ್ಳಲು ಸಹ 1961ರ ಕಾಯ್ದೆ ಸಾಕಷ್ಟು ಅವಕಾಶಗಳನ್ನು ನೀಡಿತು.

ವಿಫಲತೆ ವಿರೋಧಿಸಿ ಚಳುವಳಿ

ಭೂಸುಧಾರಣೆಗಳ ಮೂಲ ಆಶಯಗಳನ್ನು ಈಡೇರಿಸುವಲ್ಲಿ 1961 ರ ಕಾಯ್ದೆ ಸಂಪೂರ್ಣ ವಿಫಲವಾಯಿತು. ಕಾಯ್ದೆಯಲ್ಲಿರುವ ಲೋಪದೋಷಗಳನ್ನು ತಿದ್ದುಪಡಿಮಾಡಬೇಕು. ಗರಿಷ್ಠ ಭೂಮಿತಿಯನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಿ ಹೋರಾಟ ಮುಂದುವರೆಯಿತು. ಈ ಅವಧಿಯಲ್ಲಿ ರಾಜ್ಯಧ ಹಲವೆಡೆ ದೊಡ್ಡ ಸಂಖ್ಯೆಯಲ್ಲಿ ಗೇಣಿದಾರರನ್ನು ಒಕ್ಕಲೆಬ್ಬಿಸಲಾಯಿತು. ಆದರೆ ಇದೇ ಕಾಲಘಟ್ಟದಲ್ಲಿ (1969-70) ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬೃಹತ್ ಭೂ ಆಕ್ರಮಣ ಚಳುವಳಿ ನಡೆಯಿತು. ಕೇರಳದಿಂದ ಕಾಮ್ರೇಡ್ ಎ.ಕೆ.ಗೋಪಾಲನ್ ಇಲ್ಲಿಗೆ ಬಂದು ಚಳುವಳಿಯಲ್ಲಿ ಭಾಗವಹಿಸಿದ್ದರು. ಸಾವಿರಾರು ಜನರ ಬಂಧನವಾಯಿತು. ಪರಿಣಾಮವಾಗಿ ಸುಮಾರು 10 ಸಾವಿರ ಎಕರೆಯಷ್ಟು ಸರ್ಕಾರಿ ಕಂದಾಯ / ಅರಣ್ಯ ಭೂಮಿಯನ್ನು ದೊರಕಿಸಿಕೊಳ್ಳಲು ಸಾಧ್ಯವಾಯಿತು.

ಈ ಎಲ್ಲ ಒತ್ತಡಗಳ ಹಿನ್ನೆಲೆಯಲ್ಲಿ 1974ರಲ್ಲಿ ತಿದ್ದುಪಡಿಗೊಂಡ ಮಸೂದೆ ಶಾಸನ ಸಭೆಯಲ್ಲಿ ಪಾಸಾಯಿತು. ಒಂದು ವರ್ಷದ ನಂತರ ಮಸೂದೆ ರಾಷ್ಟ್ರಪತಿಗಳ ಅಂಕಿತ ಪಡೆದು ಶಾಸನವಾಯಿತು. ಹಿಂದಿನ ಕಾಯ್ದೆಗೆ ಹೋಲಿಸಿದರೆ, 1974 ಕಾಯ್ದೆ ಸ್ವಾಗತಾರ್ಹವಾಗಿತ್ತು. ಗೇಣಿ ಪದ್ಧತಿಯನ್ನು ರದ್ದುಗೊಳಿಸಿದ್ದು, ಗರಿಷ್ಠ ಭೂ ಮಿತಿಯನ್ನು ಕಡಿಮೆ ಮಾಡಿದ್ದು ಅದರ ಮುಖ್ಯ ಸ್ವಾಗತಾರ್ಹ ಅಂಶಗಳು. ಗರಿಷ್ಠ ಭೂಮಿತಿಯನ್ನು ನಿರ್ಧರಿಸುವಾಗ ಐದು ಜನರಿರುವ ಕುಟುಂಬವೊಂದು 10 ಎಕರೆ ಭೂಮಿಯನ್ನು ಹೊಂದಬಹುದು. ಪ್ರತಿ ಹೆಚ್ಚುವರಿ ಸದಸ್ಯರಿಗೆ 2 ಎಕರೆಯಂತೆ ಗರಿಷ್ಠ 20 ಎಕರೆ ಭೂಮಿಯನ್ನು ಹೊಂದಬಹುದು. ಮೂರು ವಿಧದ ಭೂಮಿಗಳನ್ನು ಗುರುತಿಸಲಾಗಿದ್ದು ಸರಕಾರಿ ನೀರಾವರಿ ಇರುವ ಭೂಮಿಯಾದರೆ ಗರಿಷ್ಠ 10 ಎಕರೆ, ಮಳೆಯ ನೀರಿನಿಂದ ಕೃಷಿ ಮಾಡುವುದಾದರೆ 20 ಎಕರೆ ಹಾಗೂ ಒಣ ಭೂಪ್ರದೇಶವಾಗಿದ್ದರೆ 40 ಎಕರೆ ಗರಿಷ್ಠ ಮಿತಿಯನ್ನು ಹೇರಲಾಗಿತು.

ಕಾಂಗ್ರೆಸ್ ಸರ್ಕಾರ 1974 ರ ಈ ಶಾಸನವನ್ನು ಬಾರೀ ಕ್ರಾಂತಿಕಾರಕ ಎಂದು ಪ್ರಚಾರ ಮಾಡಿತು. ಆದರೆ ಗೇಣಿದಾರರು ಸಂಘಟಿತರಾಗಿ ಚಳುವಳಿಯನ್ನು ನಡೆಸುತ್ತಾ ಬಂದಿರುವ ಕಡೆಗಳಲ್ಲಿ ಮಾತ್ರ ಗೇಣಿದಾರರಿಗೆ ಕಾಯ್ದೆಯ ಲಾಭ ದೊರಕುವಂತಾಯಿತು. ಭೂನ್ಯಾಯ ಮಂಡಳಿಗಳಲ್ಲಿ ಜಮೀನ್ದಾರರ ಪ್ರತಿನಿಧಿಗಳು, ಲಂಚಕೋರ ಅಧಿಕಾರಿಗಳೇ ತುಂಬಿದ್ದರಿಂದ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮೂನೆ 7ರಲ್ಲಿ ಡಿಕ್ಲರೇಷನ್ ತುಂಬಿದ ಗೇಣಿದಾರರ (1,76,235) ಪೈಕಿ



1,36,880 ಗೇಣಿದಾರರಿಗೆ ಮಾತ್ರ ಭೂಮಿಯ ಹಕ್ಕು ಸಿಕ್ಕಿದೆ. ಉಳಿದ 40 ಸಾವಿರಕ್ಕೂ ಹೆಚ್ಚು ಅರ್ಜಿಗಳು ಇನ್ನೂ ಇತ್ಯರ್ಥವಾಗದೆ ಉಳಿದುಕೊಂಡಿವೆ. ರಾಜ್ಯದಲ್ಲಿ ಒಟ್ಟು 2,94,152 ಎಕರೆ ಹೆಚ್ಚುವರಿ ಭೂಮಿ ಎಂದು ಘೋಷಿಸಲಾಗಿದ್ದರೂ ಕೇವಲ 1,54,293 ಎಕರೆ ಭೂಮಿಯನ್ನು ಮಾತ್ರ ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಸ್ವಾಧೀನ ಪಡಿಸಿಕೊಳ್ಳಲಾದ 1,54,293 ಎಕರೆಗಳಲ್ಲಿ ಕೇವಲ 1,04,437 ಎಕರೆ ಭೂಮಿಯನ್ನು ಮಾತ್ರ ವಿತರಿಸಲಾಗಿದೆ. ವಿತರಣೆಯಾದ ಒಟ್ಟು 1,04,437 ಎಕರೆ ಭೂಮಿಯಲ್ಲಿ ಶೇ.62 ರಷ್ಟು ಭೂಮಿ ದಲಿತ ಮತ್ತು ಬುಡಕಟ್ಟು ಜನರಿಗೆ ಹೋಗಿದೆ ಎನ್ನುವುದು ಸಮಾಧಾನಕರ ಸಂಗತಿಯಾಗಿದ್ದರೂ ದಲಿತರಿಗೆ ಮತ್ತು ಬುಡಕಟ್ಟು ಜನರಿಗೆ ವಿತರಣೆ ಮಾಡಲಾದ ಭೂಮಿಯ ಶೇ.70 ರಷ್ಟು ಭೂಮಿ ಒಣ ಭೂಮಿಯಾಗಿದೆ. ದಲಿತರಿಗೆ ವಿತರಣೆಯಾದ ಭೂಮಿಯೊಳಗೆ ಫಲಾನುಭವಿಗಳು ಕಾಲಿಡದಂತೆ ಅವರನ್ನು ಬೆದರಿಸಿ ಆ ಭೂಮಿಯನ್ನು ಭೂಮಾಲಿಕರೇ ಅಕ್ರಮವಾಗಿ ತಮ್ಮ ವಶದಲ್ಲಿಟ್ಟು ಕೊಂಡು ಸಾಗುವಳಿ ಮಾಡುತ್ತಿರುವ ಅನೇಕ ಪ್ರಕರಣಗಳಿವೆ.

ಉತ್ತರ ಕರ್ನಾಟಕ, ಮುಖ್ಯವಾಗಿ ಹೈದ್ರಾಬಾದ್ ಕರ್ನಾಟಕ ಪಾಳೆಗಾರಿ ಭೂಮಾಲೀಕರು ಪ್ರಬಲರಾಗಿದ್ದ ಪ್ರದೇಶ. ಇಲ್ಲಿ ಕಾಯ್ದೆ ಜಾರಿಗೆ ಬರುವ ಮೊದಲೇ ಗೇಣಿದಾರರನ್ನು ದೊಡ್ಡ ಸಂಖ್ಯೆಯಲ್ಲಿ ಒಕ್ಕಲೆಬ್ಬಿಸಲಾಯಿತು. ಉಳಿದಿದ್ದ ಗೇಣಿದಾರರನ್ನು ಬೆದರಿಸಿ ಡಿಕ್ಲರೇಷನ್ ತುಂಬುವುದನ್ನೇ ವ್ಯವಸ್ಥಿತವಾಗಿ ತಡೆಹಿಡಿಯಲಾಯಿತು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಭೂಮಿ ಹೆಚ್ಚುವರಿ ಭೂಮಿ ಎಂದು ಘೋಷಿತವಾಗಿದ್ದರೂ ಸರ್ಕಾರ ವಶಪಡಿಸಿಕೊಂಡದ್ದು ಅತ್ಯಲ್ಪ ಮತ್ತು ವಿತರಣೆ ಮಾಡಿದ್ದು ಇನ್ನೂ ಕಮ್ಮಿ. ಹೀಗಾಗಿ ಇಂದು ಉತ್ತರ ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿ ಭೂರಹಿತ ಕೂಲಿಕಾರ ಕುಟುಂಬಗಳು ಅತ್ಯಧಿಕ ಸಂಖ್ಯೆಯಲ್ಲಿವೆ. ಇವರೆಲ್ಲರೂ ಭೂಮಿಯ ಹಕ್ಕನ್ನು ದೊರಕಿಸಿ ಕೊಳ್ಳಲಾಗದ ಗೇಣಿದಾರ ಕುಟುಂಬಗಳಿಗೆ ಸೇರಿದವರೇ ಆಗಿರುತ್ತಾರೆ.

ಸೀಮಿತ ಲಾಭ

ಕರ್ನಾಟಕದಲ್ಲಿ ಕಾಂಗ್ರೆಸಿನ ಭೂಸುಧಾರಣೆಗಳಿಂದ ಗೇಣಿದಾರರಿಗೆ ಸ್ವಲ್ಪ ಮಟ್ಟದ ಲಾಭ ಆಗಿದೆ. ಆದರೆ ಕಾಯ್ದೆಯಲ್ಲಿ ಉಳಿದುಕೊಂಡಿರುವ ಲೋಪದೋಷಗಳಿಂದಾಗಿ ಒಬ್ಬೊಬ್ಬ ಭೂಮಾಲಿಕರಿಗೆ ಇಂದಿಗೂ ನೂರಾರು ಎಕರೆ ಭೂಮಿಯನ್ನು ತಮ್ಮ ತಮ್ಮ ಕುಟುಂಬದ ಸದಸ್ಯರ ಹಾಗೂ ಬೇನಾಮಿ ಹೆಸರುಗಳಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಸ್ವಂತ ಸಾಗುವಳಿ ಮಾಡುವ ಹೆಸರಿನಲ್ಲಿ ಭೂಮಾಲಿಕರು ತಮ್ಮ ದೊಡ್ಡ ದೊಡ್ಡ ಹಿಡುವಳಿಗಳನ್ನು ಉಳಿಸಿಕೊಂಡಿದ್ದಾರೆ. ಇನ್ನೂ ಹೆಚ್ಚು ಪ್ರಗತಿಪರವಾದ, ಸಮಗ್ರವಾದ ಭೂಸುಧಾರಣೆಗಾಗಿ ರಾಜ್ಯದಲ್ಲಿ ಹೋರಾಟ ನಡೆಯಬೇಕಾಗಿದೆ.

ಉದಾರೀಕರಣದ ಪರಿಣಾಮಗಳು :

1990ರ ದಶಕದಲ್ಲಿ ಅನುಷ್ಠಾನಕ್ಕೆ ತರಲಾದ ಉದಾರೀಕರಣದ ನೀತಿಗಳ ಪರಿಣಾಮವಾಗಿ ಭಾರತದ ಬಂಡವಾಳಶಾಹಿ -ಭೂಮಾಲಕ ವರ್ಗಗಳ ಸರ್ಕಾರಗಳು ಭೂಸುಧಾರಣೆಗಳ ಬಗ್ಗೆ ಮಾತೆತ್ತುವುದನ್ನೇ ಕೈಬಿಟ್ಟಿವೆ. ಮಾತ್ರವಲ್ಲ ಅಳಿದುಳಿದ ಭೂಸುಧಾರಣಾ ಕ್ರಮಗಳನ್ನು ಸಡಿಲಗೊಳಿಸಿ, ಬಾರೀ ಪ್ರಮಾಣದ ಕೃಷಿ ಭೂಮಿಯನ್ನು ದೊಡ್ಡಬಂಡವಾಳಶಾಹಿ ಮನೆತನಗಳಿಗೆ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡಲು ಹಾಗೂ ಲೀಸ್ ಆಧಾರದಲ್ಲಿ ಒದಗಿಸಲು ಮುಂದಾಗಿವೆ. ಹೂಡಿಕೆಯನ್ನು ಆಕರ್ಷಿಸುವ ಹೆಸರಿನಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಹೆಚ್ಚೆಚ್ಚು ರಿಯಾಯ್ತಿಗಳನ್ನು ನೀಡಲು ರಾಜ್ಯ ಸರ್ಕಾರಗಳ ನಡುವೆ ಅತ್ಯಂತ ಅನಾರೋಗ್ಯಕರವಾದ ಪೈಪೋಟಿ ಏರ್ಪಟ್ಟಿದೆ. ಭೂ ಸುಧಾರಣೆ, ಭೂ ಕಂದಾಯ ಮೊದಲಾದ ಭೂಮಿಗೆ

ಪುಟ 10 ಕ್ಕೆ....

2001 ರಲ್ಲಿ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಸುಮಾರು ಒಂದು ಕೋಟಿ ನಾಲ್ಕು ಲಕ್ಷ ಕುಟುಂಬಗಳಿವೆ. ಇವರಲ್ಲಿ ಸುಮಾರು 35 ಲಕ್ಷ ಕುಟುಂಬಗಳಿಗೆ ಅಂದರೆ ಶೇ.33 ರಷ್ಟು ಕುಟುಂಬಗಳಿಗೆ ಸ್ವಂತ ಭೂಮಿ ಇಲ್ಲ. ಭೂಮಿ ಇಲ್ಲದವರಲ್ಲಿ ಬಹುಪಾಲು ಜನರು ಆದಿವಾಸಿಗಳು, ದಲಿತರು ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದವರು. ರಾಜ್ಯದ ಶೇ.25 ಕುಟುಂಬಗಳ ಸ್ವಾಧೀನದಲ್ಲಿ ಶೇ.63ರಷ್ಟು ಭೂಮಿ ಇದೆ. ಉಳಿದ ಶೇ.75 ಕುಟುಂಬಗಳ ಒಡೆತನದಲ್ಲಿ ಕೇವಲ ಶೇ.37ರಷ್ಟು ಭೂಮಿ ಮಾತ್ರ ಇದೆ. 1961 ರ ಮತ್ತು 1974 ರ ಭೂ ಮಸೂದೆಗಳು ಜಾರಿಯಾದ ನಂತರವೂ ಕರ್ನಾಟಕದಲ್ಲಿ ಭೂಸಂಬಂಧಗಳು ಗಣನೀಯವಾಗಿ ಬದಲಾಗಿಲ್ಲ ಎಂಬುದು ಈ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಗ್ರಾಮೀಣ ಕರ್ನಾಟಕದಲ್ಲಿ ಹೆಚ್ಚುತ್ತಿರುವ ಭೂಹೀನತೆಯಿಂದಾಗಿ ವಲಸೆ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ನಗರ ಪ್ರದೇಶಗಳಲ್ಲಿ ಕೊಳಚೆ ನಿವಾಸಿಗಳ ಶೋಷಣೆ ಭಯಾನಕ ಸ್ಥಿತಿಗೆ ತಲುಪಿದೆ. ಭೂಮಿ ಇಲ್ಲದ ಬಡವರಿಗೆ ಭೂಸುಧಾರಣೆಗಳ ಮೂಲಕ ಭೂಮಿಯನ್ನು ವಿತರಿಸುವ ಮೂಲಕ ಮಾತ್ರ ಈ ಅಮಾನವೀಯ ಬೆಳವಣಿಗೆಯನ್ನು ತಡೆಯಬಹುದು. ಉದಾರೀಕರಣ ನೀತಿಗಳ ಜಾರಿಯ ಭಾಗವಾಗಿ ಭೂಸುಧಾರಣಾ ಕ್ರಮಗಳನ್ನು ಕೈಬಿಟ್ಟು ಮಾರುಕಟ್ಟೆಯ ಆಧರಿತ ಕೃಷಿ ಪದ್ಧತಿಯನ್ನು ಹೇರುವುದು ಅಪಾಯಕಾರಿಯಾಗಿದೆ. ಅನೇಕ ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಇತ್ತೀಚೆಗೆ ಚುನಾವಣೆಗಳ ಮೂಲಕ ಅಧಿಕಾರ ವಹಿಸಿಕೊಂಡಿರುವ ಎಡಪಂಥೀಯ ಸರ್ಕಾರಗಳು ತಮ್ಮ ದೇಶಗಳಲ್ಲಿ ಭೂಸುಧಾರಣಾ ಕ್ರಮಗಳನ್ನು ಜಾರಿಗೆ ತಂದು ಪ್ರಗತಿಯತ್ತ ದಾಪುಗಾಲು ಹಾಕುತ್ತಿವೆ. ಭೂಸುಧಾರಣೆಗಳಿಂದ ಮಾತ್ರ ಬಡತನ, ನಿರುದ್ಯೋಗ, ಸಾಮಾಜಿಕ ಹಿಂದುಳಿದಿರುವಿಕೆಯ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ ಎಂದು ಮಂಡಲ್ ಆಯೋಗದ ವರದಿ ಗುರುತಿಸಿತ್ತು. ಡಾ॥ಸ್ವಾಮಿನಾಥನ್ ಆಯೋಗವೂ ಸಹ ಭೂಸುಧಾರಣಾ ಕ್ರಮಗಳ ಮಹತ್ವವನ್ನು ಪುನರುಚ್ಚರಿಸಿದೆ.

ಕರ್ನಾಟಕದಲ್ಲಿ ಭೂ ಸುಧಾರಣೆ.....

ಪುಟ 9 ರಿಂದ

ಸಂಬಂಧಪಟ್ಟ ಕಾಯ್ದೆಗಳನ್ನು ಬದಲಾಯಿಸಿ ಕೃಷಿ ಭೂಮಿಯನ್ನು ಕೈಗಾರಿಕೋದ್ಯಮಿಗಳಿಗೆ ನೀಡಲು ದಾರಿ ಸುಗಮಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ 1994 ರಲ್ಲಿ ಭೂಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ಮಾಡಿ ಕೃಷಿಯೇತರ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಬಳಕೆ ಮಾಡಲು ಆಸ್ಪದ ಮಾಡಿಕೊಡಲಾಯಿತು

ಜನವಿರೋಧಿ ತಿದ್ದುಪಡಿಯ ಪ್ರಯತ್ನ

ಕೃಷಿ ಆಧಾರಿತ ಅಥವಾ ಕೃಷಿಗೆ ಪೂರಕ ಉದ್ದಿಮೆಗಳು ಎಂಬ ಹೆಸರಿನಲ್ಲಿ ಕೈಗಾರಿಕೆ, ಶಿಕ್ಷಣ ಮುಂತಾದ ಉದ್ದೇಶಗಳಿಗಾಗಿ ಕೈಗಾರಿಕೋದ್ಯಮಿಗಳು, ಬಂಡವಾಳಗಾರರು ನೇರವಾಗಿ ಕೃಷಿ ಭೂಮಿಯನ್ನು ಖರೀದಿ ಮಾಡಲು ಸಾಧ್ಯವಾಗುವಂತೆ ಕರ್ನಾಟಕ ಭೂಸುಧಾರಣಾ ಕಾಯ್ದೆಯನ್ನು ಮತ್ತೆ ತಿದ್ದುಪಡಿಮಾಡಲು ರಾಜ್ಯ ಬಿಜೆಪಿ ಸರ್ಕಾರ ಕಾರ್ಯೋನ್ಮುಖವಾಗಿದೆ. 2009 ರ ಫೆಬ್ರವರಿ 18 ರಂದು ನಡೆದ ಮುಖ್ಯಮಂತ್ರಿ ಯಡಿಯೂರಪ್ಪನವರ ಸಚಿವ ಸಂಪುಟದ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನಗಳಲ್ಲಿ ಇದೂ ಒಂದಾಗಿತ್ತು. ಈವರೆಗೆ ಯಾವುದೇ ಕೃಷಿ ಭೂಮಿಯನ್ನು ಖರೀದಿಸಬೇಕಾದರೆ ಕರ್ನಾಟಕ ಭೂಸುಧಾರಣಾ ಕಾಯ್ದೆಯ ಕಲಂ 109-1(ಎ) ರ ಅನ್ವಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿರುವ ಸಚಿವ ಸಂಪುಟ ಉಪಸಮಿತಿಯ ಅನುಮತಿ ಪಡೆದುಕೊಳ್ಳಬೇಕಾಗಿತ್ತು. ಸರ್ಕಾರ ಈಗ ನೇರ ಖರೀದಿಗೆ ಅನುಮತಿ ನೀಡಲು ನಿರ್ಧರಿಸುವ ಮೂಲಕ ಭೂಸುಧಾರಣಾ ಕಾಯ್ದೆಯ ಮೂಲ ಆಶಯಗಳನ್ನು ಗಾಳಿಗೆ ತೂರಿದೆ.

ಭೂಸುಧಾರಣೆ ಈಗ ಮುಗಿದು ಹೋದ ಅಧ್ಯಾಯ ಎಂದು ಪ್ರತಿಪಾದಿಸಲಾಗುತ್ತಿದೆ. ಇಂದು ಭೂಮಿಯನ್ನು ಸಣ್ಣ ಸಣ್ಣ ಭಾಗಗಳಾಗಿ ಪರಿವರ್ತಿಸುವ ಭೂಸುಧಾರಣೆಗಳು ಬೇಕಾಗಿಲ್ಲ. ಇಂದು ಬೇಕಾಗಿರುವುದು ಸಾವಿರಾರು ಎಕರೆ ಭೂಮಿಯನ್ನು ಒಂದೇ ಕಡೆ ಸೇರಿಸುವ ಭೂಸುಧಾರಣೆಗಳು ಎಂದು ವಾದಿಸಲಾಗುತ್ತಿದೆ. ಇದು ದೇಶದ ಕೃಷಿಯಲ್ಲಿ ಕಂಪನೀಕರಣವನ್ನು ಹೇರಲು ಹಾತೊರೆಯುತ್ತಿರುವ ಶಕ್ತಿಗಳ ಪ್ರತಿಪಾದನೆಯಾಗಿದೆ. ಸಣ್ಣ ಹಿಡುವಳಿಗಳು ಲಾಭದಾಯಕವಲ್ಲ ಎಂಬ ವಾದದಲ್ಲಿ ಸತ್ಯಾಂಶ ಇರುವುದೇನೋ ನಿಜ. ತುಂಡು ಭೂಮಿಯಲ್ಲಿ ಕೃಷಿ ಮಾಡುವುದರಿಂದ ಖಂಡಿತವಾಗಿಯೂ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ ಮತ್ತು ಉತ್ಪಾದಕತೆ ಕಡಿಮೆಯಾಗುತ್ತದೆ. ಆದರೆ, ಉತ್ಪಾದನಾ ವೆಚ್ಚ ಹೆಚ್ಚಾಗಲು ಮತ್ತು ಉತ್ಪಾದಕತೆ ಕಡಿಮೆಯಾಗಲು ಹಿಡುವಳಿ ಗಾತ್ರ ಸಣ್ಣದಿರುವುದು ಒಂದೇ ಕಾರಣವಲ್ಲ. ಕೃಷಿಗೆ ಅವಶ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ಕಾರಗಳು ಹೆಚ್ಚೆಚ್ಚು ಹಿಂದೆ ಸರಿಯುತ್ತಿರುವುದೇ ಮುಖ್ಯ ಕಾರಣವಾಗಿದೆ. ಬೀಜ, ಗೊಬ್ಬರ, ಕ್ರಿಮಿನಾಶಕ, ನೀರು, ವಿದ್ಯುತ್, ಸಾಗಣೆ, ಉಗ್ರಾಣ ವ್ಯವಸ್ಥೆ, ಹಣಕಾಸು ಮೊದಲಾದ ಮೂಲ ಸೌಕರ್ಯಗಳನ್ನು ರೈತರಿಗೆ ಕೈಗೆಟಕುವ ದರಗಳಲ್ಲಿ ಪೂರೈಕೆ ಮಾಡಿದಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗುವುದಿಲ್ಲ ಮತ್ತು ಉತ್ಪಾದಕತೆ ಕಡಿಮೆಯಾಗುವುದಿಲ್ಲ. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಎಡರಂಗ ಸರ್ಕಾರ ಜಾರಿಗೆ ತಂದ ಪ್ರಗತಿಪರ ಭೂಸುಧಾರಣೆಗಳ ಪ್ರಯೋಜನ ಪಡೆದಿರುವ ಲಕ್ಷಾಂತರ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ತಮ್ಮ ಜೀವನ ನಿರ್ವಹಣೆಗೆ ಬೇಕಾದಷ್ಟನ್ನು ಬೆಳೆದುಕೊಳ್ಳುವುದರಲ್ಲಿ ಯಶಸ್ವಿಯಾಗಿರುವುದನ್ನು ನಾವು ನೋಡುತ್ತೇವೆ. ಇತರ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕಾಣುವಾಗ, ಪಶ್ಚಿಮ ಬಂಗಾಳದಲ್ಲಿ ರೈತರ ಆತ್ಮಹತ್ಯೆಗಳು ನಡೆಯಲಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಆದ್ದರಿಂದ, ಕರ್ನಾಟಕದಲ್ಲಿ ಭೂಸುಧಾರಣೆ ಮುಗಿದು ಹೋದ ಕತೆ ಎಂದು ಹೇಳುವುದು ಸಮಂಜಸವಲ್ಲ. ಇಲ್ಲಿ ಪ್ರತಿಗಾಮಿ ಅರೆ ಪಾಳೆಗಾರಿ ಭೂಸಂಬಂಧಗಳು ಇನ್ನೂ ಅಸ್ತಿತ್ವದಲ್ಲಿವೆ. ದೊಡ್ಡ ಪ್ರಮಾಣದ ಭೂಮಿ ಇಂದಿಗೂ ಪಾಳೆಗಾರಿ ಭೂಮಾಲಿಕರ ವಶದಲ್ಲಿದೆ. ಅವರು ಬಂಡವಾಶಾಹಿ ಭೂಮಾಲಿಕರಾಗಿ ಬೆಳೆದಿದ್ದು ನಗರ ಪ್ರದೇಶದಲ್ಲಿಯೂ ಚರ-ಸ್ಥಿರ ಆಸ್ತಿಯನ್ನು ಹೊಂದಿದ್ದಾರೆ. ಕೃಷಿಯಿಂದ ಬಂದ ಆದಾಯದಿಂದ ವ್ಯಾಪಾರ ಹಾಗೂ ಕೈಗಾರಿಕೆಗಳಲ್ಲೂ ಬಂಡವಾಳ ಹೂಡಿದ್ದಾರೆ. ಇದರ ಜೊತೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಡ ರೈತರು ಇವರಲ್ಲಿ ಪಡೆದ ಸಾಲಕ್ಕೆ ತಮ್ಮ ಭೂಮಿಯನ್ನು ಇವರಿಗೆ ಪಡೆದ ಸಾಲಕ್ಕೆ ತಮ್ಮ ಭೂಮಿಯನ್ನು ಇವರಿಗೆ ಮಾರಿಕೊಳ್ಳುತ್ತಿದ್ದಾರೆ. ಹೊಸ ಗೇಣಿ ಪದ್ದತಿ ಅದರ ಅಮಾನುಷ ಸ್ವರೂಪದೊಂದಿಗೆ ಮತ್ತೆ ತಲೆಎತ್ತುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರಸಕ್ತ ಭೂಸುಧಾರಣಾ ಕಾಯ್ದೆಯಲ್ಲಿರುವ ಎಲ್ಲ ಲೋಪದೋಷಗಳನ್ನು ಮತ್ತು ಪ್ರತಿಗಾಮಿ ತಿದ್ದುಪಡಿಗಳನ್ನು ತೆಗೆದುಹಾಕಿ ಸಮಗ್ರವಾದ, ಪ್ರಗತಿಪರವಾದ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತರಲು ಬಲಿಷ್ಟವಾದ ಚಳುವಳಿಯೊಂದನ್ನು ರೂಪಿಸುವುದು ಅಗತ್ಯವಾಗಿದೆ.

ಕೈಗಾರೀಕರಣದ ಪ್ರಶ್ನೆ

ಭೂಸುಧಾರಣೆ ಅಂತಿಮವಲ್ಲ. ಭೂ ಸುಧಾರಣೆಗಳು ಅಪ್ರಸ್ತುತವಲ್ಲ. ಕರ್ನಾಟಕದಲ್ಲಿ ಹೆಚ್ಚು ಪ್ರಗತಿಪರವಾಗಿ ಭೂಸುಧಾರಣೆಗಳನ್ನು ರೂಪಿಸಿ ಜಾರಿಗೆ ತರುವುದು ಅಗತ್ಯವಿದೆ. ಆದರೆ ಭೂಸುಧಾರಣೆಗಳೇ ಅಂತಿಮವಲ್ಲ. ಒಂದು ಕೃಷಿ ಆಧರಿತ ಅರ್ಥವ್ಯವಸ್ಥೆಯನ್ನು ಕೈಗಾರಿಕಾ ವ್ಯವಸ್ಥೆಗೆ ಮುನ್ನಡೆಸುವ ಮಧ್ಯಂತರದ ಕ್ರಮ ಅದಾಗಿದೆ.

ಒಂದು ಕೃಷಿ ಆಧರಿತ ಅರ್ಥವ್ಯವಸ್ಥೆ ಕೈಗಾರಿಕಾ ವ್ಯವಸ್ಥೆಗೆ ಮುನ್ನಡೆಯುವುದೇ ಪ್ರಗತಿಪರ ಬೆಳವಣಿಗೆಯಾಗಿದೆ. ಇದೊಂದು ಸಹಜವಾದ ಸ್ವಾಭಾವಿಕವಾದ ಪ್ರಕ್ರಿಯೆ ಆಗಬೇಕಾಗಿದೆ. ಕೃಷಿಯಲ್ಲಿ ಗರಿಷ್ಟ ಬೆಳವಣಿಗೆಯನ್ನು ಸಾಧಿಸಿ ಕೈಗಾರೀಕರಣದತ್ತ ಸಾಗಬೇಕಾಗಿದೆ. ಆದರೆ ಇಂದು ಜಾಗತೀಕರಣದ ಶಕ್ತಿಗಳ ಒತ್ತಡಗಳಿಗೆ ಮಣಿದಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ಹಾಗೂ ಕೃಷಿಕರ ಹಿತಗಳನ್ನು ಕಡೆಗಣಿಸಿ ಕಾರ್ಪೊರೇಟ್ ಕಂಪನಿಗಳ ಹಿತಸಾಧನೆಗೆ ದಾವಿಸುತ್ತಿವೆ. ಈ ದೇಶ ವಿರೋಧಿ ಹಿತಸಾಧನೆಗೆ ಧಾವಿಸುತ್ತಿವೆ. ಈ ದೇಶ ವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಲು ಹೋರಾಡಬೇಕಾಗಿದೆ.

ಈ ನಡುವೆ, ರಾಜ್ಯದಲ್ಲಿ ಸುಮಾರು 12 ಲಕ್ಷ ಎಕರೆ ಸರ್ಕಾರಿ ಭೂಮಿ ಕಬಳಿಕೆಯಾಗಿದೆ ಎಂದು ಕರ್ನಾಟಕ ಸರ್ಕಾರಿ ಭೂಮಿ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ವಿ.ಬಾಲಸುಬ್ರಮಣಿಯನ್ ಹೇಳಿದ್ದಾರೆ. ಇದರಲ್ಲಿ ಸುಮಾರು 1.65 ಲಕ್ಷ ಎಕರೆ ಅರಣ್ಯ ಭೂಮಿಯಾಗಿದೆ. ಒಟ್ಟು ಒತ್ತುವರಿ ಆಗಿರುವ ಸರ್ಕಾರಿ ಭೂಮಿಯಲ್ಲಿ ಕೇವಲ 47 ಸಾವಿರ ಎಕರೆ ಮಾತ್ರ ತೆರವುಗೊಳಿಸಿ ಸರ್ಕಾರ ಈವರೆಗೆ ವಶಪಡಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ. ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಒತ್ತುವರಿ ತೆರವುಗೊಳಿಸದಂತೆ ಮುಖ್ಯ ಮಂತ್ರಿ ಕಛೇರಿಯಿಂದಲೇ ಸೂಚನೆ ಬಂದಿರುವುದರಿಂದ ತೆರವು ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ ಎಂದು ಹಿಂದೆ ವರದಿಯಾಗಿತ್ತು.

ಮುಂದೆ ಮಾಡಬೇಕಾದ್ದು

ಕರ್ನಾಟಕ ಸರ್ಕಾರ ಕೃಷಿ ಕ್ಷೇತ್ರಕ್ಕೆ ವಿಶ್ವ ಹೂಡಿಕೆದಾರರನ್ನು ಆಕರ್ಷಿಸಲು ಮುಂದಾಗಿರುವ ಹಿನ್ನೆಲೆಯಲ್ಲಿ ಭೂಮಿಯ ಪ್ರಶ್ನೆಗೆ ಸಂಬಂಧಪಟ್ಟ ರಾಜ್ಯದ ಕಾರ್ಷಿಕ ಚಳುವಳಿ ಈ ಕೆಳಗಿನ ವಿಚಾರಗಳನ್ನು ತನ್ನ ಅವಗಾಹನೆಗೆ ತೆಗೆದುಕೊಳ್ಳುವುದು ಅಗತ್ಯವಾಗುತ್ತದೆ.


ಕರ್ನಾಟಕದಲ್ಲಿ ಇಂದಿಗೂ ನೂರಕ್ಕೆ 60 ಕ್ಕೂ ಹೆಚ್ಚು ಜನ ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಗ್ರಾಮೀಣ ಕರ್ನಾಟಕದಲ್ಲಿ ಪ್ರತಿಶತ 90 ರಷ್ಟು ಜನ ಕೃಷಿ ಹಾಗೂ ಕೃಷಿ ಆಧಾರಿತ ಕಸುಬುಗಳನ್ನು ಅವಲಂಬಿಸಿದ್ದಾರೆ. ಅವರನ್ನೆಲ್ಲಾ ಇದ್ದಕ್ಕಿದ್ದಂತೆ ಕೃಷಿ ಕ್ಷೇತ್ರದಿಂದ ಬೇರೆ ಕಡೆಗೆ ವರ್ಗಾಯಿಸುವುದು ಸಾಧ್ಯವಿಲ್ಲ. ಕೃಷಿ ಕ್ಷೇತ್ರಕ್ಕೆ ವಿಶ್ವ ಹೂಡಿಕೆದಾರರನ್ನು ಆರ್ಷಿಸುವ ಮೂಲಕ ಕೃಷಿಯ ಕಂಪನೀಕರಣಕ್ಕೆ ಸರ್ಕಾರ ಮುಂದಾಗಿರುವುದು ರಾಜ್ಯದ ಸಮಸ್ತ ಕೃಷಿಕರ ಹಿತದೃಷ್ಟಿಯಿಂದ ಅತ್ಯಂತ ಅಪಾಯಕಾರಿ ಹೆಜ್ಜೆಯಾಗಿದೆ. ರಾಜ್ಯದಲ್ಲಿ ಇಷ್ಟೊಂದು ಜನ ಕೃಷಿಯನ್ನೇ ಅವಲಂಬಿಸಿ ಬದುಕಬೇಕಾದ ಪರಿಸ್ಥಿತಿ ಇರುವಾಗ ಇಲ್ಲಿ ಬಂಡವಾಳಶಾಹಿ ದೇಶಗಳಲ್ಲಿ ಇರುವಂತಹ ಕಂಪನಿ ಆಧಾರಿತ ಕೃಷಿ ಪದ್ಧತಿ ಸೂಕ್ತವಾಗದು. ಇಂತಹ ಕ್ರಮದಿಂದಾಗಿ ನಮ್ಮ ಕೃಷಿ ರಂಗವನ್ನು ಲೂಟಿ ಮಾಡಲು ಕಾರ್ಪೋರೇಟ್ ಕಂಪನಿಗಳಿಗೆ ಅವಕಾಶವಾಗುವುದೇ ಹೊರತು ನಮ್ಮ ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗದು. ಆದ್ದರಿಂದ ರೈತರ ಭೂಮಿಯನ್ನು ಕಿತ್ತುಕೊಂಡು ಹೂಡಿಕೆದಾರರಿಗೆ ನೀಡುವ ಮತ್ತು ಆ ಮೂಲಕ ರೈತರನ್ನು, ಕೃಷಿಕೂಲಿಕಾರರನ್ನು ಬೀದಿಪಾಲು ಮಾಡುವ ರಾಜ್ಯ ಸರ್ಕಾರದ ಉದ್ದೇಶವನ್ನು ಪ್ರಬಲವಾಗಿ ವಿರೋಧಿಸಬೇಕಾಗಿದೆ.

ಕರ್ನಾಟಕದಲ್ಲಿ ಭೂಸುಧಾರಣಾ ಕಾಯ್ದೆಗಳು ಜಾರಿಗೆ ಬಂದ ನಂತರವೂ ರಾಜ್ಯದಲ್ಲಿ ಪ್ರತಿಗಾಮಿ ಅರೆ ಪಾಳೆಗಾರಿ ಭೂಸಂಬಂಧಗಳು ಮುಂದುವರೆದಿವೆ. ಕಾಯ್ದೆಗಳಲ್ಲಿರುವ ಲೋಪದೋಷಗಳನ್ನು ಬಳಸಿಕೊಂಡು ದೊಡ್ಡ ದೊಡ್ಡ ಭೂಮಾಲಕರು ಇಂದಿಗೂ ದೊಡ್ಡ ಪ್ರಮಾಣದ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿ ಉಳಿಸಿಕೊಂಡಿದ್ದಾರೆ. ಭೂಮಿತಿ ಕಾಯ್ದೆಯನ್ನು ಜಾರಿಗೆ ತರುವುದರೊಂದಿಗೆ ಗೇಣಿ ಪದ್ಧತಿಯನ್ನು ಅಂತ್ಯಗೊಳಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ ಹೊಸ ರೀತಿಯ ಗೇಣಿ ಪದ್ಧತಿ, ಪಾಲು ಬೇಸಾಯ ಪದ್ದತಿ, ಲೀಸ್ ಆಧಾರಿತ ಪದ್ಧತಿ ವ್ಯಾಪಕವಾಗಿ ಹರಡಿಕೊಂಡಿದೆ. ಈ ಹಿನ್ನೆಲೆಯಲ್ಲಿ ಭೂಸುಧಾರಣೆಗಳು ಕರ್ನಾಟಕದಲ್ಲಿ ಇನ್ನೂ ಬಹಳ ಪ್ರಸ್ತುತವೇ ಆಗಿದೆ. ಭೂಮಿತಿಯನ್ನು ವೈಜ್ಞಾನಿಕವಾಗಿ ಪುನರ್ ನಿರ್ಧರಿಸಲು, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು, ಗೇಣಿದಾರರ ನ್ಯಾಯಬದ್ಧ ಹಕ್ಕುಗಳಿಗೆ ರಕ್ಷಣೆ ಒದಗಿಸಲು, ತನ್ನ ಭೂಮಿಯನ್ನು ಅನಿವಾರ್ಯವಾಗಿ ಗೇಣಿಗೆ ನೀಡಲು ನಿರ್ಬಂಧಿತನಾಗುವ ಸಣ್ಣ ಹಾಗೂ ಅತಿ ಸಣ್ಣ ಹಿಡುವಳಿದಾರನ ಹಿತ ಕಾಪಾಡಲು ಇನ್ನೊಂದು ಸಮಗ್ರವಾದ ಭೂ ಸುಧಾರಣಾ ಕಾಯ್ದೆ ಅತ್ಯಗತ್ಯವಾಗಿದ್ದು ಅದಕ್ಕಾಗಿ ವ್ಯಾಪಕವಾದ ಜನಾಂದೋಲನವನ್ನು ನಡೆಸಲು ಸಾಧ್ಯವಾಗಬೇಕಾಗಿದೆ.

ಪ್ರಗತಿಪರ ಭೂಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಮಾಡುವ ಮೂಲಕ ಮಾತ್ರ ಕೃಷಿ ಭೂಮಿಯ ಗರಿಷ್ಟ ಬಳಕೆ ಸಾಧ್ಯವಾಗುತ್ತದೆ ಮತ್ತು ಅದರ ಪರಿಣಾಮವಾಗಿ ಕೃಷಿ ಉತ್ಪಾದನೆಯೂ ಸಹ ಗರಿಷ್ಟ ಮಟ್ಟಕ್ಕೆ ಏರುತ್ತದೆ. ಕೃಷಿಯಲ್ಲಿ ಗರಿಷ್ಟ ಬೆಳವಣಿಗೆಯನ್ನು ಸಾಧಿಸಿದಾಗ ಅದು ಕೈಗಾರೀಕರಣಕ್ಕೆ ನಾಂದಿಯಾಗುತ್ತದೆ. ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗ ತೊಡಗುತ್ತದೆ. ಆದರೆ ರಾಜ್ಯದ ಕೃಷಿ ಹಾಗೂ ಕೈಗಾರಿಕಾ ರಂಗಗಳಿಗೆ ಹೂಡಿಕೆದಾರರನ್ನು ಆಕರ್ಷಿಸುವ ರಾಜ್ಯ ಸರ್ಕಾರದ ಉದ್ದೇಶ ಕೇವಲ

→

ಬರ ಅಧ್ಯಯನದ ಕೇಂದ್ರ ತಂಡ ಬಂದರೂ ಭೇಟಿಗೆ ಟೈಮಿಲ್ಲ



ಆರ್.ರಾಮಕೃಷ್ಣ

ಕರ್ನಾಟಕ ರಾಜ್ಯದ ಜನರ ದೌರ್ಭಾಗ್ಯದ ಬಗ್ಗೆ ಏನೆಂದು ಹೇಳಬೇಕೋ ತಿಳಿಯುತ್ತಿಲ್ಲ. ಎಷ್ಟು ಹೇಳಿದರೂ ರಾಜ್ಯದ ದೌರ್ಭಾಗ್ಯದ ದಿನಗಳು ಮುಗಿಯುತ್ತಿಲ್ಲ. ರಾಜ್ಯದಲ್ಲಿ ಬಿಜೆಪಿ ಎಂಬೋ ಒಂದು ಜನದ್ರೋಹಿ ಪಕ್ಷದ ಸರ್ಕಾರ ಇರುವವರೆಗೂ ಜನರ ಬದುಕು ಇನ್ನಷ್ಟು ಅಧೋಗತಿಗೆ ಹೋಗುತ್ತದೆಯೇ ಹೊರತು ಜನರ ಬದುಕು ಸುಧಾರಿಸಲು ಈ ಸರ್ಕಾರ ಏನನ್ನೂ ಮಾಡುವುದಿಲ್ಲ ಎಂಬುದು ಬಹುತೇಕ ಖಾತ್ರಿಯಾಗಿದೆ.

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಎಂಬುದು ಅಲ್ಲಲ್ಲಿ ಸುರಿದು ವಾತಾವರಣವನ್ನು ಕೊಂಚ ತಂಪು ಮಾಡಿದ್ದರೂ ಕೂಡ ಅದು ರಾಜ್ಯದ 123 ತಾಲ್ಲೂಕುಗಳನ್ನು ಆವರಿಸಿರುವ ಭೀಕರ ಬರದ ಪರಿಣಾಮವನ್ನು ಬಹಳಷ್ಟೇನು ಕಡಿತ ಮಾಡಲಾರದು. ಈಗ ಉತ್ತಮ ಮಳೆಯಾದರೂ 'ಹಸಿ ಬರ' ರಾಜ್ಯವನ್ನು ಇನ್ನೂ ಸಾಕಷ್ಟು ದಿನ ಕಾಡುವುದು ಖಚಿತ. ಬರ ಪರಿಹಾರವನ್ನು ಕೋರಿ ಕೇಂದ್ರಕ್ಕೆ ತೀರಾ ತಡವಾಗಿ ಸರ್ವಪಕ್ಷ ನಿಯೋಗವನ್ನು ಕೊಂಡೊಯ್ದು ಜನರಿಂದ ಛೀ ಮಾರಿ ಹಾಕಿಸಿಕೊಂಡ ರಾಜ್ಯ ಬಿಜೆಪಿ ಸರ್ಕಾರ ಆ ನಂತರವಾದರೂ ಬರದ ವಿಚಾರದಲ್ಲಿ ಎಚ್ಚೆತ್ತುಕೊಂಡಿಲ್ಲ.

ಮೇ 14-15, 2012 ರಂದು ಬರದ ಹಾನಿ- ಪರಿಣಾಮಗಳನ್ನು ಅಂದಾಜು ಮಾಡಲು ಕೇಂದ್ರ ತಂಡ ರಾಜ್ಯಕ್ಕೆ ಭೇಟಿ ನೀಡಿತ್ತು. ಹಿಂದೆಲ್ಲ ಈ ರೀತಿ ತಂಡಗಳು ಅಧ್ಯಯನಕ್ಕೆ ಬಂದಾಗ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವರು, ತಂಡಕ್ಕೆ ಪರಿಸ್ಥಿತಿ ವಿವರಿಸಿ ಮಾಹಿತಿ ನೀಡುವುದು, ಅದಕ್ಕಾಗಿ ಆಡಳಿತ ಯಂತ್ರವನ್ನು ಸಜ್ಜುಗೊಳಿಸಲು ಮುಂಚಿತವಾಗಿ ಮುತುವರ್ಜಿ ವಹಿಸುವುದು ನಡೆದಿದೆ.

ಮೇ 14 ರಂದು ತಂಡ ಚಿಕ್ಕ ಬಳ್ಳಾಪುರ ಜಿಲ್ಲೆಯ ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ, ತುಮಕೂರು ಜಿಲ್ಲೆಯ ಕೊರಟಗೆರೆ ಮಧುಗಿರಿ, ಶಿರಾ ತಾಲೂಕುಗಳಲ್ಲಿ ಪ್ರವಾಸ ಮಾಡಿದೆ. ಆದರೆ ಸರ್ಕಾರದ ಪರವಾಗಿ ಈ ಸಂದರ್ಭ ಯಾರೂ ಇದ್ದು ಮಾಹಿತಿ ಸ್ಪಷ್ಟನೆ ನೀಡಿದ್ದು ಬಹುತೇಕ ಕಂಡು ಬಂದಿಲ್ಲ.

ಬರಪೀಡಿತ ಪ್ರದೇಶಗಳ ವೀಕ್ಷಣೆ ನಂತರ ಕೇಂದ್ರ ತಂಡದ ಜೊತೆ ಮುಖ್ಯಮಂತ್ರಿಗಳ ಸಮಾಲೋಚನೆ ನಡೆಯಬೇಕಿತ್ತು. ಮುಖ್ಯಮಂತ್ರಿಗಳಿಗೆ ಪಾಪ ಬಿಡುವೇ ಇಲ್ಲ. ಭರಪೂರ ಕೆಲಸಗಳು. ಅವರು ಬರ ಅಧ್ಯಯನ ತಂಡದೊಂದಿಗೆ ಚರ್ಚಿಸಲೂ ಪುರುಸೊತ್ತಾಗಲಿಲ್ಲ. ಮೇ 14 ರಂದು ಭೇಟಿ ಸಾಧ್ಯವಾಗದ್ದರಿಂದ ಮೇ 16 ರಂದು ಈ ತಂಡವನ್ನು ಭೇಟಿ ಮಾಡಿ



ಚರ್ಚಿಸಿದ್ದಾರೆ, ಕೇವಲ 15 ನಿಮಿಷಗಳಲ್ಲಿ ಚರ್ಚೆ ಮುಗಿದೇ ಹೋಗಿದೆ.

ಬರ ಅಧ್ಯಯನಕ್ಕೆ ಬಂದ ಕೇಂದ್ರ ತಂಡವನ್ನೂ ಭೇಟಿ ಮಾಡಲಾರದಂತಹ ಘನಂಧಾರಿ ಕೆಲಸ ಏನಿತ್ತು ಸದಾನಂದಗೌಡರಿಗೆ?

ಹಾಲಿ ಮುಖ್ಯಮಂತ್ರಿ ಸದಾನಂದ ಗೌಡರು ತಮ್ಮ ಬೆಂಬಲಿಗರೊಂದಿಗೆ ಕೂಡಿಕೊಂಡು ಮಾಜಿ ಮುಖ್ಯಮಂತ್ರಿ ಡಾ. ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಬೆಂಬಲಿಗರೊಂದಿಗೆ ರಾಜಕೀಯ, ಸಂಘಟನಾ 'ಜುಗಲ್ ಬಂದಿ' ಆಟ ಆಡುತ್ತಿದ್ದರು. ಹೌದು. ಮೇ 14.ರ 15 ಇಡೀ ದಿನ ಯಡಿಯೂರಪ್ಪ-ಸದಾನಂದಗೌಡ, ಯಡಿಯೂರಪ್ಪ ಗುಂಪಿನ ರೇಣುಕಾಚಾರ್ಯ ಸಿ.ಟಿ. ರವಿ, ಹರೀಶ್-ಅರವಿಂದ ಲಿಂಬಾವಳಿ ಮುಂತಾದವರು ನಡೆಸಿದ 'ಬಿದಿಬದಿ ಸಭೆ', 'ಗುಂಪು ಚರ್ಚೆ'ಗಳನ್ನು ಜನ ಟಿವಿಗಳಲ್ಲಿ ನೋಡಿ, ಕೇಳಿ ಸಾಕಾಗಿ ಛೀ, ಥೂ ಎಂದು ಬಿಜೆಪಿ ಸರ್ಕಾರಕ್ಕೆ ಉಗಿಯುತ್ತಿದ್ದರೂ ಈ ಲಜ್ಜೆಗೇಡಿಗಳಿಗೆ ಕಿಂಚಿತ್ತು ಅವಮಾನ ಅನಿಸಲಿಲ್ಲ. ಬರದಲ್ಲಿ ಬೇಯುತ್ತಿರುವ ಜನರ ಬದುಕು ನೆಪಾಗಲಿಲ್ಲ. ಕೇಂದ್ರ ತಂಡದ ಭೇಟಿ ವಿಚಾರ ಕಾಡಲೇ ಇಲ್ಲ.

ಅವರ ಹೊಲಸು ಇವರು ಎಳೆದರು ಇವರ ಹೊಲಸು ಅವರು ಸೆಳೆದರು

ಕುರ್ಚಿ ಎಳೆದಾಟದ ಈ ಬೀದಿ ಕಚ್ಚಾಟವನ್ನು ಅದು ಕೇವಲ ಬಿಜೆಪಿ ಪಕ್ಷದ ಆಂತರಿಕ ವಿಚಾರ ಅಂತ ಸುಮ್ಮನೇ ಹಾಗೆ ನಿರ್ಲಕ್ಷ್ಯ ಮಾಡುವಂತಿಲ್ಲ. ಏಕೆಂದರೆ ಇವರೆಲ್ಲ ಸಚಿವರು, ಶಾಸಕರು ಮತ್ತು ಮುಖ್ಯಮಂತ್ರಿಯಂತಹ ಪ್ರಮುಖ ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರು ಮತ್ತು ಇದ್ದವರು. ಅವರು ಹೊರ ಚೆಲ್ಲಿರುವ ವಿವರಗಳಲ್ಲಿನ ಹೊಲಸು ಏನೆಂದು ನೀವೇ ನೋಡಿ.

ದತ್ತ ಪೀಠ 'ಚಳುವಳಿ'ಯ ಚೀರಾಟ ವೀರ ಚಿಕ್ಕಮಗಳೂರಿನ ಶಾಸಕ ಸಿ.ಟಿ.ರವಿ ಬೆಂಗಳೂರಿನಲ್ಲಿ ರಿಯೆಲ್ ಎಸ್ಟೇಟ್ ದಂಧೆ ನಡೆಸುತ್ತಿದ್ದಾರೆ ಎಂದು ಅಬಕಾರಿ ಸಚಿವ ರೇಣುಕಾಚಾರ್ಯ ವಿವರ ಬಹಿರಂಗ ಮಾಡಿದ್ದಾರೆ.. ರೇಣುಕಾಚಾರ್ಯ ಅವರು ಯಡಿಯೂರಪ್ಪನವರ ವಿರುದ್ಧದ ಬಿಜೆಪಿ ಭಿನ್ನಮತೀಯರ ಬಂಡಾಯದ ಸಂದರ್ಭದಲ್ಲಿ ಒಮ್ಮೆ ಹೈದರಾಬಾದ್ ರೆಸಾರ್ಟ್‌ಗೆ, ಮತ್ತೊಮ್ಮೆ ಗೋವಾದ ರೆಸಾರ್ಟ್ ವಾಸಕ್ಕೆ ಹೋಗಿದ್ದರು. ರಾಜ್ಯದ ಗಣಿ ಸಂಪತ್ತು ಲೂಟಿ ಹೊಡೆದ ಜನಾರ್ಧನ ರೆಡ್ಡಿಯಿಂದ ಸ್ವಂತಕ್ಕೆ ಅಕ್ರಮ ಹಣ ಪಡೆದಿದ್ದು . ಜೊತೆಗೆ ಬಿಜೆಪಿಯ ಇತರ ಶಾಸಕರಿಗೂ ಅಕ್ರಮ ಹಣ ಕೊಡಿಸಿರುವುದು ಎಲ್ಲವೂ ತಮಗೆ ಗೊತ್ತು ಎಂದು ಮಾಹಿತಿಯನ್ನು ಜಾಹೀರುಗೊಳಿಸಿದ್ದಾರೆ.

.....ಕೇಳಿದಾಗ ಕುರ್ಚಿ ಬಿಟ್ಟುಕೊಡುವುದಾಗಿ ಹೇಳಿ ಮುಖ್ಯಮಂತ್ರಿ ಕುರ್ಚಿ ಏರಿದ್ದ ಸದಾನಂದ ಗೌಡ ಈಗ ಕುರ್ಚಿ ಬಿಡದೇ ವಿಶ್ವಾಸ ದ್ರೋಹ ಮಾಡಿದ್ದಾರೆ.... ಪುಣ್ಯಕೋಟಿಯ ನಾಡಿನಲ್ಲಿ ಹೀಗೆ ಮಾಡಬಹುದೇ... ಎಂದು ಯಡಿಯೂರಪ್ಪ ಅಲವತ್ತುಕೊಂಡರೆ ಸದಾನಂದಗೌಡರು ಯಡಿಯೂರಪ್ಪನವರ ಬಗೆಗೆ ಹೇಳುವುದು ಕೇಳಿ.

ಕೆಲವರು ಸ್ಥಾನಮಾನ ಸಿಕ್ಕಾಗ ಕರ್ತವ್ಯ ಮರೆಯುತ್ತಾರೆ. ಬೇಕಾದಂತೆ ತಪ್ಪು ಮಾಡಿ ದೇವರಿಗೆ ತಪ್ಪು ಕಾಣಿಕೆ ಹಾಕಿ ದೇವರು ತಮ್ಮ ತಮ್ಮನ್ನು ಕ್ಷಮಿಸುತ್ತಾನೆ ಎಂದು ಕೊಳ್ಳುತ್ತಾರೆ.... ಎಂದು ಹೇಳಿದ್ದಾರೆ.

ಮೊನ್ನೆ ಮೊನ್ನೆ ಇದ್ದಕ್ಕಿದ್ದಂತೆ ಬರ ಪೀಡಿತ ಜನರನ್ನು ನೆನಪು ಮಾಡಿಕೊಂಡು ಹಳ್ಳಿಗಳ ಕಡೆ ಪೇರಿ ಕಿತ್ತಿದ್ದ ಯಡಿಯೂರಪ್ಪ ಪಟಾಲಂ ಬರ ಪರಿಸ್ಥಿತಿ ಪರಿಶೀಲನೆಗೆ ಕೇಂದ್ರ ತಂಡ ಬಂದಾಗ ಕಂಗೆಟ್ಟ ಜನರನ್ನೆಲ್ಲಾ ಮರೆತು ತಮ್ಮ ಕುರ್ಚಿ ಕಿರಿಕ್ ಶುರುಮಾಡಿಕೊಂಡು ಸದಾನಂದಗೌಡರ ಕುರ್ಚಿ ಎಳೆಯಲು ನಿಂತಿದ್ದು ನೋಡಿದರೆ ಇವರ ಬರಪರ ಕಾಳಜಿ ಏನೆಂದು ಅರ್ಥ ವಾಗುತ್ತದೆ. ●

→

ಕಾರ್ಪೋರೇಟ್ ಕಂಪನಿಗಳಿಗೆ ಲಾಭ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದೇ ಆಗಿರುವುದರಿಂದ ಸರ್ಕಾರದ ಕ್ರಮವನ್ನು ಬಲವಾಗಿ ವಿರೋಧಿಸಬೇಕಾಗಿದೆ.

ಕರ್ನಾಟಕ ಪ್ರಸಕ್ತ ಪರಿಸ್ಥಿತಿಯಲ್ಲಿ 'ಸಣ್ಣ ಹಿಡುವಳಿಗಳು ಆರ್ಥಿಕವಾಗಿ ಲಾಭದಾಯಕ ವಲ್ಲ' ಎಂಬ ವಾದವನ್ನು ತಿರಸ್ಕರಿಸಬೇಕಾಗಿದೆ. ಸಣ್ಣ ಹಿಡುವಳಿದಾರರಿಗೆ ಮೂಲ ಸೌಕರ್ಯಗಳನ್ನು ಒದಗಿಸಿ ಪ್ರೋತ್ಸಾಹಿಸಿದರೆ ಕೃಷಿ ಉತ್ಪಾದನೆಯನ್ನು ಗರಿಷ್ಟ ಪ್ರಮಾಣದಲ್ಲಿ ಹೆಚ್ಚಿಸಲು ಸಾಧ್ಯವಿದೆ ಎಂಬುದು ಪಶ್ಚಿಮ ಬಂಗಾಳದ ಅನುಭವ ತೋರಿಸಿಕೊಟ್ಟಿದೆ. ದೇಶದಲ್ಲಿ ಇಂದು ಆಹಾರ ಉತ್ಪಾದನೆಯ ಸಮಸ್ಯೆ ಗಂಭೀರ ಸ್ವರೂಪ ತಾಳುತ್ತಿದೆ. ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಿರುವ ಗುಜರಾತ್, ಕರ್ನಾಟಕ ಮೊದಲಾದ ರಾಜ್ಯಗಳಲ್ಲಿ ಇತರ ಕೆಲವು ಹಿಂದುಳಿದ ರಾಜ್ಯಗಳಿಗಿಂತ ಹೆಚ್ಚು ಹಸಿವು ಮತ್ತು ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸಲಾಗುತ್ತಿದೆ ಎಂದು 2011 ರ ಮಾನವ ಅಭಿವೃದ್ಧಿ ವರದಿ ಹೇಳುತ್ತದೆ. ಆದ್ದರಿಂದ ಕೃಷಿ ಭೂಮಿಯನ್ನು ರಕ್ಷಿಸುವುದು, ಭೂರಹಿತ ಕುಟುಂಬಗಳಿಗೆ ಭೂ ವಿತರಣೆ ಮಾಡುವುದು, ಕೃಷಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಿ ಆಹಾರವೂ ಸೇರಿದಂತೆ ಒಟ್ಟುಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಕರ್ನಾಟಕದ ತಕ್ಷಣದ ಆದ್ಯತೆ ಆಗಬೇಕಾಗಿದೆ.

ಇನ್ನೊಂದು ಹಂತದ ಭೂಸುಧಾರಣೆಗಳಿಗಾಗಿ ಒತ್ತಾಯಿಸುತ್ತಿರುವಾಗಲೇ ಬಡ ರೈತರು, ಭೂರಹಿತ ಕೃಷಿ ಕೂಲಿಕಾರರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿ, ಕಂದಾಯ ಭೂಮಿ, ಗೋಮಾಳ ಭೂಮಿಯನ್ನು ಸಕ್ರಮಗೊಳಿಸುವಂತೆ ಆಗ್ರಹಿಸಬೇಕಾಗಿದೆ. ಎಲ್ಲಾ ರೀತಿಯ ಬಗರ್ ಹುಕುಂ ಸಾಗುವಳಿದಾರರಿಂದ ಅರ್ಜಿಗಳನ್ನು ಆಹ್ವಾನಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ.

ಅದೇ ಸಮಯದಲ್ಲಿ ಮನೆ-ನಿವೇಶನ ರಹಿತರ ಸಮಸ್ಯೆ ನಗರ ಪ್ರದೇಶಗಳಲ್ಲಿಯೂ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಗಂಭೀರವಾಗುತ್ತಿದೆ. ಸರ್ಕಾರಗಳು ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮನೆ ಇಲ್ಲದವರಿಗೆ ಮನೆಗಳನ್ನು ಒದಗಿಸುವ ಭರವಸೆಗಳನ್ನು ನೀಡುತ್ತಿರುತ್ತವೆ. ಅಧಿಕಾರಕ್ಕೆ ಬಂದ ಮೇಲೆ ಭರವಸೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತವೆ.

ಆಳುವ ಸರ್ಕಾರದ ಇಂತಹ ಧೋರಣೆಗಳಿಗೆ ಚಳುವಳಿಯ ಚಾಟಿ ಏಟು ತಾಗಬೇಕಾಗಿದೆ. ಮೇ 21, 2012 ರಂದು ಬೆಂಗಳೂರಿನಲ್ಲಿ ನೆರೆದು ಅನಿದಿಷ್ಟಾವಧಿ ಸಾಮೂಹಿಕ ಧರಣಿ ಕೈಗೊಳ್ಳುತ್ತಿರುವ ಸಹಸ್ರ ಸಹಸ್ರ ಬಡ ರೈತರು, ಕೂಲಿಕಾರರು. ಬಗರ್ ಹುಕುಂ ಸಾಗುವಳಿದಾರರು, ಮನೆ ನಿವೇಶನ ಆಕಾಂಕ್ಷಿಗಳು ತೋರುವ ದೃಢತೆ ಕರ್ನಾಟಕದಲ್ಲಿ ಭೂಮಿಯ ಪ್ರಶ್ನೆಯನ್ನು ಮತ್ತು ಭೂ ಸುಧಾರಣೆಯ ಪ್ರಶ್ನೆಯನ್ನು ರಾಜ್ಯ ರಾಜಕಾರಣದ ಮುಂಚೂಣಿಗೆ ತರಬೇಕಿದೆ. ಮತ್ತು ಭೂಮಿಯ ಪ್ರಶ್ನೆಯು ಜನಪರವಾದ ರೀತಿಯಲ್ಲಿ ಇತ್ಯರ್ಥಗೊಳ್ಳುವಂತೆ ನೋಡಿಕೊಳ್ಳಬೇಕಿದೆ. ●

ಬಿಜೆಪಿಯೊಳಗಿನ ಕಿತ್ತಾಟ..... ಇನ್ನಷ್ಟೂ ಮುಂದಕ್ಕೆ..!

ಪುಟ 1 ರಿಂದ

[illegible] ಕಾಯುವಂತಹ ಸೇಡಿನ ಕಿಡಿ ಹತ್ತಿದೆ.

ತೆರೆಯಿತೇ ಅಂತರಂಗ!

ಮುಖ್ಯವಾಗಿ : ಯಡಿಯೂರಪ್ಪ ಮೊದಲ ಬಾರಿಗೆ ಬಿಜೆಪಿಯಿಂದ ಹೊರನಡೆಯುವುದಾಗಿ ಮತ್ತು ಹೊಸ ಪಕ್ಷ ಕಟ್ಟುವ ಇಂಗಿತವನ್ನೂ ಸ್ಪಷ್ಟವಾಗಿ ಹೇಳಿದ್ದು . ಈ ಸನ್ನಿವೇಶದಲ್ಲಿ ಸೋನಿಯಾಗಾಂಧಿಯನ್ನು ಹೊಗಳಿದ್ದು ಮತ್ತೊಂದು ವಿಶೇಷ ಅರ್ಥವನ್ನು ಕಲ್ಪಿಸಿತ್ತು.

ಹಾಗೆಯೇ ತನ್ನ ಕಡು ವಿರೋಧಿಯಾದ ಅನಂತ್‌ಕುಮಾರನ ಪಿತೂರಿ, ಕೆಡುಕುಗಳ ಬಗ್ಗೆ ಬಹಿರಂಗವಾಗಿ ನಿಖರವಾದ ಆರೋಪಗಳಿಂದ ತೆಗಳಿದ್ದು ಮತ್ತೊಂದು. ಬಿಜೆಪಿಯಿಂದ ಕಳಚಿಕೊಳ್ಳುವ ಕೊನೆಯ ಸತ್ಯವೇನೋ ಎಂಬಂತೆ!. ಯಡ್ಯೂ. ರಾಡಿಯಾ ಟೇಪ್ ಹಗರಣಗಳಲ್ಲಿ ಅನಂತಕುಮಾರ್ ಸಿಕ್ಕಿ ಹಾಕಿಕೊಂಡಿದ್ದರೂ ಅವುಗಳಿಂದ ಹೈಕಮಾಂಡ್ ಆತನನ್ನು ರಕ್ಷಿಸಿ, ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕೆ ತರಲು ನಡೆಸಿದ ಯತ್ನಗಳನ್ನು ಬಿಡಿಸಿ ಹೇಳಿದ್ದು. ಹಾಗೆಯೇ ಸಚಿವಾಕಾಂಕ್ಷಿ ಸಿ.ಟಿ. ರವಿ ಮತ್ತು ಯಡಿಯೂರಪ್ಪನವರ ಬಣದ ಸಚಿವ ರೇಣುಕಾಚಾರ್ಯರಿಬ್ಬರೂ ಪರಸ್ಪರ ದೂಷಾಪರೋಹಣೆ ತಾರಕಕ್ಕೇರಿ ಬೈಗುಳನ್ನು ಅಂತರಂಗದಿಂದ ಬಹಿರಂಗ ಕ್ಕಿಟ್ಟಿದ್ದಾರೆ.

ಈ ನಡುವೆ ಹೈಕಮಾಂಡ್‌ನ ಅರುಣ್ ಜೇಟ್ಲಿ, ಉಸ್ತುವಾರಿ ಪ್ರಧಾನ್ ರಾಜ್ಯಕ್ಕೆ ಈಗ ಭೇಟಿ ನೀಡುವರೆಂಬುದು ಸಂಧಾನ ತರಬಹುದೇ ಎಂಬುದನ್ನು ಪ್ರಶ್ನೆಯನ್ನಾಗಿಯೇ ಉಳಿಸಿದೆ. ಇಂತಹ ಸಂಧಾನಗಳು ಪಕ್ಷದ ಅನೈತಿಕತೆ, ಅಕ್ರಮಗಳನ್ನು ತಿದ್ದುವ ಬದಲು ರಾಜೀಸೂತ್ರ ಹೆಣೆಯಲು ಪ್ರಯತ್ನ ನಡೆಸುವುದು ಹೈಕಮಾಂಡ್‌ನ ದಿವಾಳಿತನವನ್ನೂ, ದೌರ್ಬಲ್ಯವನ್ನು ತೋರಿಸುವಂತಹವು.

ಏನು? ಎಷ್ಟು!

ಇಷ್ಟೆಲ್ಲಾ ಆದರೂ ಕದನ ನಿಲ್ಲುವ ಸಂಭವಗಳೇ ಇಲ್ಲ. ಮೊನ್ನೆ ಸಿಬಿಐ ಎಫ್.ಐ.ಆರ್. ಹಾಕಿ ಅದರ ತಂಡಗಳು ಯಡಿಯೂರಪ್ಪ ಹಾಗೂ ಕುಟುಂಬದ ಸದಸ್ಯರು, ನಿಕಟವರ್ತಿಗಳ ಮನೆ ಮೇಲೆ ಧಾಳಿ ಮಾಡಿದ್ದು ಬಂಧನದ ಭೀತಿಯಿಂದ ಅವರೆಲ್ಲಾ ತತ್ತರಿಸುವಂತೆ ಮಾಡಿದೆ. ಹೈಕೋರ್ಟ್ ನಿರೀಕ್ಷಣಾ ಜಾಮೀನು ಕೊಡುವುದನ್ನು ಮುಂದೆ ಹಾಕಿರುವುದೂ ಆತಂಕ ಹೆಚ್ಚಿಸಿದೆ. ಏತನ್ಮಧ್ಯೆ ಯಡಿಯೂರಪ್ಪ ತಮಗಾಗಿ ಹೊಸ ಕಛೇರಿ ಆರಂಭಿಸುತ್ತಿರುವುದು ಹಲವು ಪ್ರಶ್ನೆಗಳನ್ನು, ಕುತೂಹಲವನ್ನು ಹೆಚ್ಚಿಸಿದೆ.

ಈ ಗಡಿಬಿಡಿಯಲ್ಲಿ, ಜನರೆಲ್ಲಿ?

ಹೊಸ ಕಛೇರಿ. ಅಂದರೆ ಹೊಸ ಪಕ್ಷವೇ?. ಹೊರ ನಡೆಯುವ ಸೂಚನೆಯೇ?. ವಾರದಲ್ಲಿ ಬರುವುದಾಗಿ ಹೇಳಿದ್ದ ಜೇಟ್ಲಿ ಇಂದೇ(18 ಶುಕ್ರವಾರ) ಓಡಿ ಬರುತ್ತಿರುವರೇಕೆ?. ಸದಾನಂದರ ಆನಂದ ಇಮ್ಮಡಿಯಾಗಿದೆಯೇಕೆ? .ಕರ್ನಾಟಕ ಕಾಂಗ್ರೆಸ್ ಮುಖಂಡರು ಇಂದು ದೆಹಲಿಗೆ ಹಾರಿದ್ದೇಕೆ ?.ಕರ್ನಾಟಕದಲ್ಲಿ ಇದೇ ಗೊಂದಲ. ಹೀಗಾಗಿ ಜನರನ್ನು ಕೇಳುವವರೇ ಇಲ್ಲದಂತಹ ಸ್ಥಿತಿ.

ಭೂಮಿ ಹೋರಾಟ....

ಪುಟ 7ರಿಂದ

ಜಮೀನಿಗೆ ಸಂಬಂಧಿಸಿ ಬಗರ್ ಹುಕುಂ ಸಾಗುವಳಿದಾರ ರೈತರ 50–53 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇವೆ. ಈ ವಿಷಯವನ್ನು ಜಿಲ್ಲಾಡಳಿತದ ಗಮನಕ್ಕೆ ತಂದಾಗ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಜಮೀನಿನಲ್ಲಿ ಬಿಎಂಟಿಸಿ ಸಂಸ್ಥೆಯು ಯಾವುದೇ ನಿರ್ಮಾಣ ಕಾಮಗಾರಿ ನಡೆಸುವುದಕ್ಕೆ ಮತ್ತು ಈಗಿರುವ ಜಮೀನಿನ ಸ್ವರೂಪವನ್ನು ಮಾರ್ಪಡಿಸುವುದಕ್ಕೆ ತಡೆ ನೀಡಿ ಯಥಾ ಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದ್ದಾರೆ.

ಅದೇ ರೀತಿ ಇದೇ ದಾಸನಪುರ ಹೋಬಳಿಯ ಮತ್ತಹಳ್ಳಿ ಮತ್ತು ಇತರ ಸುತ್ತಮುತ್ತಲ ಹಲವು ಗ್ರಾಮಗಳಲ್ಲಿ ಒಟ್ಟಾರೆ 67 ಎಕರೆ 25 ಗುಂಟೆ ಜಮೀನನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಂಜೂರು ಮಾಡಲಾಗಿದೆ. ಈ ವಿವಿಧ ಗ್ರಾಮಗಳ ಈ ಜಮೀನಿನ ಸಂಬಂಧ ಕೂಡ ಅರ್ಜಿ ನಮೂನೆ 50–53 ಅನ್ನು ಹಿಂದೆಯೇ ಸಲ್ಲಿಸಲಾಗಿತ್ತು. ಜಿಲ್ಲಾಧಿಕಾರಿಗಳು ಈ ವಿಷಯದಲ್ಲಿ ಕೂಡ ರೈತರ ಪರವಾಗಿ ಯಥಾಸ್ಥಿತಿ ಕಾಪಾಡಲು ಆದೇಶ ನೀಡಿರುವುದು ಕೊಂಚ ಆಶಾದಾಯಕವಾಗಿದೆ. ಕಾನೂನು ಹೋರಾಟದ ಅವಕಾಶವು ಇದೆ. ಜೊತೆಗೆ ಬಗರ್ ಹುಕುಂ ಸಾಗುವಳಿಯನ್ನು ಸರ್ಕಾರಿ ಜಮೀನಿನ ಅತಿಕ್ರಮಣ ಎನ್ನುವ 'ಬಾಲಸುಬ್ರಮಣ್ಯಂ ಸಮಿತಿ'ಯಂತಹ ಸಮಿತಿಯ ದೋಷಪೂರಿತ ದೃಷ್ಟಿಕೋನ ಹಾಗೂ ದೋಷಪೂರಿತವಾದ ಶಿಫಾರಸ್ಸುಗಳುಳ್ಳ ವರದಿಗಳನ್ನು ತಿರಸ್ಕರಿಸುವಂತೆ ಮತ್ತು ತನ್ನ ಧೋರಣೆ ಬದಲಿಸಿಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಅವಕಾಶವಾಗಿದೆ.

ಪಂಚಮುಖಿ ಟ್ರಸ್ಟ್‌ಗೆ ಚಮಚಾಗಿರಿ ವಿರುದ್ಧ

ಹುಚ್ಚಯ್ಯನ ಪಾಳ್ಯ ಎಂಬ ಗ್ರಾಮದಲ್ಲಿ ಬಗರ್ ಹುಕುಂ ಸಾಗುವಳಿ ಭೂಮಿಯಲ್ಲಿ 7 ಎಕರೆಯನ್ನು ಪಂಚಮುಖಿ ಟ್ರಸ್ಟ್ ಎಂಬ ಸಂಸ್ಥೆಗೆ ಮಂಜೂರು ಮಾಡಲಾಗಿತ್ತು. ಈ ಸಂಬಂಧ ಪಂಚಮುಖಿ ಟ್ರಸ್ಟ್ ಜಮೀನಿನಲ್ಲಿ ಏನನ್ನೂ ಮಾಡಬಾರದು ಎಂಬ ನ್ಯಾಯಾಲಯದ ಆದೇಶವಿದೆ. ಅದನ್ನೂ ಮೀರಿ ಟ್ರಸ್ಟ್ ಕಾಮಗಾರಿ ನಡೆಸುತ್ತಿದ್ದು ಅದಕ್ಕೆ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ. ಟ್ರಸ್ಟ್ ಪರ ಲಾಬಿ ಮಾಡುತ್ತ ಅಕ್ರಮಗಳಿಗೆ ಬೆಂಬಲ ನೀಡುತ್ತಿದ್ದ ಸರ್ವೆ ಇಲಾಖೆ ಸೂಪರ್ ವೈಸರ್ ಪಾಷ ಕೃತ್ಯಗಳ ಕುರಿತು ವಿಚಾರಿಸುವ ಸಲುವಾಗಿ ಆತನಿಂದ ಲಿಖಿತ ವಿವರಣೆ ಕೇಳಲಾಗಿದೆ.

ಅದೇ ರೀತಿ ತಿಪ್ಪಗೊಂಡನಹಳ್ಳಿ ಕೆರೆಯ ಅಚ್ಚುಕಟ್ಟು ಪ್ರದೇಶದ ಸೊಂಡೆಕೊಪ್ಪದಲ್ಲಿ ಅಕ್ರಮ ಬಡಾವಣೆ ನಿರ್ಮಾಣ ತೆರವಿಗೆ ಸಂಬಂಧಿಸಿ, ಮತ್ತಹಳ್ಳಿಯಲ್ಲಿ ಸ್ಮಶಾನ ಭೂಮಿಯನ್ನು ಅತಿಕ್ರಮಿಸಿಕೊಂಡು ಬಡಾವಣೆಗೆ ರಸ್ತೆ ಮಾಡಿಕೊಂಡಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಸಂಬಂಧ ಜಿಲ್ಲಾಡಳಿತ ಸೂಕ್ತ ನಿರ್ದೇಶನ ನೀಡಿತು.

ಸಿಒಡಿ ತನಿಖೆಗೆ ಶಿಫಾರಸ್ಸು

ಮತ್ತಹಳ್ಳಿ ಮತ್ತು ಹೊನ್ನಸಂದ್ರ ಗ್ರಾಮಗಳಲ್ಲಿ 1994ರಲ್ಲಿ 1400 ನಿವೇಶನಗಳನ್ನು ಬಡವರಿಗೆ ಹಂಚಿ ಹಕ್ಕುಪತ್ರ ನೀಡಲಾಗಿದ್ದು ಇದೀಗ ಅದೇ ಭೂಮಿಯನ್ನು ಬಿಎಂಟಿಸಿ ಮತ್ತು ಎಪಿಎಂಸಿ ಸಂಸ್ಥೆಗಳಿಗೆ ಮತ್ತೆ ಹಂಚಿಕೆ ಮಾಡಲಾಗಿದೆ. ರೈತ ಸಂಘ ಈ ಬಗೆಗೆ ತಕರಾರು ಎತ್ತಿದಾಗ ನಿವೇಶನ ಹಕ್ಕುಪತ್ರಗಳು ಕ್ರಮಬದ್ಧವಾಗಿಲ್ಲವೆಂಬಂತೆ ಕಾಣುತ್ತಿದೆ, ಪರಿಶಿಲನೆಯಾಗಬೇಕು ಎಂದು ಆಡಳಿತ ಹೇಳಿದೆ.

ಹುಣ್ಣಿಗೆರೆ ಗ್ರಾಮದಲ್ಲಿ ಸಹ ಇಂಥದ್ದೇ ಪ್ರಶ್ನೆ ಎದುರಾಗಿದೆ. ಬಡ ಜನರು ನಿವೇಶನದ ಹಕ್ಕು ಪತ್ರ ಹೊಂದಿರುವ ಭೂಮಿಯನ್ನು ಬಿಡಿಎ ಸಂಸ್ಥೆಗೆ ನೀಡಲಾಗಿದೆ. ಈ ಬಗೆಗೆ ಪ್ರಶ್ನಿಸಲಾಗಿ ಹಕ್ಕುಪತ್ರಗಳ ಸಾಚಾತನದ ಪ್ರಶ್ನೆಯನ್ನು ಜಿಲ್ಲಾಡಳಿತ ಎತ್ತಿದೆ.

ಇಲ್ಲಿ ಒಂದು ಸ್ಪಷ್ಟವಾಗಿದೆ. ಮೇಲಿನ ಎರಡೂ ಪ್ರಕರಣಗಳಲ್ಲಿ ಹಕ್ಕುಪತ್ರಗಳು ನಕಲಿ ಆಗಿದ್ದರೆ ಅಥವಾ ಅವು ಕ್ರಮಬದ್ಧವಾಗಿರುವ ದಾಖಲೆ ಅಲ್ಲವಾದರೆ ಅದಕ್ಕೆ ಬಡ ಜನರು ಖಂಡಿತ ಕಾರಣ ಅಲ್ಲ. ಎಸ್.ಎಂ. ಕೃಷ್ಣ ಅವರ ಸರ್ಕಾರದಲ್ಲಿ ವಸತಿ ಸಚಿವರಾಗಿದ್ದ ಅಂಜನಮೂರ್ತಿ ಚುನಾವಣೆಯ ಸಮಯದಲ್ಲಿ ಜನರನ್ನು ವಂಚಿಸಲು ಸರಿಯಾದ ಕ್ರಮಬದ್ಧತೆಯನ್ನು ಅನುಸರಿಸದೇ ನಿವೇಶನ ಹಂಚಿಕೆ ಮಾಡಿರುವುದೇ ಹುಣ್ಣಿಗೆರೆ ನಿವೇಶನಗಳ ಹಕ್ಕುಪತ್ರಗಳ ಈ ಪ್ರಕರಣದ ಮೂಲ. ಹಿಂದೆಯೂ ಹಾಗೆಯೇ ಆಗಿರಬಹುದು. ಈಗ ಆಗಬೇಕಾದ ಕೆಲಸ ಎಂದರೆ ನಕಲಿ ದಾಖಲೆ ಒದಗಿಸಿದವರ ಮೇಲೆ ಕ್ರಮ ಕೈಗೊಳ್ಳುವುದು. ಅಮಾಯಕ ಬಡಜನರ ವಿರುದ್ಧ ಅಲ್ಲ. ಜಿಲ್ಲಾಧಿಕಾರಿಗಳು ಈ ಪ್ರಕರಣದ ಕುರಿತು ಸಿಒಡಿ ತನಿಖೆಗೆ ಶಿಫಾರಸ್ಸು ಮಾಡುವುದಾಗಿ ಹೇಳಿದ್ದಾರೆ. ಅದರ ಜೊತೆಗೆ ಬಡವರಿಗೆ ಅದೇ ಜಾಗದಲ್ಲಿಯೋ ಅಥವಾ ಬೇರೆ ಜಾಗದಲ್ಲಿಯೋ ಒಟ್ಟಾರೆ ಮನೆ ನಿವೇಶನಗಳನ್ನು ನೀಡಬೇಕೆಂದು ಪ್ರಾಂತ ರೈತ ಸಂಘ ಸರ್ಕಾರವನ್ನು ಒತ್ತಾಯಿಸಿದೆ. ಬಡವರ ಪರವಾದ ಹೋರಾಟ ಇನ್ನೂ ಸಾಕಷ್ಟು ಮುಂದುವರಿಯಬೇಕಾಗಿದೆ. ಆದರೆ ಹೋರಾಟಕ್ಕೆ ಸಾಕಷ್ಟು ಫಲ ಸಿಕ್ಕಿರುವುದರಿಂದ, ಸಿಗುತ್ತಿರುವುದರಿಂದ ಮೇ 21, 2012 ರ ಅನಿಧಿಷ್ಟ ಧರಣ ಹೋರಾಟಕ್ಕೆ ರೈತರು ತುಂಬು ಉತ್ಸಾಹದಲ್ಲಿ ಓಡಾಡುತ್ತಿರುವುದು ಇತರರಿಗೂ ಸ್ಪೂರ್ತಿಯಾಗಿದೆ.

ಆನೇಕಲ್ ತಾಲ್ಲೂಕಿನ ಬಡ ರೈತ ಬ್ಯಾಟಪ್ಪನ ಭೂಮಿ, ಮುಗುಳುರು ಪಂಚಾಯ್ತಿ ವ್ಯಾಪ್ತಿಯ ಬಗರ್ ಹುಕುಂ 'ಸಾಗುವಳಿದಾರರ ಭೂಮಿ ಪ್ರಶ್ನೆ ಮುಂತಾದವುಗಳ ಸಂಬಂಧದ ಹೋರಾಟದಲ್ಲಿ 'ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ' ತಾಲ್ಲೂಕು ಅಧ್ಯಕ್ಷರು ಹಾಗೂ ಪ್ರಾಂತ ರೈತ ಸಂಘದ ಮುಖಂಡರೂ ಆದ ನಾರಾಯಣಪ್ಪ, ರಾಜಣ್ಣ, ಶಿವರಾಮರೆಡ್ಡಿ, ಬಚ್ಚಪ್ಪ, ನಾಗರಾಜ್ ಸತೀಷ ರೆಡ್ಡಿ ಮುಂತಾದವರು ನೇತೃತ್ವ ವಹಿಸಿದ್ದರು. ಹೋರಾಟದಲ್ಲೂ ಮತ್ತು ಜಿಲ್ಲಾಧಿಕಾರಿಗಳೊಂದಿಗಿನ ಮಾತುಕತೆಗಳಲ್ಲೂ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಉಪಾಧ್ಯಕ್ಷರೂ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷರೂ ಆದ ಎನ್. ವೆಂಕಟಾಚಲಯ್ಯ ನಿರಂತರ ಜೊತೆಗಿದ್ದು ಮಾರ್ಗದರ್ಶನ ನೀಡಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ವಿವಿಧ ಪ್ರಶ್ನೆಗಳಲ್ಲಿ ಹೋರಾಟದಲ್ಲಿ ಮತ್ತು ಜಿಲ್ಲಾಧಿಕಾರಿ, ತಾಲ್ಲೂಕು ಅಧಿಕಾರಿಗಳೊಂದಿಗಿನ ಚರ್ಚೆಯಲ್ಲಿ ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಉತ್ತರ ತಾಲ್ಲೂಕು ಮುಖಂಡರೂ ಹಾಗು ಪ್ರಾಂತ ರೈತ ಸಂಘದ ಮುಖಂಡರುಗಳೂ ಆಗಿರುವ ಮಾಯಣ್ಣ, ಸಿದ್ದಲಿಂಗಸ್ವಾಮಿ, ಫಾಲಾಕ್ಷಮ್ಮ, ಮತ್ತಿತರ ಮುಖಂಡರು ನೇತೃತ್ವ ವಹಿಸಿದ್ದರು. ಜಿಸಿಬಯ್ಯಾರೆಡ್ಡಿ, ವೆಂಕಟಾಚಲಯ್ಯ ಮುಂತಾದವರು ಜೊತೆಗಿದ್ದು ಮಾರ್ಗದರ್ಶನ ನೀಡಿದರು.

ಹಣಕಾಸು ಮಂತ್ರಿಗಳ ಬಾಯಲ್ಲೂ ಈಗ 'ಮಿತವ್ಯಯ'ದ ಮಾತು

ಕಳೆದ ವಾರ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ 3.5ಶೇ.ಕ್ಕೆ ಇಳಿದಿದ್ದು, ಇದು ಕಳೆದ ಐದು ವರ್ಷಗಳಲ್ಲೇ ಅತಿ ಕಡಿಮೆ ಎಂಬ ಸುದ್ದಿ ನಿರಾಸೆ ತಂದಿದೆ ಎಂದಿದ್ದರು ಯುಪಿಎ-2 ಹಣಕಾಸು ಮಂತ್ರಿಗಳು. ಕಳೆದ ವರ್ಷ ಇದೇ ಅವಧಿಯಲ್ಲಿ 9.4ಶೇ. ಬೆಳವಣಿಗೆ ದಾಖಲಾಗಿತ್ತು. 2010-11 ರ ಹಣಕಾಸು ವರ್ಷದಲ್ಲಿ 8.2ಶೆ. ಬೆಳವಣಿಗೆ ಕಂಡಿತ್ತು. ಈ ವರ್ಷ ಇದು 2.8ಶೇ.ಕ್ಕೆ ಇಳಿದಿದೆಯಂತೆ. ದುರ್ಬಲ ಜಾಗತಿಕ ಮಾರುಕಟ್ಟೆ 'ಭಾವನೆಗಳು' ಚೇತರಿಕೆಯನ್ನು ತಡೆಯುತ್ತಿವೆ ಎಂದು ಅವರು ಸಮಜಾಯಿಷಿ ನೀಡಿದ್ದರು.

ಈ ವಾರ ಇನ್ನಷ್ಟು ನಿರಾಸೆಗಳು ಕಾಡುತ್ತಿವೆ. ರೂಪಾಯಿ ಮೌಲ್ಯ ಡಾಲರಿಗೆದುರಾಗಿ ಹಿಂದೆಂದೂ ಕಾಣದಷ್ಟು ಕೆಳಮಟ್ಟಕ್ಕೆ ಇಳಿಯಿತು. ನವ-ಉದಾರವಾದಿಗಳ ಪ್ರಿಯ ಶೇರು ಮಾರುಕಟ್ಟೆ ಸೂಚ್ಯಂಕ 16,000 ದ ಕೆಳಗೆ ಕುಸಿತು. ಅದರೆ ಇದು ಭಾರತೀಯ ಆರ್ಥಿಕದ ಆಂತರಿಕ ದುರ್ಬಲತೆಯಿಂದಾಗಿ ಅಲ್ಲ, ಬದಲಾಗಿ ಗ್ರೀಸ್ ದೇಶದಲ್ಲಿನ ಬಿಕ್ಕಟ್ಟು ಯುರೋವಲಯದಲ್ಲಿ ತಂದಿರುವ ಅಸ್ಥಿತರತೆಯಿಂದಾಗಿ ಎಂದು ಅವರು ಸಮಜಾಯಿಷಿ ನೀಡಿದ್ದಾರೆ. ಗ್ರೀಸಿನ ಮತದಾರರು ಒಂದಿ ನಿರ್ದಿಷ್ಟ ರಾಜಕೀಯ ಪಕ್ಷದ ವಿರುದ್ಧ ಮತನೀಡಿದ್ದರಿಂದ ಯುರೋ ವಲಯದ ಮುಖಂಡರು ತಮ್ಮ ಬಿಕ್ಕಟ್ಟನ್ನು ನಿವಾರಿಸಲು ಸೂಚಿಸಿದ ಪ್ಯಾಕೇಜ್ ಮುಂದೆ ಪ್ರಶ್ನೆ ಚಿಹ್ನೆ ಬಿದ್ದಿರುವುದರಿಂದ ಹೀಗಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ ಗ್ರೀಸಿನ ಮತದಾರರು ಮತ ನೀಡಿದ್ದು ಒಂದು ರಾಜಕೀಯ ಪಕ್ಷದ ವಿರುದ್ಧವಲ್ಲ, ಯುರೋವಲಯದ ಮುಖಂಡರು ಗ್ರೀಸಿನ ಮೇಲೆ ಹೇರಿರುವ 'ಮಿತವ್ಯಯ'ದ (ಅಂದರೆ ಜನತೆಯ ಹಿತಗಳನ್ನು ಹತ್ತಿಕ್ಕುವ) ಕ್ರಮಗಳ ವಿರುದ್ಧ ಎಂಬುದನ್ನು ಕಾಣಲು ಈಗಲೂ ನಮ್ಮ ಆಳರಸರು ಸಿದ್ಧರಿಲ್ಲ.


ಹಣಕಾಸು ಮಂತ್ರಿಗಳು 'ಒಂದು ರಾಜಕೀಯ ಪಕ್ಷದ' ವಿರುದ್ಧ ಮತ ನೀಡಿದರು ಎನ್ನುತ್ತ ಭಾರತದ ಆರ್ಥಿಕದ ಮೇಲೆ ಇದರ ಪರಿಣಾಮಗಳನ್ನು ಎದುರಿಸಲು ಅವೇ 'ಮಿತವ್ಯಯ'ದ ಕ್ರಮಗಳ ಸಂಕೇತ ನೀಡಿರುವುದನ್ನು ನೋಡಿದರೆ ಸ್ವಂತ ಅನುಭವದಿಂದಲೂ, ಬೇರೆಯವರ ಅನುಭವದಿಂದಲೂ ನಮ್ಮನ್ನು ಆಳುವ ಮಂದಿ ಪಾಠ ಕಲಿಯುತ್ತಿಲ್ಲ ಎಂದು ಕಾಣುತ್ತದೆ. ಬಹುಶಃ ಗ್ರೀಸಿನ, ಫ್ರಾನ್ಸಿನ ಜನತೆಯಂತೆ ಭಾರತದ ಜನತೆಯೇ ಅವರಿಗೆ ಪಾಟ ಕಲಿಸಬೇಕು.

ಯುಪಿಎ-2 ಹಣಕಾಸು ಮಂತ್ರಿಗಳ ಬಾಯಿಂದ 'ಮಿತವ್ಯಯ'ದ ಮಾತು ಕೇಳಿ ಶೇರು ಮಾರುಕಟ್ಟೆ ತುಸು ಚೇತರಿಸಿಕೊಂಡಿತಂತೆ!

★

ಏರ್ ಇಂಡಿಯಾ ಮುಷ್ಕರ: ಖಾಸಗೀಕರಣದ ಮಾತೇಕೆ?

ಏರ್ ಇಂಡಿಯಾದ ಮುಷ್ಕರ, ಈ ಸಂಚಿಕೆ ಸಿದ್ಧವಾಗುವ ವೇಳೆಗೆ 8ನೇ ದಿನಕ್ಕೆ ಕಾಲಿಟ್ಟಿದೆ. ಆರಂಭದಲ್ಲಿ ಯುಪಿಎ-2 ಸರಕಾರ ನ್ಯಾಯಾಂಗ ನಿಂದನೆಯ ಪ್ರಶ್ನೆಯನ್ನು ಮಧ್ಯಕ್ಕೆ ಎಳೆಯಲು ಪ್ರಯತ್ನಿಸಿತು. ಈ ಮುಷ್ಕರದಲ್ಲಿ ಅಂತಹ ಪ್ರಶ್ನೆಯೇನೂ ಇಲ್ಲ, ಇದು ನಿಮ್ಮ ನಡುವಿನ ಪ್ರಶ್ನೆ, ನೀವೇ ಬಗೆಹರಿಸಿಕೊಳ್ಳಿ ಎಂದು ಸುಪ್ರಿಂ ಕೋರ್ಟ್ ಹೇಳಿತು. ನಂತರ ವಿಮಾನಯಾನ ಮಂತ್ರಿಗಳು ಸಂಸತ್ತು ಅಧಿವೇಶನದಲ್ಲಿರುವಾಗಲೇ, ಸಂಸತ್ತಿಗೆ ಏನೂ ಹೇಳದೆ, ಹೊರಗೆ ಮಾಧ್ಯಮಗಳಿಗೆ ಒಂದು ರಾಷ್ಟ್ರೀಯ ವಿಮಾನಯಾನ ಸಂಸ್ಥೆಯ ಅಗತ್ಯವಿದೆಯೇ ಎಂಬ ಪ್ರಶ್ನೆಯೆತ್ತಿದರು, ಏರ್ ಇಂಡಿಯಾದ ಖಾಸಗೀಕರಣ ಮುಂತಾದ ವಿಷಯಗಳ ಬಗ್ಗೆ ತಮ್ಮ 'ವೈಯಕ್ತಿಕ' ಅಭಿಪ್ರಾಯಗಳನ್ನು ಹೇಳತೊಡಗಿದರು. ಇದಕ್ಕೆ ಎಡಪಕ್ಷಗಳು ಆಕ್ಷೇಪಿಸಿ ಸಂಸತ್ತಿನಲ್ಲಿ ಈ ಬಗ್ಗೆ ಹಕ್ಕುಚ್ಯುತಿ ನಿಲುವಳಿ ಮಂಡಿಸುವದಾಗಿ ಹೇಳಿದವು.



ವಾಸ್ತವವಾಗಿ ಇದು ಯುಪಿಎ-2 ಸರಕಾರದ ಸ್ವಯಂಕೃತಾಪರಾಧದ ದುಷ್ಫಲ. ಅದನ್ನು ಉಣ್ಣಬೇಕಾಗಿ ಬಂದಿರುವುದು ಪ್ರಯಾಣಿಕರು. ಈ ಹಿಂದೆ ಇದ್ದ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್‌ನ ವಿಲೀನದ ಅಪಾಯಗಳ ಬಗ್ಗೆ ಸಂಸತ್ತಿನ ಸ್ಥಾಯಿ ಸಮಿತಿ ಎರಡು ಬಾರಿ ಎಚ್ಚರಿಸಿತ್ತು. ಸಾರ್ವಜನಿಕ ಉದ್ದಿಮೆಗಳ ಸಮಿತಿ ಕೂಡ ಇದನ್ನು ಹೇಳಿತ್ತು. "ಈ ಎರಡು ಕಂಪನಿಗಳು ಒಂದೇ ಹೋಲ್ಡಿಂಗ್ ಕಂಪನಿಯ ಅಡಿಯಲ್ಲಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲಿ ಎಂದು ಸಂಸತ್ತಿನ ಸ್ಥಾಯಿ ಸಮಿತಿ ಶಿಫಾರಸು ಮಾಡಿತ್ತು. ಆದರೆ ಸರಕಾರ ಇದನ್ನು ಸ್ವೀಕರಿಸಲಿಲ್ಲ. ಮೂರು-ನಾಲ್ಕು ವರ್ಷಗಳ ಹಿಂದೆ ನಾವು ಎಚ್ಚರಿಸಿದ್ದ ಸಮಸ್ಯೆಗಳಿವು" ಎಂದು ವಿಮಾನಯಾನ ಇಲಾಖೆ ಕುರಿತ ಸ್ಥಾಯಿ ಸಮಿತಿಯ ಅಧ್ಯಕ್ಷ ಸೀತಾರಾಂ ಯೆಚುರಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಯುಪಿಎ-2 ಸರಕಾರದ ಈಗಿನ ವಿಮಾನಯಾನ ಮಂತ್ರಿಗಳ ಖಾಸಗೀಕರಣದ ಮಾತನ್ನು ಕಾಣಬೇಕಾಗಿದೆ

★

ತ್ರಿಪುರ : ಗರಿಷ್ಟ ಉದ್ಯೋಗ ನಿರ್ಮಾಣಕ್ಕೆ ಶಿಕ್ಷೆ!

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾನೂನಿನ ಅಡಿಯಲ್ಲಿ ಕಳೆದ ವರ್ಷ ಉದ್ಯೋಗ ನಿರ್ಮಾಣದಲ್ಲಿ ಮೊದಲ ಸ್ಥಾನ ತ್ರಿಪುರಾದ್ದು. ಯುಪಿಎ-2 ಸರಕಾರ ಇದು ತನ್ನ 'ಆಮ್ ಆದ್ಮಿ'ಪರತೆಯನ್ನು ಸಂಕೇತಿಸುವ ಮಹಾಯೋಜನೆ ಎಂದು ಬೆನ್ನು ತಟ್ಟಿಕೊಳ್ಳುತ್ತದೆ. ಆದರೆ ಈ ಯೋಜನೆಯನ್ನು ಗರಿಷ್ಟ ಮಟ್ಟಕ್ಕೆ ಒಯ್ದ ತ್ರಿಪುರಾ ಸರಕಾರಕ್ಕೆ ಈ ವರ್ಷ ಇದುವರೆಗೂ ಈ ಯೋಜನೆಗೆ ಚಿಕ್ಕಾಸೂ ಬಿಡುಗಡೆ ಮಾಡಿಲ್ಲ. ಬಹುಶಃ ಉದ್ಯೋಗ ನಿರ್ಮಾಣ ಈ ಕಾನೂನಿನ ಘೋಷಿತ ಉದ್ದೇಶ ಮಾತ್ರ, ವಾಸ್ತವ ಉದ್ದೇಶವಲ್ಲ, ಆದ್ದರಿಂದಲೇ ಘೋಷಿತ ಉದ್ದೇಶ ಸಾಧಿಸಿದ್ದಕ್ಕೆ ಶಿಕ್ಷೆ!

"ಕೇಂದ್ರ ಸರಕಾರ ತನ್ನ 2012-13ರ ಬಜೆಟಿನಲ್ಲಿ ರೇಗಾಕ್ಕೆ 1208.86 ಕೋಟಿ ರೂ. ಕೊಡುವುದಾಗಿ ಹೇಳಿದೆ. ಆದರೆ ಅದರ ವೆಬ್ ತಾಣದಲ್ಲಿ ಈ ಬಾಬ್ತು ಮಂಜೂರಾಗಿದೆ ಎಂದು ತೋರಿಸಿರುವ ಹಣ ಕೇವಲ 38.6 ಕೋಟಿ ರೂ. ಇದರಲ್ಲೂ ರಾಜ್ಯಕ್ಕೆ ಏನೂ ಹಣ ಕೊಟ್ಟಿಲ್ಲ, ಇದರಿಂದಾಗಿ ಒಂದೂವರೆ ತಿಂಗಳಾದರೂ ಈ ಹಣಕಾಸು ವರ್ಷದಲ್ಲಿ ಏನೂ ಕಾಮಗಾರಿಯನ್ನು ಈ ಕಾನೂನಿನ ಅಡಿಯಲ್ಲಿ ಆರಂಭಿಸಲು ಸಾಧ್ಯವಾಗಿಲ್ಲ" ಎಂದು ತ್ರಿಪುರಾ ಗ್ರಾಮೀಣಾಭಿವೃದ್ಧಿ ಮಂತ್ರಿ ಜಿತೇಂದ್ರ ಚೌಧುರಿ ಹೇಳಿದ್ದಾರೆ. ■



ವೇದರಾಜ ಎನ್.ಕೆ.

ಕಚ್ಚಾ ತೈಲ ಆಮದು 11ಶೇ. ಕಡಿತ ಆದರೂ ಅಮೆರಿಕನನ್ನರಿಗೆ ತೃಪ್ತಿಯಿಲ್ಲ

ಇರಾನಿನಿಂದ ಕಚ್ಚಾತೈಲದ ಆಮದನ್ನು ಕಡಿತ ಮಾಡಬೇಕೆಂಬ ಅಮೆರಿಕಾದ ಒತ್ತಡಕ್ಕೆ ತಲೆಬಾಗಲು ಸಾಧ್ಯವಿಲ್ಲ, ಇದು ನಮ್ಮ ರಾಷ್ಟ್ರೀಯ ಹಿತಾಸಕ್ತಿಯ ಪ್ರಶ್ನೆ ಎಂದು ಯುಪಿಎ-2 ವಕ್ತಾರರು ಹೇಳಿಕೊಂಡು ಬಂದರೂ ಈ ಹಣಕಾಸು ವರ್ಷದಲ್ಲಿ 11ಶೇ. ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಡಿತ ಮಾಡಲು ಅದು ಈಗಾಗಲೇ ನಿರ್ಧರಿಸಿದೆಯಂತೆ.

ಇರಾನಿನಿಂದ ಆಮದು ಮಾಡಿಕೊಂಡ ಕಚ್ಚಾ ತೈಲದ ಪ್ರಮಾಣ 2008-09ರಲ್ಲಿ 21.8 ಮಿಲಿಯ ಟನ್, 2010-11ರಲ್ಲಿ 18.5 ಮಿಲಿಯ ಟನ್, 2011-12ರಲ್ಲಿ 17.44 ಮಿಲಿಯ ಟನ್‌ಗಿಳಿಯಿತು. ಈ ವರ್ಷ ಅದನ್ನು 15.5 ಮಿಲಿಯ ಟನ್‌ಗೆ ಇಳಿಸಲು ಸರಕಾರ ನಿರ್ಧರಿಸಿದೆ. ಈ ಅಂಕಿ-ಅಂಶಗಳನ್ನು ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಸದಸ್ಯ ಪ್ರಶಾಂತ ಚಟರ್ಜಿ ಉದ್ಧರಿಸುತ್ತಾ ಭಾರತ ಅಮೆರಿಕಾದ ಒತ್ತಡಕ್ಕೆ ಮಣಿಯುತ್ತಿದೆ, ಈ ಬಗ್ಗೆ ಪ್ರಧಾನ ಮಂತ್ರಿಗಳು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದರು. ಆಗ ಪ್ರಧಾನ ಮಂತ್ರಿಗಳು ಸದನದಲ್ಲಿ ಹಾಜರಿದ್ದರು.

ಅತ್ತ ಇರಾನಿನ ಕಚ್ಚಾತೈಲದ ಮೇಲಿನ 'ಅವಲಂಬನೆಯನ್ನು' ಬಿಟ್ಟು ಅಮೆರಿಕಾ ಸೂಚಿಸುವ ಮೂಲಗಳ ಮೇಲೆ ಹೇಗೆ ಅವಲಂಬಿಸಬಹುದು ಎಂಬ ಬಗ್ಗೆ ಪಾಠ ಹೇಳಲು ಅಮೆರಿಕಾದ ವಿದೇಶಾಂಗ ಸಚಿವೆ ಕಳಿಸಿದ ವಿಶೇಷ ರಾಯಭಾರಿ ಯುಪಿಎ-2 ಸರಕಾರದ ಈ ಪ್ರಯತ್ನಗಳು ಏನೂ ಸಾಲದು ಎಂದಿದ್ದಾರೆ. ಎರಡನೇ ಮಹಾಯುದ್ಧದಲ್ಲಿ ಅನಾವಶ್ಯಕವಾಗಿ ಅಣುಬಾಂಬುಗಳನ್ನು ಹಾಕಿ ತಾನು ಬಗ್ಗಿಸಿದ ಜಪಾನಿನತ್ತ ಬೊಟ್ಟು ಮಾಡಿ ತೋರಿಸುತ್ತಾ, ನೋಡಿ, ಭಾರೀ ಸುನಾಮಿ ಎದುರಿಸಬೇಕಾಗಿ ಬಂದರೂ ಅವರು ಇರಾನಿನಿಂದ ಆಮದನ್ನು 80ಶೇ. ಕಡಿತ ಮಾಡಿದ್ದಾರೆ, ನಿಮಗೇಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸುವ ಅಹಂಭಾವ ತೋರಿಸುತ್ತಿದ್ದಾರೆ. ▲

ಜಗದಗಲ

ಶರತ್‌ಚಂದ್ರ

ಶ್ರಮಜೀವಿಗಳ ಧ್ವನಿ 'ಪ್ರಾವ್ಡಾ' ಪತ್ರಿಕೆಗೆ ಶತಮಾನೋತ್ಸವ

1912ರಲ್ಲಿ ಲೆನಿನ್ (ಕ್ರಾಂತಿ-ಪೂರ್ವ ರಶ್ಯದ) ಪೀಟರ್ಸ್‌ಬರ್ಗ್‌ನಲ್ಲಿ ಆರಂಭಿಸಿದ ರಶ್ಯನ್ ದೈನಿಕ 'ಪ್ರಾವ್ಡಾ'ಕ್ಕೆ ಈ ವರ್ಷ ನೂರು ತುಂಬಿದ ಸಂಭ್ರಮ. ಬೋಲ್ಷೆವಿಕ್ ಪಕ್ಷದ ಪತ್ರಿಕೆಯಾಗಿದ್ದ ಲೆನಿನರ ಪರಿಕಲ್ಪನೆಯಂತೆ ದುಡಿಯುವ ಜನರ ಸಾಮೂಹಿಕ ಪ್ರಚಾರ-ಪ್ರಕ್ಷೋಭೆಯ ಮತ್ತು ಸಂಘಟಕ ಪಾತ್ರವನ್ನು ರಶ್ಯನ್ ಕ್ರಾಂತಿಯ ಮೊದಲೂ ನಂತರವೂ ನಿರ್ವಹಿಸಿ ಇಪ್ಪತ್ತನೇ ಶತಮಾನದ ಉದ್ದಕ್ಕೂ ಸೋವಿಯೆಟ್ ಒಕ್ಕೂಟ ಮತ್ತು ಜಗತ್ತಿನಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಮೇ 5 ರಂದು ಮಾಸ್ಕೋದಲ್ಲಿ ಎರಡು ದಿನಗಳ ಸರಳ ಆದರೆ ಅಪಾರ ಸಂಭ್ರಮ ಕಂಡ ಸಮಾರಂಭದಲ್ಲಿ 'ಪ್ರಾವ್ಡಾ'ದ ನೂರು ತುಂಬಿದ ಉತ್ಸವವನ್ನು ಆಚರಿಸಲಾಯಿತು. ಈ ಶತಮಾನೋತ್ಸವ ಸಮಾರಂಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಂತರ್ರಾಷ್ಟ್ರೀಯ ಪ್ರತಿನಿಧಿಗಳು ಭಾಗವಹಿಸಿದ್ದರು. 200 ಕ್ಕೂ ಹೆಚ್ಚು ಎಡ ಪತ್ರಿಕೆ-ಪ್ರಕಾಶನಗಳು, 100ಕ್ಕೂ ಹೆಚ್ಚು ಎಡ ವೆಬ್ ಸೈಟುಗಳ ಪ್ರತಿನಿಧಿಗಳು ಜಗತ್ತಿನ ಮೂಲೆ ಮೂಲೆಗಳಿಂದ ಬಂದಿದ್ದರು. ಇವರಲ್ಲದೆ ಚೀನಾ, ವಿಯೆಟ್ನಾಂ, ಕೊರಿಯಾ, ಇಂಡಿಯಾ ಸೇರಿದಂತೆ 24 ಕಮ್ಯುನಿಸ್ಟ್ ಪಕ್ಷಗಳ ಪತ್ರಿಕೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಭಾರತದಿಂದ ಸಿಪಿಐ(ಎಂ) ಪತ್ರಿಕೆಗಳ ಪ್ರತಿನಿಧಿಯಾಗಿ ರಾಜೇಂದ್ರ ಶರ್ಮಾ ಈ ಸಮಾರಂಭದಲ್ಲಿ ಹಾಜರಿದ್ದರು.

ರಶ್ಯನ್ ಭಾಷೆಯಲ್ಲಿ ಸತ್ಯ ಎಂದು ಅರ್ಥವಿರುವ ಪ್ರಾವ್ಡಾ ಪತ್ರಿಕೆ, ಕಾರ್ಮಿಕ ವರ್ಗಕ್ಕೆ 'ಸತ್ಯ' ಹೇಳುವ ಪ್ರಯತ್ನದಲ್ಲಿ ಹಲವು ಸವಾಲುಗಳನ್ನೂ ಏಳು ಬೀಳುಗಳನ್ನು ಕಂಡಿದೆ.



ಮೊದಲ ಎರಡು ವರ್ಷಗಳಲ್ಲೇ ಝಾರನ ದಬ್ಬಾಳಿಕೆ ಎದುರಿಸಿ 8 ಬಾರಿ ಮುಚ್ಚಲ್ಪಟ್ಟಿತು. ಆದರೆ ಬೇರೆ ಹೆಸರುಗಳಲ್ಲಿ ಪ್ರಕಟವಾಗುತ್ತಿತ್ತು. ಆದರೆ 1914ರಲ್ಲಿ ಪೂರ್ಣವಾಗಿ ಮುಚ್ಚಿ, 1917 ಮಾರ್ಚಿನಲ್ಲಿ ಪುನರಾರಂಭಗೊಂಡು ರಶ್ಯನ್



ಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿತು. ಕ್ರಾಂತಿಗೆ ಮೊದಲು ತಾತ್ಕಾಲಿಕ ಸರ್ಕಾರದಿಂದಲೂ ದಾಳಿಗೆ ಗುರಿಯಾಯಿತು. ಸೋವಿಯೆಟ್ ಒಕ್ಕೂಟ ಇದ್ದಷ್ಟು ಅವಧಿಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಪ್ರಾವ್ಡಾ ಒಂದು ಕೋಟಿ ಓದುಗರನ್ನು, ಸಾವಿರಾರು ಪತ್ರಕರ್ತರು ವರದಿಗಾರರನ್ನು ಹೊಂದಿತ್ತು. 1990ರಲ್ಲಿ ಪ್ರತಿ-ಕ್ರಾಂತಿಯ ನಂತರ ನವ-ಝಾರ್ ಯೆಲ್ಸಿನ್ ಪ್ರಾವ್ಡಾ ಪತ್ರಿಕೆಯನ್ನು ನಿಷೇಧಿಸಿ, ಅದರ ಆಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡರು. ಪತ್ರಿಕೆಯನ್ನು ಒಬ್ಬ ಗ್ರೀಕ್ ಉದ್ಯಮಿಗೆ ಮಾರಲಾಯಿತು. 1997ರಲ್ಲಿ ರಶ್ಯನ್ ಕಮ್ಯುನಿಸ್ಟ್ ಪಕ್ಷ ಪುನಃ ಅದರ ನಿಯಂತ್ರಣ ಪಡೆದು, ಪಕ್ಷದ ಮುಖಪತ್ರಿಕೆಯಾಗಿ ತರಲು ಆರಂಭಿಸಿತು. ಈಗ ಒಂದು ಕಾಲದಲ್ಲಿ ಅದರ ಒಡೆತನದಲ್ಲಿದ್ದ (ಪಕ್ಷದ ಸದಸ್ಯರ ದೇಣಿಗೆಯಿಂದಲೇ ಕಟ್ಟಲಾಗಿದ್ದ) ಏಳು ಮಾಳಿಗೆಗಳ ಬೃಹತ್ ಕಟ್ಟಡದಲ್ಲಿ ಕೆಲವೇ ಕೋಣೆಗಲ್ಲಿ ರಶ್ಯನ್ ಅಧ್ಯಕ್ಷರಿಗೆ (ಯಾಕೆಂದರೆ ಅವರು ಈಗ ಅದರ ಒಡೆಯರು) ಬಾಡಿಗೆ ಕೊಟ್ಟು ಕಷ್ಟದಲ್ಲಿ ಪ್ರಾವ್ಡಾ ಪತ್ರಿಕೆಯನ್ನು ಕೇವಲ 23 ಪತ್ರಕರ್ತರು-ವರದಿಗಾರರೊಂದಿಗೆ ನಡೆಸಲಾಗುತ್ತಿದೆ. ನೂರು ವರ್ಷಗಳ ಹಿಂದೆ ಇದ್ದಂತೆ ಪುನಃ ಅದು ವಿರೋಧ ರಾಜಕೀಯ ಪಕ್ಷದ ವಾಣಿಯಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಾವ್ಡಾ ಶತಮಾನೋತ್ಸವ ಗತವೈಭವ ಮೆರೆಸುವಂತಹದಾಗಲಿ ಬರಿಯ ಸಂಭ್ರಮ ಪಡುವಂತಹದಾಗಲಿ ಆಗಿರಲಿಲ್ಲ. ಬದಲಾಗಿ ತನ್ನ ರಾಜಕೀಯ ಉದ್ದೇಶಗಳಿಗೆ ಪುನಃ ಸಮರ್ಪಿಸಿಕೊಳ್ಳುವುದು ಆಗಿತ್ತು. ಮೇ 1-9 ವಾರವನ್ನು ಫ್ಯಾಸಿಸಂ ಮೇಲೆ ವಿಜಯದ ವಾರವಾಗಿ ಆಚರಿಸಲಾಗುತ್ತದೆ. ಅದೇ ವಾರದಲ್ಲಿ ಈ ಸಮಾರಂಭ ನಡೆಯುತ್ತಿದ್ದರಿಂದ ಒಂದನೇ ದಿನ ಸಮೀಪದ 'ಅನಾಮಧೇಯ ಯೋಧನ ಸ್ಮಾರಕ'ಕ್ಕೆ ಭೇಟಿ ನೀಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಭಾರೀ ಸಂಖ್ಯೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಬೆಂಬಲಿಗರು ಮತ್ತು ಜನತೆ ಭಾಗವಹಿಸಿದ್ದರು. ಅಂತರ್ರಾಷ್ಟ್ರೀಯ ಪ್ರತಿನಿಧಿಗಳ ಜತೆ ಪ್ರಾವ್ಡಾ ಸಂಪಾದಕೀಯ ಮಂಡಳಿಯ ಸಂವಾದವನ್ನೂ ಏರ್ಪಡಿಸಲಾಗಿತ್ತು. ಅವರನ್ನು ಉದ್ದೇಶಿಸಿ ರಶ್ಯನ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಪ್ರಧಾನ ಸಂಪಾದಕರು ರಶ್ಯದ ಈಗಿನ ಪರಿಸ್ಥಿತಿ ಮತ್ತು ಪತ್ರಿಕೆಯ ಕರ್ತವ್ಯಗಳ ಕುರಿತು ಮಾತನಾಡಿದರು. ಮೊದಲ ದಿನದ ಸಂಜೆ ಸೋವಿಯೆಟ್ ಅವಧಿಯ ಪ್ರಸಿದ್ಧ ಕ್ರಾಂತಿಕಾರಿ ಮತ್ತು ಇತರ ಹಾಡು ನೃತ್ಯಗಳ ಅತ್ಯಂತ ಜನಪ್ರಿಯ ಕಾರ್ಯಕ್ರಮಗಳು ಇದ್ದವು.

ಎರಡನೇ ದಿನ ಎರಡು ಪ್ರತ್ಯೇಕ ಸಂವಾದಗಳನ್ನು ಏರ್ಪಡಿಸಲಾಗಿತ್ತು. ಮೊದಲ ಸಂವಾದದಲ್ಲಿ ಎಲ್ಲಾ ಅಂತರ್ರಾಷ್ಟ್ರೀಯ ಪತ್ರಕರ್ತರ ಜತೆ ಎಡ ಪತ್ರಿಕೆಗಳು ಮತ್ತು ಮಾಧ್ಯಮಗಳು ಎದುರಿಸುತ್ತಿರುವ ಸವಾಲುಗಳು, ಸಹಕಾರದ ಸಾಧ್ಯತೆ, ಜವಾಬ್ದಾರಿಗಳು, ಅನುಭವಗಳು ಇತ್ಯಾದಿಗಳನ್ನು ಚರ್ಚಿಸಲಾಯಿತು. ಎರಡನೇ ಸಂವಾದದಲ್ಲಿ 24 ಕಮ್ಯುನಿಸ್ಟ್ ಪಕ್ಷಗಳ ಪತ್ರಿಕೆಗಳ ಜತೆ ಸಂವಾದ ಏರ್ಪಟ್ಟಿತ್ತು. ಕಮ್ಯುನಿಸ್ಟ್ ಮಾಧ್ಯಮಗಳು ಎದುರಿಸುತ್ತಿರುವ ಸವಾಲುಗಳು, ಸಹಕಾರದ ಸಾಧ್ಯತೆ, ಜವಾಬ್ದಾರಿಗಳು, ಅನುಭವಗಳು ಇತ್ಯಾದಿಗಳನ್ನು ಚರ್ಚಿಸಲಾಯಿತು. ಹೆಚ್ಚಿನ ಸಂಯೋಜನೆ, ಸಹಕಾರ, ಮಾಹಿತಿ ಸುದ್ದಿ ಇತ್ಯಾದಿ ಹಂಚಿಕೊಳ್ಳುವ ಬಗ್ಗೆ ಒತ್ತು ನೀಡಲಾಯಿತು. ○

ಕೊನೆಗೂ ಹೊಸ ಸಂವಿಧಾನದತ್ತ ನೇಪಾಳ

ಸಂವಿಧಾನ ರಚನೆಯ ಗಡುವು ಮುಗಿಯುವ ಎರಡು ವಾರಗಳ ಮೊದಲು ನೇಪಾಳದ ರಾಜಕೀಯ ಪಕ್ಷಗಳು ಕೊನೆಗೂ ಹೊಸ ಸಂವಿಧಾನದ ಮುಖ್ಯ ಲಕ್ಷಣಗಳ ಬಗ್ಗೆ ಒಮ್ಮತಕ್ಕೆ ಬಂದಿವೆ. ಅಧ್ಯಕ್ಷೀಯ ಮತ್ತು ಪಾರ್ಲಿಮೆಂಟರಿ ವ್ಯವಸ್ಥೆಗಳ 'ಮಿಶ್ರ ಮಾದರಿ'ಗೆ ಎಲ್ಲಾ ಪಕ್ಷಗಳು ಒಪ್ಪಿವೆ. ಇದರ ಪ್ರಕಾರ ನೇರವಾಗಿ ಚುನಾಯಿತರಾದ ಅಧ್ಯಕ್ಷರು ಮತ್ತು ಪರೋಕ್ಷವಾಗಿ (ನೇರವಾಗಿ ಚುನಾಯಿತ ಪಾರ್ಲಿಮೆಂಟಿನಿಂದ) ಚುನಾಯಿತರಾದ ಪ್ರಧಾನ ಮಂತ್ರಿಗಳ ನಡುವೆ ಅಧಿಕಾರ ಹಂಚಿಕೆಯನ್ನು ವಿವರವಾಗಿ ಚರ್ಚಿಸಲಾಗುತ್ತಿದೆ ಮತ್ತು ಇನ್ನೂ ಸ್ವಲ್ಪ ಮಟ್ಟಿಗೆ ವಿವಾದಾಸ್ಪದವಾಗಿದೆ. ಮಾವೋವಾದಿಗಳು ಅಧ್ಯಕ್ಷೀಯ ವ್ಯವಸ್ಥೆ ಬಯಸಿದ್ದರೆ, ಯು.ಎಂ.ಎಲ್. ಕಮ್ಯುನಿಸ್ಟ್ ಪಕ್ಷ ಪಾರ್ಲಿಮೆಂಟರಿ ವ್ಯವಸ್ಥೆಯ ಪರವಾಗಿತ್ತು. ಈಗಿನ ಮಿಶ್ರ ಮಾದರಿ ಈ ಬಗ್ಗೆ ಎರಡು ಪಕ್ಷಗಳ ನಡುವೆ ನಡೆದ ಬಲವಾದ ಚೌಕಾಸಿಯ ಫಲ.

ಪಾರ್ಲಿಮೆಂಟು ಎರಡು ಸದನಗಳನ್ನು ಹೊಂದಿದ್ದು, ನೇಪಾಳದಲ್ಲಿ ಫೆಡರಲ್ ವ್ಯವಸ್ಥೆಯನ್ನು ಅಂಗೀಕರಿಸಿದೆ. ದೇಶವನ್ನು 11 ರಾಜ್ಯಗಳಾಗಿ ವಿಂಗಡಿಸಲಾಗಿದ್ದು, ಈ ರಾಜ್ಯಗಳ ಗಡಿ, ಹೆಸರು ಇತ್ಯಾದಿ ವಿವರಗಳನ್ನು ನಿರ್ಧರಿಸಲು ರಾಜ್ಯ ಪುನರ್ಸಂಘಟನಾ ಕಮಿಶನನ್ನು ರಚಿಸಲಾಗುವುದು. ರಾಜ್ಯ ರಚನೆಗೆ ಯಾವುದು ಆಧಾರವಾಗಿರಬೇಕು ಎಂಬುದು ತೀವ್ರ ವಿವಾದದ ವಿಷಯವಾಗಿತ್ತು. ಮಾಧೇಸಿ ಪಕ್ಷಗಳ ರಂಗಕ್ಕೆ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಇದ್ದು, ಕೊನೆಗೆ ಗಡುವು ಹತ್ತಿರವಾದ್ದರಿಂದ ಒಪ್ಪಂದಕ್ಕೆ ಬಂದಿದೆ. ಆದರೆ ಈ ರಂಗದಲ್ಲಿ ಇರದ ಇತರ ಸಣ್ಣ ಮಾಧೇಸಿ ಪಕ್ಷಗಳು ಈ ಬಗ್ಗೆ ಪ್ರತಿಭಟನೆಗೆ ಕರೆ ಕೊಟ್ಟಿವೆ.

ಇವೆಲ್ಲಾ ಇದ್ದಾಗ್ಯೂ, ಇನ್ನೊಂದು ಸಂವೈಧಾನಿಕ ಬಿಕ್ಕಟ್ಟಿಗೆ ಎಡೆ ಮಾಡಿಕೊಡದೆ ಮೇ ಕೊನೆಯ ಒಳಗೆ ಒಂದು ಸಂವಿಧಾನ ರಚಿಸಿ ಪ್ರಜಾಸತ್ತಾತ್ಮಕ ವ್ಯವಸ್ಥೆ ನೆಲೆಗೊಳಿಸಲು ಅನುವು ಮಾಡಿಕೊಡುವ ನೇಪಾಳದ ನಾಲ್ಕು ಪ್ರಮುಖ ರಾಜಕೀಯ ಶಕ್ತಿಗಳ ನಿರ್ಣಯ ಮಹತ್ವದ ಬೆಳವಣಿಗೆ. ಈ ನಾಲ್ಕು ರಾಜಕೀಯ ಶಕ್ತಿಗಳೆಂದರೆ - ಮಾವೋವಾದಿ, ಕಮ್ಯುನಿಸ್ಟ್, ಕಾಂಗ್ರೆಸ್ ಮತ್ತು ಮಾಧೇಸಿ.

ಉಡುಪಿ ಜಿಲ್ಲೆ : ನಿವೇಶನ ರಹಿತರ ಪ್ರತಿಭಟನೆ

ವರದಿ: ವೆಂಕಟೇಶ ಕೋಣಿ

ಗುಜ್ಜಾಡಿ:ನಿವೇಶನ ರಹಿತರ ಬೃಹತ್ ಸಮಾವೇಶ

ಸರಕಾರಿ ಭೂಮಿಯಲ್ಲಿ ಅನಧಿಕೃತ ಅತಿಕ್ರಮಣ ಮಾಡಿಕೊಂಡು ಕೃಷಿ ತೋಟ ಅಭಿವೃದ್ಧಿಪಡಿಸಿ ವಾಸವಾಗಿದ್ದ ಬಡ ರೈತ, ನಿವೇಶನ ರಹಿತರು ಅಕ್ರಮ – ಸಕ್ರಮೀಕರಣದ ಅನ್ವಯ ಹಕ್ಕು ಪತ್ರ ಪಡೆಯಲು, ಅರಣ್ಯ ಭೂಮಿ ಸಕ್ರಮ ಮನೆ ನಿವೇಶನಕ್ಕಾಗಿ, ಭೂ ಸ್ವಾಧೀನದ ವಿರುದ್ದ ಹಾಗೂ ಜನ ಹಾಗೂ ಜನಪರ ಭೂ ಸುಧಾರಣಾ ಕಾನೂನು ಜಾರಿಗಾಗಿ- ರೈತರು ಮತ್ತು ಕೃಷಿ ಕೂಲಿಕಾರರ "ಅನಿರ್ದಿಷ್ಟ ಮಹಾಧರಣಿ" ಮೇ 21 –2012 ಬೆಂಗಳೂರಿನಲ್ಲಿ ಜರಗುವುದರ ಹಿನ್ನಲೆಯಲ್ಲಿ ಗುಜ್ಜಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತ ಬಡ ಕುಟುಂಬದ ಅರ್ಜಿದಾರರ ಬೃಹತ್ ಸಮಾವೇಶವು ಗುಜ್ಜಾಡಿ –ನಾಯಕ್‌ವಾಡಿ ನಾರಾಯಣ ಗುರು ಸಭಾಭವನದಲ್ಲಿ ಯಶಸ್ವಿಯಾಗಿ ಜರಗಿತು.

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಯಾದವಶೆಟ್ಟಿ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ಮನೆ ನಿವೇಶನ ಹಕ್ಕುಪತ್ರಕ್ಕಾಗಿ ಗುಜ್ಜಾಡಿ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಸಲ್ಲಿಸಿದ ನಿವೇಶನ ಅರ್ಜಿಗಳನ್ನು ಈ ಕೂಡಲೇ ಪರಿಶೀಲಿಸಿ ನಿವೇಶನ ರಹಿತರ ಪಟ್ಟಿಯನ್ನು ಅಂತಿಮಗೊಳಿಸಬೇಕೆಂದು, ಬಡ ರೈತರಿಗೆ ಭೂಮಿ ಹಕ್ಕು ನೀಡಬೇಕೆಂದು ಆಗ್ರಹಿಸಿದರು

ನಿವೇಶನರಹಿತರ ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ರಾಜೀವ ಪಡುಕೋಣೆ, ಯು. ದಾಸ ಭಂಡಾರಿ, ಕರಿಯ ದೇವಾಡಿಗ, ವೆಂಕಟೇಶ ಕೋಣಿ, ಸಿ.ಐ.ಟಿ.ಯು ತಾಲೂಕು ಅಧ್ಯಕ್ಷ ಎಚ್. ನರಸಿಂಹ ಹಾಗೂ ಮಂಜುನಾಥ ಪೂಜಾರಿ ಉಪಸ್ಥಿತರಿದ್ದರು. ಸಮಾವೇಶದ ಅಧ್ಯಕ್ಷತೆ ಶ್ರೀನಿವಾಸ ಪೂಜಾರಿ ವಹಿಸಿದ್ದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಗುಜ್ಜಾಡಿ ಗ್ರಾಮ ಸಮಿತಿಯನ್ನು ಚುನಾಯಿಸಲಾಯಿತು. ಶೀನಿವಾಸ ಪೂಜಾರಿಅಧ್ಯಕ್ಷರಾಗಿ ಉದಯಕುಮಾರ ಕೆಳಾಕಳಿ ಕಾರ್ಯದರ್ಶಿಯಾಗಿ ಮತ್ತು ಸಮಿತಿ ಸದಸ್ಯರು ಸರ್ವಾನುಮತದಿಂದ ಆಯ್ಕೆಗೊಂಡರು.

ಕೊಟೇಶ್ವರ : ಮನೆ ನಿವೇಶನ ರಹಿತರ ಹಕ್ಕು ಪತ್ರಕ್ಕೆ ಆಗ್ರಹ

ಮೇ21 –ನಿವೇಶನರಹಿತರ ಬೆಂಗಳೂರು ಚಲೋ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ, ನಿವೇಶನ ರಹಿತರ ಹೋರಾಟ ಸಮಿತಿ ಕೊಟೇಶ್ವರ ಗ್ರಾಮ–ಇದರ ನೇತೃತ್ವದಲ್ಲಿ ನಿವೇಶನರಹಿತರು ಕೊಟೇಶ್ವರ ಗ್ರಾಮ ಪಂಚಾಯತ್ ಕಛೇರಿ ಮುತ್ತಿಗೆ ಹಾಕಿ ಮನೆ ನಿವೇಶನದ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿದರು. ಸ್ವಂತ ಭೂಮಿ ಇಲ್ಲದ, ಮನೆ ಇಲ್ಲದ ಬಾಡಿಗೆ ಮನೆಯಲ್ಲಿ ವಾಸವಾಗಿರುವ, ಒಂದೇ ಮನೆಯ ಸೂರಿನಡಿಯಲ್ಲಿ 2–3 ಕುಟುಂಬ ವಾಸವಾಗಿರುವ ಅನಿವಾರ್ಯತೆಯಲ್ಲಿದ್ದ ಬಡ ನಿವೇಶನರಹಿತರು ಮನೆ ನಿವೇಶನಕ್ಕಾಗಿ ಕಳೆದ ಹತ್ತಾರು ವರ್ಷಗಳಿಂದ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರೂ ಈ ತನಕ ಹಕ್ಕು ಪತ್ರ ಮಂಜೂರು ಮಾಡದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಯಾದವಶೆಟ್ಟಿ ಮನೆ ನಿವೇಶನ ರಹಿತರ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಕೊಟೇಶ್ವರ ಗ್ರಾಮ ಪಂಚಾಯತ್



ವ್ಯಾಪ್ತಿಯ ಮನೆ ನಿವೇಶನ ರಹಿತ 858 ಅರ್ಜಿದಾರರು ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಸಾಮೂಹಿಕ ಮನವಿ ಸಲ್ಲಿಸಿದರು.

ಕೊಟೇಶ್ವರ ಗ್ರಾಮ ಪಂಚಾಯತ್ ಕಛೇರಿ ಮುತ್ತಿಗೆ ಹೋರಾಟದಲ್ಲಿ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ರಾಜೀವ ಪಡುಕೋಣೆ, ಕರಿಯ ದೇವಾಡಿಗ, ಗೋವಿಂದ ಶೆಟ್ಟಿಗಾರ, ಜಯಲಕ್ಷ್ಮೀ, ಗೋಪಾಲ, ಒಪೀಲಿಯಾ, ಯು. ದಾಸ ಭಂಡಾರಿ, ಮಹಾಬಲ ವಡೇಯರ ಹೋಬಳಿ, ಕೆ. ಶಂಕರ್, ಎಚ್ ನರಸಿಂಹ ಉಪಸ್ಥಿತರಿದ್ದರು. ಕೂಲಿಕಾರರ ಸಂಘದ ಕಾರ್ಯದರ್ಶಿ ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು.

ಹಟ್ಟಿಯಂಗಡಿ : ನಿವೇಶನ ರಹಿತರಿಂದ ಹಕ್ಕು ಪತ್ರಕ್ಕೆ ಒತ್ತಾಯಿಸಿ ಪಂಚಾಯತ್ ಕಚೇರಿಗೆ ಮುತ್ತಿಗೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ, ನಿವೇಶನ ರಹಿತರ ಹೋರಾಟ ಸಮಿತಿ ಹಟ್ಟಿಯಂಗಡಿ ಇವರ ನೇತೃತ್ವದಲ್ಲಿ 15–05–2012 ಮನೆ, ನಿವೇಶನ .ರಹಿತರು ಹಕ್ಕು ಪತ್ರ ಕೋರಿ ಹಟ್ಟಿಯಂಗಡಿ ಗ್ರಾಮ ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿದರು. ಸ್ವಂತ ಮನೆ, ಭೂಮಿ ಇಲ್ಲದ ಬಡ ನಿವೇಶನ ರಹಿತರು, ಸರ್ಕಾರಿ ಸ್ಥಳದಲ್ಲಿ ವಾಸವಾಗಿರುವ ನಿವೇಶನ ರಹಿತರು ಈ ತನಕ ಹಕ್ಕು ಪತ್ರ ಹೊಂದದ ನಿವೇಶನ ರಹಿತರು, ಬಾಡಿಗೆ ಮನೆಯಲ್ಲಿ ವಾಸವಾಗಿರುವ ಒಂದೇ ಮನೆಯ ಸೂರಿನಡಿಯಲ್ಲಿ ಇರುವ 2–3 ಕುಟುಂಬದ ನಿವೇಶನ ರಹಿತರು ಹಟ್ಟಿಯಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ನಿವೇಶನ ಕೋರಿ ನಿವೇಶನ ರಹಿತ ಕುಟುಂಬ ಸಾಮೂಹಿಕವಾಗಿ ನಿವೇಶನ ಕೋರಿ ಹಟ್ಟಿಯಂಗಡಿ ಗ್ರಾಮ ಪಂಚಾಯತ್ ಅಧಿಕಾರಿ ಪ್ರಭಾಶಂಕರ್ ಪುರಾಣಿಕ ಇವರಿಗೆ 801 ಅರ್ಜಿಯನ್ನು ಸಲ್ಲಿಸಲಾಯಿತು.

ಕಾರ್ಮಿಕರ ಬೆಂಬಲ

ಸಿ.ಐ.ಟಿ.ಯು ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಕೆ. ಶಂಕರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮನೆ, ನಿವೇಶನ ರಹಿತರ ಭೂಮಿ ಹಕ್ಕಿನ ಹೋರಾಟಕ್ಕೆ ಕಾರ್ಮಿಕ ಸಂಘಟನೆಗಳ ಸೌಹಾರ್ದದ ಬೆಂಬಲ ವ್ಯಕ್ತಪಡಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ



ರಾಜೀವ ಪಡುಕೋಣೆ, ಯು.ದಾಸ ಭಂಡಾರಿ, ವೆಂಕಟೇಶ ಕೋಣಿ, ಬೀಡಿ ಕಾರ್ಮಿಕರ ಸಂಘದ ಮುಂಧಾಳು ಮಹಾಬಲ ವಡೇಯರ ಹೋಬಳಿ ಪಂಚಾಯತ್ ಸದಸ್ಯ ಸಂತೋಷ ಶೆಟ್ಟಿ ಸಬ್ಲಾಡಿ, ಕರ್ಕುಂಜೆ ಗ್ರಾಮ ಪಂಚಾಯತ್ ಅಧ್ಯಕ್ಷ ನಾರಾಯಣ ಮಡಿವಾಳ, ನಾಗರತ್ನ ಉಪಸ್ಥಿತರಿದ್ದರು. ಹಟ್ಟಿಯಂಗಡಿ ಗ್ರಾಮ ಪಂಚಾಯತ್ ಸದಸ್ಯರೂ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕರಾದ ರಾಜೀವ ಶೆಟ್ಟಿ, ಮುತ್ತಯ್ಯ ಕನ್ಯಾನ, ಅಶೋಕ ಹಟ್ಟಿಯಂಗಡಿ ಗೋಪಾಲ ಮಾವಿನಕೆರೆ ಇವರು ಗ್ರಾಮ ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಕೂಲಿಕಾರರ ಸಂಘದ ತ್ಹಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು.

ಭಾರತೀಯ ಸಂಸತ್ತು – 60

ಪುಟ 2 ರಿಂದ

ಪ್ರಕಾರ ಸಂಸತ್ತಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಬೇಕಾದ ರಾಜಕೀಯ ಪಕ್ಷಗಳು ಗಳಿಸಬೇಕಾಗುವುದು ನಿಗದಿತ ರಾಷ್ಟ್ರೀಯ ಮತದ ಕನಿಷ್ಠ ಶೇಕಡಾವಾರು. ಅವುಗಳು ಸಹಜವಾಗಿಯೇ ಗೆಲ್ಲುವ ವೈಯಕ್ತಿಕ ಅಭ್ಯರ್ಥಿಗಳ ಮೂಲಕವೇ ಪ್ರತಿನಿಧಿಸಲೂಬಹುದಾಗಿದೆ. ಸಮ್ಮಿಶ್ರಕೂಟಗಳ ಈ ಯುಗದಲ್ಲಿ ಇದು ಅನಗತ್ಯ ಒತ್ತಡಗಳು ಮತ್ತು ಬೇಡಿಕೆಗಳಿಂದ ಅಪಾರ ಪರಿಹಾರವನ್ನು ನೀಡುತ್ತದೆ.

ಅಂತಿಮವಾಗಿ, 'ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ' (ಇನ್‌ಕ್ಲೂಸಿವ್ ಗ್ರೋಶ್) ಬಗ್ಗೆ ಬಹಳಷ್ಟು ಮಾತುಗಳು ಕೇಳಿಬರುತ್ತಿದೆಯಾದರೂ ಆರ್ಥಿಕ ಸುಧಾರಣೆಯ ಕಳೆದ ಎರಡು ದಶಕಗಳಲ್ಲಿ ಎರಡು ಭಾರತ ನಿರ್ಮಾಣ ಆಗುತ್ತಿರುವುದಂತೂ ಕಟುಸತ್ಯ. ಆ ಪೈಕಿ ಒಂದು ಶ್ರೀಮಂತರ 'ಹೊಳೆಯುವ' ಭಾರತ ಹಾಗೂ ಬಡವರ 'ನರಳುವ' ಭಾರತ. ಈ ಸಂದರ್ಭದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪರಿಶೀಲನೆ ಹಾಗೂ ಸಂವಿಧಾನ ರಚನಾಸಭೆಯಿಂದ ಅಂತಿಮ ಅನುಮೋದನೆಗಾಗಿ ನಮ್ಮ ಸಂವಿಧಾನದ ಕರಡನ್ನು ಒಪ್ಪಿಸಿದಾಗ ಹೇಳಿದ್ದ ಕೆಳಗಿನ ಮಾತುಗಳನ್ನು ನೆನಪಿಸಿಕೊಳ್ಳುವುದು ಸೂಕ್ತ.

"1950 ಜನವರಿ 26ರಂದು ನಾವು ವಿರೋಧಾಭಾಸಗಳ ಒಂದು ಜೀವನವನ್ನು ಪ್ರವೇಶಿಸಲಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಹೊಂದಲಿದ್ದೇವೆ, 'ಒಬ್ಬ ವ್ಯಕ್ತಿ–ಒಂದು ಮತ ಹಾಗೂ ಒಂದು ಮತ–ಒಂದೇ ಮೌಲ್ಯ' ತತ್ವವನ್ನು ನಾವು ಮಾನ್ಯ ಮಾಡಲಿದ್ದೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಸ್ವರೂಪದ ಕಾರಣದಿಂದಾಗಿ 'ಒಬ್ಬ ಮನುಷ್ಯ–ಒಂದೇ ಮೌಲ್ಯ' ಸಿದ್ಧಾಂತವನ್ನು ನಿರಾಕರಿಸುವುದನ್ನು ಮುಂದುವರಿಸಲಿದ್ದೇವೆ.

"ಇಂಥ ವಿರೋಧಾಭಾಸಗಳ ಈ ಜೀವನವನ್ನು ನಾವು ಎಷ್ಟು ಕಾಲ ತಾನೇ ಮುಂದುವರಿಸಬಹುದು? ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಾವು ಸಮಾನತೆಯನ್ನು ಎಲ್ಲಿಯವರೆಗೆ ನಿರಾಕರಿಸಬಹುದು?

"ನಾವು ಅದನ್ನು ದೀರ್ಘ ಕಾಲದವರೆಗೆ ನಿರಾಕರಿಸುವುದನ್ನು ಮುಂದುವರಿಸಿದರೆ, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ನಾಶಗೊಳಿಸಿ ಮಾತ್ರವೇ ಹಾಗೆ ಮಾಡಬಹುದಾಗಿದೆ. ನಾವು ಸಾಧ್ಯವಾದಷ್ಟು ಬೇಗ ಈ ವಿರೋಧಾಭಾಸವನ್ನು ನಿವಾರಿಸಬೇಕಾಗಿದೆ, ಇಲ್ಲದಿದ್ದಲ್ಲಿ ಅಸಮಾನತೆಯಿಂದ ತೊಳಲಾಡುತ್ತಿರುವವರು ಈ ಸಂವಿಧಾನಸಭೆ ಕಷ್ಟಪಟ್ಟು ಕಟ್ಟಿದ ರಾಜಕೀಯ ಪ್ರಜಾಪ್ರಭುತ್ವದ ಸೌಧವನ್ನು ಧ್ವಂಸ ಮಾಡಲಿದ್ದಾರೆ" (1949 ನವೆಂಬರ್ 25)

ನಮ್ಮ ಜನತೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಸಬಲೀಕರಿಸುವ ಅಗತ್ಯ ಕಾನೂನುಗಳನ್ನು ನಮ್ಮ ಸಂಸತ್ತು ರಚನೆ ಮಾಡಬೇಕು. ಒಬ್ಬ ವ್ಯಕ್ತಿ–ಒಂದು ಮತ–ಒಂದೇ ಮೌಲ್ಯ ಸಿದ್ಧಾಂತ ಒಬ್ಬ ವ್ಯಕ್ತಿ–ಒಂದೇ ಮೌಲ್ಯವಾಗಿ ಪರಿವರ್ತನೆಗೊಳ್ಳಬೇಕು. ಈ ಮೇಲಿನ ಎಚ್ಚರಿಕೆಗೆ ಕಿವಿಗೊಡಲು ಈಗ ಕಾಲ ಕೂಡಿಬಂದಿದೆ.

ಕಾಲಕ್ಕೆ ಸರಿಯಾಗಿ ಸ್ಪಂದಿಸಿ ಒಂದು ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುವುದು ಈ ಕ್ಷಣದಲ್ಲಿ ಸಂಸತ್ತಿನ ಹಾಲಿ ಸದಸ್ಯರಾಗಿರುವ ನಮ್ಮೆಲ್ಲರ ಕರ್ತವ್ಯವಾಗಿದೆ.

RNI No. KARKAN /2006/17926 Posted on every Satuarday
JANASHAKTHI KANNADA VARA PATRIKE MAY 27, 2012 Price : Rs. 5/- Postal Reg. No. RNP/KA/BGS/2078/2010-12 Posted at MBC Bangalore GPO



"ಚುನಾವಣಾ ಸಮಯದಲ್ಲಿ ಎಸೆಯಲಾಗುವ ಚಿಕನ್ ಬಿರಿಯಾನಿ, ಮಟನ್ ಬಿರಿಯಾನಿ ಪೊಟ್ಟಣ ಹಿಡಿದುಕೊಳ್ಳಲು ಕಿತ್ತಾಡುವ ಸ್ಥಿತಿಗೆ ಯುವಜನರನ್ನು ತಳ್ಳಲಾಗಿದೆ"

– ತಪನ್ ಸಿನ್ಹಾ

ಡಿವೈಎಫ್ಐ 9ನೇ ರಾಷ್ಟ್ರ ಸಮ್ಮೇಳನದ ಲಾಂಛನ ಬಿಡುಗಡೆ

ಬೆಂಗಳೂರು ನಗರದಲ್ಲಿ ಸೆಪ್ಟಂಬರ್ 11 ರಿಂದ 15 ರವರೆಗೆ ನಡೆಯಲಿರುವ ಸಮ್ಮೇಳನ ಡಿ.ವೈ.ಎಫ್.ಐ. ಒಂಭತ್ತನೇ ಅಖಿಲ ಭಾರತ ಸಮ್ಮೇಳನದ ಲಾಂಛನ ಮತ್ತು ಘೋಷವಾಕ್ಯವನ್ನು ಮೇ 12, 2012 ರಂದು ಬಿಡುಗಡೆ ಮಾಡಲಾಯಿತು. ಬೆಂಗಳೂರಿನ ಹೋಟೆಲ್'ಜಿಯೋ'ದಲ್ಲಿ ನಡೆದ 'ಪತ್ರಿಕಾಗೋಷ್ಠಿಯಲ್ಲಿ ಲಾಂಛನ ಮತ್ತು 'ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತಿಕರಣ' ಎಂಬ ಘೋಷವಾಕ್ಯವನ್ನು ಡಿವೈಎಫ್ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸಿನ್ಹಾ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಪನ್ ಅವರು 1980 ರಲ್ಲಿ ಪಂಜಾಬಿನ ಲೂಧಿಯಾನಾದ ಪ್ರಥಮ ಸಮ್ಮೇಳನದ ಮೂಲಕ ಸ್ಥಾಪನೆಯಾದ ಡಿವೈಎಫ್ಐ ದೇಶವ್ಯಾಪ್ತಿ ಸುಮಾರು 1.65 ಕೋಟಿ ಸದಸ್ಯತ್ವ ಹೊಂದಿದ್ದು ದೇಶದ ಅತಿದೊಡ್ಡ ಯುವಜನ ಸಂಘಟನೆಯಾಗಿ ಮುನ್ನಡೆಯುತ್ತಿದೆ. ಸಮ್ಮೇಳನದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಆಯ್ಕೆಯಾದ ಒಂದು ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ವಿಶ್ವ ಪ್ರಜಾಸತ್ತಾತ್ಮಕ ಯುಜನ ಸಂಘಟನೆ(ಡಬ್ಲ್ಯುಎಫ್‌ಡಿವೈ) ನ ಸಂಚಾಲಕತ್ವ ಹೊಣೆಯನ್ನೂ ನಿರ್ವಹಿಸುತ್ತಿರುವ ಡಿವೈಎಫ್‌ಐನ ಸಮ್ಮೇಳನಕ್ಕೆ ಕ್ಯೂಬಾ, ವೆನಿಜುವೆಲಾ ಮುಂತಾದ ಲ್ಯಾಟಿನ್ ಅಮೆರಿಕನ್ ದೇಶಗಳಿಂದ, ಫ್ರಾನ್ಸ, ಗ್ರೀಸ್, ಹಂಗೇರಿ, ಪೋರ್ಚುಗಲ್ ಮುಂತಾದ ಯುರೋಪಿಯನ್ ದೇಶಗಳಿಂದ, ಅಮೆರಿಕ ಬ್ರಿಟನ್‌ಗಳಿಂದ, ಸಿರಿಯಾ, ಲೆಬನಾನ್ ಫ್ಯಾಲಿಸ್ಟೇನ್ ಮುಂತಾದ ಮಧ್ಯ ಪ್ರಾಚ್ಯ ದೇಶಗಳಿಂದ ನೆರೆಯ ಚೀನಾ, ಬಾಂಗ್ಲಾ ದೇಶ್‌ಗಳಲ್ಲದೆ ಸಮಾಜವಾದಿ ದೇಶಗಳಾದ ಉತ್ತರ ಕೊರಿಯ, ವಿಯಟ್ನಾಂ ಮುಂತಾದ ದೇಶಗಳಿಂದ ಹೀಗೆ ಜಗತ್ತಿನ ವಿವಿಧ ರಾಷ್ಟ್ರಗಳಿಂದ ಸುಮಾರು 100 ಯುವಜನ



ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಜಗತ್ತಿನಲ್ಲಿ ಅತಿ ಹೆಚ್ಚು ಯುವಜನತೆಯನ್ನು ಹೊಂದಿರುವ ಭಾರತದಲ್ಲಿ ಕೆಲವೇ ಯುವಜನರು ಮಾತ್ರ ಸಶಕ್ತರಾಗಿದ್ದಾರೆ. ದೇಶದ ಸ್ವಾತಂತ್ರ್ಯದ 60 ವರ್ಷಗಳ ನಂತರವೂ 40 ಕೋಟಿ ಜನರಿಗೆ ಆಹಾರದ ಭದ್ರತೆ ಇಲ್ಲ. 36 ಕೋಟಿ ಜನ ಅನಕ್ಷರಸ್ಥರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ 26 ಇದ್ದ ಅನಕ್ಷರಸ್ಥರ ಸಂಖ್ಯೆ ಆನಂತರದ ವರ್ಷಗಳಲ್ಲಿ 10 ಕೋಟಿಯಷ್ಟು ಹೆಚ್ಚಿದೆ. ಹಸಿವು ಮತ್ತು ಅಪೌಷ್ಟಿಕತೆಯಿಂದ ನರಳುತ್ತಿದ್ದು, ಅಶಕ್ತರಾಗಿದ್ದಾರೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 57 ಯುವ ಜನರಿದ್ದಾರೆ. ಇದರಲ್ಲಿ ಉದ್ಯೋಗಕ್ಕಾಗಿ ಹೆಸರು ನೋಂದಾಯಿಸಿರುವ 16.70 ಕೋಟಿ ನಿರುದ್ಯೋಗಿಗಳಿದ್ದಾರೆ, ದೇಶದ ಅಸಹಾಯಕ ಯುವಜನರನ್ನು ಚುನಾವಣೆಯ ಸಮಯದಲ್ಲಿ ಅಧಿಕಾರಶಾಹಿ ರಾಜಕೀಯ ಪಕ್ಷಗಳ ಏಜೆಂಟರು ತಾವು ಎಸೆಯುವ ಚಿಕನ್ ಬಿರಿಯಾನಿ ಪೊಟ್ಟಣ, ಮಟನ್ ಬಿರಿಯಾನಿ ಪೊಟ್ಟಣ ಹಿಡಿದುಕೊಳ್ಳಲು ಕಿತ್ತಾಡುವ ಸ್ಥಿತಿಗೆ ತಳ್ಳಿದ್ದಾರೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಶಿಕ್ಷಣ ಹಾಗೂ ಉದ್ಯೋಗ ಸೃಷ್ಠಿಗೆ ಹೆಚ್ಚಿನ ಒತ್ತು ನೀಡಬೇಕು. ಯುವಕರು ಜಾಗೃತರಾಗಿ ವೈವಿಧ್ಯಮಯ ಪ್ರಾಕೃತಿಕ ಸಂಪತ್ತನ್ನು ಸದ್ಬಳಕೆ ಮಾಡಿಕೊಂಡು ಭಾರತವನ್ನು ಸಶಕ್ತ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಬೇಕು. ಈ ನಿಟ್ಟಿನಲ್ಲಿ ಇರುವ ಅಡೆತಡೆಗಳ ಬಗೆಗೆ ಸಮ್ಮೇಳನ ಚರ್ಚಿಸಿ ಹೋರಾಟದ ರೂಪುರೇಷೆ ರೂಪಿಸಲಿದೆ ಎಂದರು. ಡಿವೈಎಫ್‌ಐನ ರಾಜ್ಯ ಅಧ್ಯಕ್ಷ ಎನ್.ಎಲ್. ಭರತ್‌ರಾಜ್, ಪ್ರಧಾನ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ, ಡಿವೈಎಫ್‌ಐನ ಮಾಜಿ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕವನ
ನನ್ನ ಅವತಾರ

ಮತ್ತ ಬರ್ತೀನಂತ ಕೈಕೊಟ್ಟ
ಹೋದೆಲ್ಲೋ ಕಿಟ್ಟೂ,
ಬಾರೋ ಈಗ ಅಂಜಬುರಕಾ
ಯಾಕ ಕಲ್ಲಾಗೀದಿ?

ಅಲ್ಲೋ, ಹನಿ ಹಾಲಿಲ್ಲದ ಸತ್ತ
ಮಕ್ಕಳ ಹೆಣದ ಮ್ಯಾಲ್ನಿಂತು
ಕ್ಷೀರಾಭಿಷೇಕಾ ಕೇಳ್ತೀಯಲ್ಲೋ
ನಾಚಿಗ್ಗೇಡಿ!

ಕೊಡೋ ಮಗನ ನಿನ್ನ ಪೀತಾಂಬರದ
ಚೂರು, ಬತ್ತಲೆ ನಡಗವಗ?
ಹಾಕೋ ನೋಡೂನು ಕ್ಷೀರಸಾಗರದ
ಒಂದು ಲೋಟ ಹಾಲು
ಉಪಾಸ ಸಾಯವಗ?

ಕೊಲೀಸುಲಿಗೀಗಿ ಕಣ್ಣ ಮುಚ್ಚಿದ
ಹೇಡಿ ಆಗಿಯಲ್ಲೋ ಖೋಡಿ,
ಹೊಲಸ ತಿನ್ನೋ ಹೀನರ
ಜೋಡಿ ಪಾಲಾ ಕೂಡಿ,
ಬಂಗಾರ ಮೀಸಿ ಹಾಕೋತೇನೋ ಭಡವಾ
ನಿನಗ್ಯಾಕೋ ಮೀಸಿ
ಹುಡಿಗ್ಯಾರ ಸೀರಿ ಕದ್ದ ಹೇಸಿ

ನಿನಗೆ ನಾಕ ನಾಕ ಕೈ
ಇರೂದು ನಿನ್ನ ದೇವೀ...
ಮಕಮಲ್ಲಿನ ಮೈ ಬಳಸಿ
ಹಾಡಾಕಲ್ಲಪಾ ಮಾಮಾ,

ಫೆತ್ತೋ ಬಿದ್ದವ್ರನ್ನ
ಒತ್ತೋ ತುಳದವ್ರನ್ನ
ಗಂಡಸಾಗಿದ್ರೆ !!

ಕಾಗೀ ಕೈಯಾಗ ಕಛೇರಿ
ಕೊಟ್ಟಂಗಾಗೇತಿ ನಿನಗ
ಒಂದೇ ಒಂದಿನಾ ಛಾರ್ಜ
ಕೊಟ್ಟು ನೋಡೋ ನನಗ,

ನಲ್ಲಿಯೊಳಗೆಲ್ಲಾ ಹಾಲ ಸುರಿಸಿ.
ನೆಲಕ್ಕೆಲ್ಲಾ ಪೀತಾಂಬರಾ ಹಾಸ್ತೀನಿ
ಈ ಚಂಡಾಲರ್ನೆಲ್ಲಾ ಚಂಡಾಡಿ
ರುಂಡ ಮಾಲಿ ಹಾಕ್ಕೊಂಡು
ಕುಣೀತೀನಿ,

ಎಣಿಸೆಣಿಸಿ ಹಲ್ಲು ಮುರದು
ನತ್ತ ಮಾಡಿ ಹಾಕೋತೀನೀ
ಹೊಟ್ಟಿ ಹರದು ಕಳ್ಳ ಓರದು
ಬಳೀ ಮಾಡಿ ಇಟಗೋತೀನೀ

ಆ ಮ್ಯಾಲೆ, ಆ ಮ್ಯಾಲೆ, ಆ ಮ್ಯಾಲೆ
ನಿನ್ನೂ ಒಂದ ಕೈ
ನೋಡೇ ಬಿಡ್ತಿನಿ

■ ಶಶಿಕಲಾ ವೀರಯ್ಯಸ್ವಾಮಿ

(ಬೆಂಗಳೂರು ವಿಶ್ವ ವಿದ್ಯಾಲಯದ ಪ್ರಥಮ ಬಿ.ಎ. ಪಠ್ಯವಾಗಿರುವ ಈ ಕವನಕ್ಕೆ ಎಬಿವಿಪಿ ಮುಂತಾದ ಕೇಸರಿ ಪಡೆ ಇತ್ತೀಚಿಗೆ ವಿರೋಧ ತೋರಿತ್ತು. ಹಾಲಿಲ್ಲದೇ ಹಸಿದ ಕಂದಮ್ಮಗಳ ಪರ ದನಿ ಎತ್ತುವ ಈ ಕವನದ ಬಗೆಗೆ ಸಂಘ ಪರಿವಾರದ ಜನಕ್ಕೆ ಅದ್ಯಾಕೆ ಅಷ್ಟೊಂದು ಸಿಟ್ಟೋ ?)

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH